
ಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ


ಸಂಪುಟ 26 ಸಂಚಿಕೆ 7 ಫೆಬ್ರವರಿ 15, 2004 ಬೆಲೆ ರೂ. 3.00





ವಾಜಪೇಯಿ ಸರ್ಕಾರದ ಹಾದಿ ತಪ್ಪಿಸುವ ಬಜೆಟ್

ಮತದಾರರಿಗೆ ಮೋಡಿ ಕೃಷ್ಣ ಗಾರುಡಿ?!



ಬಿಜೆಪಿ ತೊಲಗಿಸಲು ಸಕಾಲ

- ಬಿಜೆಪಿಗೆ ಬಹುಮತ ಎಲ್ಲಿಂದ ?
- ಎಡ ಪಕ್ಷಗಳು ಹಾಗೂ ಸಾಮಾಜಿಕ ಚಳುವಳಿಗಳು
- ಜಡ ಸಂಸ್ಕೃತಿ ವಿರುದ್ಧ ಚೈತನ್ಯ ಸಂಸ್ಕೃತಿ
- ಕ್ಯೂಬನ್ ಕ್ರಾಂತಿ ಎಂದೂ ಸೋಲದು





ಅಮೇರಿಕದ ಪ್ರಸಿದ್ಧ ಪತ್ರಕರ್ತೆ ಮಾರ್ಗರೇಟ್ ಬರ್ಕ್‌ವೈಟ್ ರವರ 'ಬರ್ಕ್‌ವೈಟ್ ಕಂಡ ಭಾರತ'ದ ಕೃತಿಯಿಂದ ಆಯ್ದ ಮಹತ್ವದ ಬರಹವನ್ನು ಈಗಾಗಲೇ ಓದುತ್ತಾ ಬಂದಿದ್ದೀರಿ. ದಕ್ಷಿಣ ಭಾರತದಲ್ಲಿನ ಭೀಕರ ಬರದ ಕುರಿತು ಆಯ್ದ ಬರಹವಿಲ್ಲಿದೆ.

ಅನುವಾದಕ್ಕೆ ಒತ್ತಾಸೆ ಪಿ.ಲಂಕೇಶ್
ಕನ್ನಡಕ್ಕೆ ಅನುವಾದ ಖ್ಯಾತ ಜಾನಪದ ತಜ್ಞೆ, ಲೇಖಕಿ ಡಾ. ಕೆ.ಆರ್.ಸಂಧ್ಯಾರೆಡ್ಡಿಯವರು

ದಕ್ಷಿಣ ಭಾರತದಲ್ಲಿ ಬರಗಾಲ

ಮೈಸೂರಿನ ರೈತ ಸಣ್ಣಲಿಂಗಪ್ಪ ಹೇಳಿದ "ನಮ್ಮನ್ನು ಗುಂಡಿಟ್ಟು ಕೊಲ್ಲಿ, ಇಲ್ಲದಿದ್ದರೆ ವಿಷ ಕೊಡಿ. ನಮಗೆ ಸಂತೋಷ ನನ್ನ ಮಕ್ಕಳಿಗೂ ನನ್ನ ಕಣ್ಣಮುಂದೇ ವಿಷ ಕೊಟ್ಟರೆ ನಿಶ್ಚಿಂತೆಯಿಂದ ಸಾಯುತ್ತೇನೆ. "ಆತ ತನ್ನ ವಿಶಿಷ್ಟ ಕನ್ನಡದಲ್ಲಿ ಹೇಳಿದ ಮಾತುಗಳನ್ನು ಸ್ಕೂಲ್ ಮಾಸ್ಟರ್ ಶಂಕರ್ ನನಗೆ ಅನುವಾದಿಸಿ ಹೇಳಿದ. ಭಾಷಾಂತರಿಸಲು ಶಂಕರ್ ತುಂಬಾ ಪ್ರಯಾಸ ಪಡುತ್ತಿದ್ದ. ಆತನ ಭಾಷೆಯಲ್ಲಿ ರೈತರ ಸಂಕಷ್ಟಗಳು ಅಷ್ಟೇ ದಾರುಣವಾಗಿದ್ದವು. ಬರಗಾಲಕ್ಕೆ ಸಿಕ್ಕಿ ಈ ಹಳ್ಳಿ ಪ್ರದೇಶಗಳು ಬಳಲಿ ಬೆಂಡಾಗಿದ್ದವು. ಕಲ್ಲಹಳ್ಳಿ ಎಂಬ ಸಣ್ಣ ಹಳ್ಳಿಯಲ್ಲಿ ಸಣ್ಣ ಲಿಂಗಪ್ಪನೇ ಶ್ರೀಮಂತ ರೈತ. ತಮ್ಮ ಭೂಮಿ, ಆಸ್ತಿಪಾಸ್ತಿಗಳನ್ನು ಬಿಟ್ಟು ಹೋಗಲಾರದ ಶ್ರೀಮಂತರು ಮತ್ತು ಓಡಾಡುವುದಕ್ಕೂ ತ್ರಾಣವಿಲ್ಲದಷ್ಟು ನಿಶ್ಯಕ್ತರಾಗಿದ್ದ ಬಡವರನ್ನು ಬಿಟ್ಟರೆ ಬಹುತೇಕ ಮಂದಿ ಊರನ್ನು ತೊರೆದು ಹೋಗಿದ್ದರು. ಬರಗಾಲಕ್ಕೆ ಹೆದರಿದ ಜನ ತಮಗೆ ಎಲ್ಲಿ ಕೆಲಸ ಮತ್ತು ಆಹಾರ ಸಿಗುತ್ತದೋ ಅಂತಹ "ಸಮೃದ ನಾಡನ್ನು" ಹುಡುಕಿಕೊಂಡು ಹೋಗಿದ್ದರು.

ಬರಗಾಲದ ಸಮಯದಲ್ಲಿ ಮೊದಲು ಹಳ್ಳಿಬಿಟ್ಟು ಹೊರಡುವ ಜನರೆಂದರೆ ಯುವಕರು. ಅವರೆಲ್ಲ ಒಬ್ಬೊಬ್ಬರಾಗಿ ಊರುಬಿಟ್ಟು ಹೋಗುತ್ತಿದ್ದಂತೆ ಕುಟುಂಬಗಳು ಛಿದ್ರವಾಗಿದ್ದವು. ಕಳೆದ ವರ್ಷದ ಸುಗ್ಗಿಯಲ್ಲಿ ಸಂಗ್ರಹಿಸಿದ ಧಾನ್ಯ ಮುಗಿದ ನಂತರ ಮತ್ತು ಇನ್ನು ಸಾಲ ಸಿಗುವುದು ಸಾಧ್ಯವೇ ಇಲ್ಲ ಎಂಬಷ್ಟು ಸಾಲಸೋಲದ ನಂತರ ಇದ್ದುಬದ್ದುದನ್ನೆಲ್ಲ ಬಂದಷ್ಟಕ್ಕೆ ಆರಿದ ಜನರೂ ಕೂಡ ಒಬ್ಬೊಬ್ಬರಾಗಿ ಊರು ಬಿಡತೊಡಗಿದರು. ಹೀಗೆ ಅವರ ಸಂಖ್ಯೆ ಹೆಚ್ಚುತ್ತಲೇ ಇತ್ತು. ಚಿತ್ರದುರ್ಗದಿಂದ ಕಲ್ಲಹಳ್ಳಿಗೆ ಹೋಗುವ ಮಾರ್ಗದಲ್ಲಿ ನಾವು ಇಂತಹ ಅನೇಕ ಗುಂಪುಗಳನ್ನು ನೋಡಿದೆವು.

ಸಣ್ಣಲಿಂಗಪ್ಪನ ಮುಂದಿದ್ದ ಪರಿಸ್ಥಿತಿ ಇನ್ನೂ ಕಠಿಣ. ಆತ ಊರನ್ನು ಬಿಟ್ಟು ಹೋಗುವ ಬಗ್ಗೆ ಇನ್ನೂ ನಿರ್ಧಾರ ಮಾಡಿರಲಿಲ್ಲ. ಆತನಿಗೆ 35 ಎಕರೆಯಷ್ಟು ಕಪ್ಪುಮಣ್ಣಿನ ಭೂಮಿಯಿತ್ತು. ಅದರಲ್ಲಿ ಹತ್ತಿ, ಗೋಧಿ, ರಾಗಿ ಬೆಳೆಯುತ್ತಿದ್ದ. ಬೆಳೆದಿದ್ದನ್ನು ಮಾರಿ ಒಂದಿಷ್ಟು ಲಾಭವನ್ನೂ ಗಳಿಸುತ್ತಿದ್ದ. ಜನರಿಗೆ ಕೂಲಿಕೊಟ್ಟು ಹೊಲದ ಕೆಲಸ ಮಾಡಿಸುತ್ತಿದ್ದ. ಇಂಥ ಸಣ್ಣಲಿಂಗಪ್ಪ ಈಗ ತನ್ನ ಮನೆಯಲ್ಲಿ ಚಿಂತಾಕ್ರಾಂತನಾಗಿ ನಿಂತಿದ್ದ. ಸೊರಗಿ ಕೃಶವಾಗಿದ್ದ ಅವನ ಮಂದಿಯೆಲ್ಲ ನೆಲದ ಮೇಲೆ ಸುಮ್ಮನೆ ಕೂತಿದ್ದರು. ಶತಮಾನಗಳ ಕಾಲದಿಂದ ಪೂರ್ವಿಕರು ನೆಲೆಸಿದ್ದ ಆ ಮನೆಯನ್ನು ಬಿಟ್ಟು ಹೋಗುವುದು ಅವರಿಗೆ ಸುಲಭದ ಮಾತಲ್ಲ.



ರೈತರಿಗೆ ಅವರ ರೇಶನ್‌ಕಾರ್ಡುಗಳ ಪ್ರಕಾರ ಮಾರಾಟ ಮಾಡಬೇಕು ಎಂದು ಕಳಿಸಲಾಗಿದ್ದ ಪರಿತರಗಳು ಕಾಳಸಂತೆಕೋರರ ಉಗ್ರಾಣವುಳಿಗೆಗಳನ್ನು ಸೇರಿದ್ದವು. ನಡೆಯುವುದಕ್ಕೂ ಆಗದಷ್ಟು ನಿತ್ರಾಣನಾಗಿದ್ದ ರೈತ ಕಾರ್ಡು ಹಿಡಿದು ಮೈಲುಗಟ್ಟಲೆ ನಡೆದು ಸಮೀಪದ ರೇಶನ್ ಶಾಪಿಗೆ ಹೋಗುತ್ತಿದ್ದ. ಅಲ್ಲಿ ಅವನಿಗೆ ಸಿಗುತ್ತಿದ್ದು ತಿನ್ನಲು ಯೋಗ್ಯವಲ್ಲದ ಹುಳುಬಿದ್ದ ಧಾನ್ಯ. ಸಣ್ಣಲಿಂಗಪ್ಪ ಮತ್ತವನ ಸೋದರರು ಕುಟುಂಬದ ಜನರ ಆಹಾರಕ್ಕಾಗಿ ಎಲ್ಲೆಲ್ಲೊ ಅಲೆದಾಡಿ "ಹುಣಿಸೇ ಬೀಜಗಳನ್ನು ಸಂಗ್ರಹಿಸಿ ತರುತ್ತಿದ್ದರು. ಇದು ದಿನನಿತ್ಯದ ಅವರ ಕೆಲಸವಾಗಿಬಿಟ್ಟಿತ್ತು. "ಹುಣಿಸೆ ಬೀಜ ಒಳ್ಳೆಯದಲ್ಲ. ಅದನ್ನು ತಿನ್ನುವುದು ಕಷ್ಟ" ಎಂದು ಹೇಳುವಾಗ ಸಾಮಾನ್ಯವಾಗಿ ಎಲ್ಲ ಭಾರತೀಯರಂತೆಯೇ ಸಣ್ಣಲಿಂಗಪ್ಪ ದುಃಖಾವೇಶಕ್ಕೊಳಗಾಗಿದ್ದ. "ನನ್ನ ಮಕ್ಕಳ ಸಂಕಟ ನೋಡಲಾರೆ. ನಮಗೆ ವಿಷ ಕೊಟ್ಟುಬಿಡಿ" ಎಂದು ಕಣ್ಣೀರು ಹಾಕಿದ.

ಹೀಗೆ ಮಾತಾಡುತ್ತಾ ನಾವು ದೊಡ್ಡ ದೊಡ್ಡ ಕಲ್ಲುಗಳ ಅಡ್ಡಗೋಡೆಯನ್ನು ಬಳಸಿಕೊಂಡು ಮುಂದೆ ಹೋದಾಗ ಅಲ್ಲಿ ಒಂದಿಷ್ಟು ಗುಡಿಸಲುಗಳು ಕಂಡವು. ಈ ಬೇಧ ಭಾವವನ್ನು ನಾವು ಕೊನೆಗೊಳಿಸಬೇಕು ಎಂದು ಕೆರಳಿದ ದನಿಯಲ್ಲಿ ಹೇಳಿದ ಶಂಕರ್. ಇಲ್ಲಿ ನಮ್ಮ ಮುಂದೆ ಕಾಣುತ್ತಿರುವುದು ಈ ಗ್ರಾಮದ ಅಸ್ಪೃಶ್ಯ ಜನರಿರುವ ಭಾಗ ಎಂದು ಹೇಳಿದ ಶಂಕರ್. ಅಸ್ಪೃಶ್ಯರವು ಹುಲ್ಲಿನ ಚಾಪೆ ಹೊದಿಸಿದ ತಗ್ಗುಮಾಡಿದ ಗುಡಿಸಲುಗಳು. ಅದರೊಳಕ್ಕೆ ಹೋಗುವವರು ಮೊಣಕಾಲು ಬಗ್ಗಿಸಿ ಒಳಗೆ ತೂರಿಕೊಂಡು ಹೋಗಬೇಕಾಗಿತ್ತು. ಈ ಪುಟ್ಟ ಗೂಡುಗಳೊಳಗೆ ಅವರು ಬಗ್ಗಿಕೊಂಡೇ ಓಡಾಡಬೇಕಾಗುತ್ತಿತ್ತು. "ನೋಡಿ, ಅವರು ಎಷ್ಟು ಸುರಕ್ಷಿತವಾಗಿ ಅಸ್ಪೃಷ್ಯರನ್ನು ದೂರ ಇಟ್ಟಿದ್ದಾರೆ" ಎಂದ ಶಂಕರ್. ಅಸ್ಪೃಶ್ಯ ಜನರ ಸ್ಥಿತಿ ಇನ್ನೂ ದಾರುಣವಾಗಿತ್ತು. ಒಂದು ಚಿಕ್ಕಮಗು ಖಾಲಿಪಾತ್ರೆ ಹಿಡಿದು ಹಸಿವಿನಿಂದ ಅಳುತ್ತಿದ್ದನ್ನು ಬಿಟ್ಟರೆ ಉಳಿದ ಯಾರಿಗೂ ದನಿ ಎತ್ತುವ ಮನಸ್ಸಾಗಲಿ, ಶಕ್ತಿಯಾಗಲೀ ಇದ್ದಂತಿರಲಿಲ್ಲ. ಅಲ್ಲಿನ ಜನ ಎಲ್ಲವನ್ನೂ ಪರಿತ್ಯಾಗ ಮಾಡಿದವರಂತೆ ನಿತ್ರಾಣವಾಗಿ ಮಾತಿಲ್ಲದೆ ನಿಂತಿದ್ದರು, ಕೂತಿದ್ದರು. ಅವರನ್ನು ನೋಡುವಾಗ ಮೂವತ್ತರ ದಶಕದ ಮಧ್ಯಭಾಗದಲಲಿ ಅಮೇರಿಕಾದ ಮಹಾಕ್ಷಾಮ ಕಾಲದಲ್ಲಿ ಬಡಕಲು ದನಗಳು ತಮ್ಮ ಕೊನೆಗಾಲಕ್ಕಾಗಿ ಕಾಯುತ್ತಾ ಸುಮ್ಮನೆ ನಿಂತಿರುವ ದೃಶ್ಯದ ನೆನಪಾಯಿತು. ಈ ಜನರೂ ಸಹ ಆ ದನಗಳಷ್ಟೇ ಅಸಹಾಯಕರಾಗಿ, ಪ್ರತಿಭಟನಾರಹಿತವಾಗಿ ತಮ್ಮ ಕೊನೆಯನ್ನು ಕಾಯುತ್ತಾ ಕೂತಿದ್ದರು. ಒಬ್ಬ ಮುದುಕ, ಗುಡಿಸಲಿನ ಹೊರೆ ಒಂದು ಅಗಲ ಎಲೆಗಳ ಸಸ್ಯವನ್ನು ನಿಶ್ಯಕ್ತವಾದ ಕೈಗಳಿಂದ ನಿಧಾನವಾಗಿ ಕುಟ್ಟುತ್ತ ಕೂತಿದ್ದ. "ಅವರು ಆ ಗಿಡವನ್ನು ತಿನ್ನುತ್ತಾರೆ. ಇನ್ನು ಮುಂದೆ ಅದೂ ಸಿಗುವುದಿಲ್ಲ" ಎಂದ ಶಂಕರ್.

ಭಾರತದಲ್ಲಿ ರೈತನನ್ನು ಎಲ್ಲ ಕಾಲದಲ್ಲಿಯೂ ಹೀಗೆ ಕಡೆಗಣಿಸಿರಲಿಲ್ಲ. ಮಧ್ಯಯುಗದ ಮೊಘಲ್ ಚಕ್ರವರ್ತಿಗಳ ಕಾಲದಲ್ಲಿ ರೈತ, ಸಮಾಜದ ಅವಿಭಾಜಿಯ ಅಂಗವಾಗಿದ್ದ ಫ್ಯೂಡಲ್ ವ್ಯವಸ್ಥೆಯಲ್ಲಿ ಅನೇಕ ರೀತಿಯ ದೌರ್ಜನ್ಯಗಳಿದ್ದರೂ ರೈತನಿಗೆ ತಕ್ಕ ಮನ್ನಣೆಯೂ ಇತ್ತು. ಅವನಿಗೆ ನ್ಯಾಯ ಒದಹಿಸಬೇಕೆಂಬ ಕಾಳಜಿ ಇತ್ತು. ಬೆಳೆಯ ಭಾಗವನ್ನು ವಸೂಲು ಮಾಡಿಕೊಳ್ಳುವಾಗ ಅವರೊಂದಿಗೆ ಹುಷಾರಾಗಿ ವರ್ತಿಸಬೇಕು, ನ್ಯಾಯಸಮ್ಮತವಾಗಿ ನಡೆದುಕೊಳ್ಳಬೇಕು ಎಂದು ರೆವಿನ್ಯೂ ಅಧಿಕಾರಿಗಳಿಗೆ ಸೂಚನೆ ಇರುತ್ತಿತ್ತು. ರೈತನಿಂದ ನ್ಯಾಯವಾದ್ದಕ್ಕಿಂತ ಹೆಚ್ಚಿನ ವಸೂಲಿ ಮಾಡಿದರೆ ಅದು ರೈತನಿಗೆ ಮಾತ್ರವಲ್ಲ ರಾಜ್ಯಕ್ಕೂ ಅನ್ಯಾಯ ಎಂಬ ಸೂಚನೆಯನ್ನು ವಸೂಲಿಗಾರರಿಗೆ ಕೊಡುತ್ತಿದ್ದರು. ಆದರೆ ಸುಮಾರು 150 ವರ್ಷಗಳ ಹಿಂದೆ ಬ್ರಿಟೀಷರು ಭಾರತಕ್ಕೆ ಕಾಲಿಟ್ಟ ನಂತರ ಕಂದಾಯ ವಸೂಲಿಗಾರರು ಅಥವಾ ಜಮೀನುದಾರರಿಗೆ ನಿರಂಕುಶ ಅಧಿಕಾರ ಪ್ರಾಪ್ತವಾಯಿತು. ಭಾರತವನ್ನು ವ್ಯಾಪಿಸಿಕೊಂಡ ಬ್ರಿಟಿಷ್ ವ್ಯಾಪಾರಿಗಳಿಗೆ ಬೆಳೆ ಬೆಳೆಯುವ ರೈತ ಮುಖ್ಯವಾಗಿರಲಿಲ್ಲ. ಈ ಬೆಳೆಯ ಬಹುಪಾಲನ್ನು ತೆರಿಗೆಯಾಗಿ ವಸೂಲಿ ಮಾಡಿಕೊಡುವ ಜಮೀನ್ದಾರ ಮುಖ್ಯವಾಗಿದ್ದ.

ಕೆಲವು ಜಮೀನುದಾರರು ಮೊದಲೇ ಫ್ಯೂಡಲ್ ದೊರೆಗಳಾಗಿದ್ದವರೆ. ಇನ್ನೂ ಕೆಲವರು ಕೇವಲ ತೆರಿಗೆಯನ್ನು ಮಾತ್ರ ವಸೂಲಿ ಮಾಡುತ್ತಿದ್ದು ಈ ಸೇವೆಗೆ ಪ್ರತಿಯಾಗಿ ಅವರಿಗೆ ಜಮೀನನ್ನು ಕೊಡಲಾಗುತ್ತಿತ್ತು. ಒಟ್ಟಿನಲ್ಲಿ ಅವರ ಮೂಲವೇನೇ ಇರಲಿ 1793 ರ ಖಾಯಂ ಭೂ ಒಪ್ಪಂದದ ಅನ್ವಯ ಜಮೀನುದಾರರು ಮತ್ತು ಅವರ ಸಂತತಿಯವರು ಒಂದು ಖಾಂ ಭೂಮಾಲೀಕ ವರ್ಗವಾಗಿ ರೂಪುಗೊಂಡರು.

ಫ್ಯೂಡಲ್ ಮಾಲೀಕ ವ್ಯವಸ್ಥೆ ಖಾಯಂ ಆಗಿ ನೆಲೆಗೊಂಡುದಕ್ಕೆ ಸಮಾನಾಂತರವಾಗಿ ಭಾರತೀಯ ಕೈಗಾರಿಕಾ ವ್ಯವಸಥೆ ಬೆಳೆಯಲಿಲ್ಲ. ಅದನ್ನು ಉದ್ದೇಶಪೂರ್ವಕವಾಗೇ ಹತ್ತಿಕ್ಕಲಾಯಿತು. ಇಲ್ಲಿನ ಜವಳಿ ಉತ್ಪಾದನೆ, ಕಬ್ಬಿಳ ಕೆಲಸ, ಕರಕುಶಲ ಕಲೆ, ಕೈಕಸುಬುಗಳೆಲ್ಲ ಈ ವ್ಯವಸ್ಥೆಯಲ್ಲಿ ನಶಿಸಿಹೋದವು. ಕಸುಬುದಾರಿಕೆಯ ಜನ ಹಳ್ಳಿಗಳಿಗೆ ಹೋದಾಗ ಕೃಷಿಭೂಮಿಯ ಮೇಲಿನ ಒತ್ತಡ ಹೆಚ್ಚಿತು. ರೈತ ಜನ ಇನ್ನಷ್ಟು ಬಡವರಾದರು. ಪಾಶ್ಚಾತ್ಯ ಜಗತ್ತಿನಲ್ಲಿ ಕೈಗಾರಿಕಾ ಕ್ರಾಂತಿಯಿಂದ ಪ್ರಗತಿಯಾದಾಗ ಅದರ ಜೊತೆ ಜೊತೆಗೇ ಕೃಷಿ ಕ್ಷೇತ್ರದಲ್ಲೂ ಸುಧಾರಣೆಗಳಾದವು. ಮಾನವನ ಹಕ್ಕುಗಳು ಹೆಚ್ಚಾದವು. ಆದರೆ ಭಾರತದಲ್ಲಿ ರೈತನನ್ನು ಸಂಪೂರ್ಣ ಕಡೆಗಣಿಸಲಾಯಿತು.

ಬಹಳ ಕಾಲದ ನಂತರ ಸ್ವಾತಂತ್ರ್ಯ ಬಂದ ಮೇಲೂ ಈ ದೇಶದ ಕೋಟ್ಯಾಂತರ ಜನರ ಪಾಲಿಗೆ ಸ್ವಾತಂತ್ರ್ಯದಿಂದ ಯಾವ ಸಹಾಯವೂ ಆಗಿಲ್ಲ. ಅಷ್ಟೆ ಅಲ್ಲ ಜಮೀನ್ದಾರಿ ವ್ಯವಸ್ಥೆಯ ಅಡಿಲ್ಲಿ ಅವರ ಸ್ಥಿತಿ ಇನ್ನಷ್ಟು ಅಧೋಗತಿಗಿಳಿದಿವೆ.

ಇದೇ ಸಂದರ್ಭದಲ್ಲಿ ಭಾರತದಲ್ಲಿ 2/3 ರಷ್ಟು ಜನ ಭೂರಹಿತರಿದ್ದಾರೆ. ಸಂಪೂರ್ಣ ಜೀತದಲ್ಲಿಯೇ ಅವರ ಬದುಕು ಸಾಗುತ್ತದೆ. ಆದರೆ ದೇಶದ ಅನೇಕ ಭಾಗಗಳಲ್ಲಿ ಜಮೀನ್ದಾರರ ಜೀವನಮಟ್ಟ ಮಾತ್ರ ಶತಮಾನಗಳ ಹಿಂದೆ ಹೇಗೆ ಇತ್ತೋ ಹಾಗೆ ಮುಂದುವರೆದಿದೆ. ಜಮೀನುದಾರರು ಕೊಯ್ಲಿನಲ್ಲಿ ಅರ್ಧದಷ್ಟನ್ನು ಪಡೆದುಕೊಳ್ಳುತ್ತಾರೆ. ಕೊಯ್ಲಿನ ಕಾಲದಲ್ಲಿ ಕೆಲವು ಹೊಂದಾಣಿಕೆಗಳನ್ನು ಮಾಡಿದರೆ ಅವರ ಪಾಲು ಶೇ.85 ಗೆ ಏರುತ್ತದೆ. ಅವರು ರೈತರಿಗೆ ಕೃಷಿ ಸಾಧನಗಳನ್ನು ಒದಗಿಸುವುದಿಲ್ಲ. ರೈತನ

ಪುಟ 10 ಕ್ಕೆ

ಅಸ್ಪೃಶ್ಯರವು ಹುಲ್ಲಿನ ಚಾಪೆ ಹೊದಿಸಿದ ತಗ್ಗುಮಾಡಿದ ಗುಡಿಸಲುಗಳು. ಅದರೊಳಕ್ಕೆ ಹೋಗುವವರು ಮೊಣಕಾಲು ಬಗ್ಗಿಸಿ ಒಳಗೆ ತೂರಿಕೊಂಡು ಹೋಗಬೇಕಾಗಿತ್ತು. ಅಸ್ಪೃಶ್ಯ ಜನರ ಸ್ಥಿತಿ ಇನ್ನೂ ದಾರುಣವಾಗಿತ್ತು. ಒಂದು ಚಿಕ್ಕಮಗು ಖಾಲಿಪಾತ್ರೆ ಹಿಡಿದು ಹಸಿವಿನಿಂದ ಅಳುತ್ತಿದ್ದನ್ನು ಬಿಟ್ಟರೆ ಉಳಿದ ಯಾರಿಗೂ ದನಿ ಎತ್ತುವ ಮನಸ್ಸಾಗಲಿ, ಶಕ್ತಿಯಾಗಲೀ ಇದ್ದಂತಿರಲಿಲ್ಲ.

ಪ್ರಕಾಶಕರು
ಕನ್ನಡ ಅಭಿವೃದ್ಧಿ ಪ್ರಾಧಿಕಾರ
ಕನ್ನಡ ಭವನ, ರವೀಂದ್ರ ಕಲಾಕ್ಷೇತ್ರ,
ಬೆಂಗಳೂರು
ಬೆಲೆ ರೂ. 50/-

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಫೆಬ್ರವರಿ 1 ರಿಂದ 15, 2004**
  ಬಡಜನರಿಗೆ ಕಡಿಮೆ ದರದಲ್ಲಿ ರೇಷನ್‌ಗಾಗಿ ಕೋಮುವಾದ, ಜಾಗತೀಕರಣದ ವಿರುದ್ಧ ಸಿಪಿಐ(ಎಂ) ಪ್ರಚಾರಾಂದೋಲನ
- **ಫೆಬ್ರುವರಿ 11,2004**
  ನೃತ ಜುಗಲ್‌ಬಂದಿ
  ಮೇಘಾ ಮತ್ತು ಸ್ನೇಹಾ ಅವರಿಂದ ಭರತನಾಟ್ಯ, ನಯನ ಸಭಾಂಗಣ, ಕನ್ನಡಭವನ - ಜೆ.ಸಿ.ರಸ್ತೆ, ಬೆಂಗಳೂರು
- **ಫೆಬ್ರುವರಿ 16 ಮತ್ತು 17, 2004**
  ಟೀಚರ್ ಶೈಕ್ಷಣಿಕ ಮಾಸ ಪತ್ರಿಕೆಯ ದ್ವಿತೀಯ ವಾರ್ಷಿಕೋತ್ಸವ
  ನಾಲ್ವಡಿ ಕೃಷ್ಣರಾಜ ಕಲಾಮಂದಿರ ಮಂಡ್ಯ
  16 ರಂದು ಮದ್ಯಾಹ್ನ 3 ರಿಂದ 5 ರವರೆಗೆ ವಿಚಾರಗೋಷ್ಠಿ
- **ಫೆಬ್ರುವರಿ 23,2004**
  ಕರ್ನಾಟಕ ರಾಜ್ಯ ಸಾಕ್ಷರತಾ ಪ್ರೇರಕರ ಸಂಘ ಮತ್ತು ಡಿವೈಎಫ್‌ಐ
  ಗೌರವಧನ ಹೆಚ್ಚಳ, ಬಾಕಿ ಬಿಡುಗಡೆ, 15 ವರ್ಷಗಳಿಂದ ಕೆಲಸ ಮಾಡುತ್ತಿರುವವರನ್ನು ಖಾಯಂಗೊಳಿಸಲು ಆಗ್ರಹಿಸಿ
  ಎಲ್ಲಾ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಉಪವಾಸ ಸತ್ಯಾಗ್ರಹ
- **ಫೆಬ್ರುವರಿ 24, 2004**
  ಮುಷ್ಕರದ ಹಕ್ಕಿಗಾಗಿ ದೇಶದಾದ್ಯಂತ ಮುಷ್ಕರ
- **ಮಾರ್ಚ್ 1-5 2004**
  ಎನ್‌ಡಿಎ ಸರ್ಕಾರದ ಕೃಷಿ ನೀತಿಗಳನ್ನು ವಿರೋಧಿಸಿ, ಪರ್ಯಾಯ ಕೃಷಿ ನೀತಿಗಾಗಿ ರಾಷ್ಟ್ರಾದ್ಯಂತ AIAWA-AIKS ನಿಂದ ಪ್ರಚಾರಾಂದೋಲನ

ರಾಜ್ಯ ಬಜೆಟ್-ಮತದಾರರನ್ನು ಮೋಡಿ ಮಾಡುವ ಕಸರತ್ತು

ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಗುರುವಾರ ವಿಧಾನಸಭೆಯಲ್ಲಿ ಫೆ. 5 ರಂದು ಮಂಡಿಸಿದ ಬಜೆಟ್ ನಿರೀಕ್ಷೆಯಂತೆ 'ಚುನಾವಣಾ ಬಜೆಟ್' ಆಗಿದೆ. ಯಾವುದೇ ಹೊಸ ತೆರಿಗೆ ಇಲ್ಲದ, ಭರವಸೆಗಳ ಸುರಿಮಳೆಯನ್ನೊಳಗೊಂಡ ಈ ಕಸರತ್ತು ಮತದಾರರಲ್ಲಿ ಕೆಲವು ನಿರ್ದಿಷ್ಟ ವಿಭಾಗಗಳಿಗೆ ಆಮಿಷ ಒಡ್ಡುವ ತಂತ್ರವಾಗಿದೆ. ಹತ್ತಾರು ಹೊಸ ಯೋಜನೆಗಳನ್ನು ಪ್ರಕಟಿಸಲಾಗಿದ್ದರೂ ಅವುಗಳಿಗೆ ಯಾವುದೇ ಹೊಸ ತೆರಿಗೆಗಳಿಲ್ಲದೆ ಅಗತ್ಯವಾದ ಸಂಪನ್ಮೂಲಗಳನ್ನು ಹೇಗೆ ಸಂಗ್ರಹಿಸಲಾಗುವುದು ಎಂಬುದನ್ನು ಮರೆಮಾಚಲಾಗಿದೆ. ಚುನಾವಣೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಹೊಸ ತೆರಿಗೆಗಳ ಹೊರೆ ಇಲ್ಲ ಎಂದು ಹೇಳಲಾಗಿದ್ದರೂ ಮುಂದಿನ ದಿನಗಳಲ್ಲಿ ಜನತೆಯ ಮೇಲೆ ಭಾರೀ ಹೊರೆ ಹೇರುವ ಮೋಸ ಈ ಬಜೆಟ್‌ನಲ್ಲಿ ಬಚ್ಚಿಡಲಾಗಿದೆ.

'ಹೊಸ ತೆರಿಗೆ ಇಲ್ಲ' ಎಂದು ಹೇಳಿಕೊಳ್ಳುವ ಎಸ್.ಎಂ.ಕೃಷ್ಣ ಕೆಲವೇ ವಾರಗಳ ಹಿಂದೆ ಸುಮಾರು 600 ಪದಾರ್ಥಗಳ ಮಾರಾಟ ತೆರಿಗೆಯ ಮೇಲೆ ಹೆಚ್ಚುವರಿ ಸುಂಕವನ್ನು ವಿಧಿಸಿ ಜನಸಾಮಾನ್ಯರ ಜೇಬುಗಳಿಂದ ಸುಮಾರು 900 ಕೋಟಿ ರೂ.ಗಳನ್ನು ಕದಿಯಲು ಕ್ರಮ ಕೈಗೊಂಡಿರುವುದನ್ನು ತುಂಬಾ ಚಾಣಾಕ್ಷತನದಿಂದ ಮರೆ ಮಾಚಿದ್ದಾರೆ. ಆಮೇಲೆ ಸಾರ್ವತ್ರಿಕ ಪ್ರತಿರೋಧಕ್ಕೆ ಮಣಿದು ಆ ಸುಂಕಗಳಿಂದ ಪೆಟ್ರೋಲ್, ಡೀಸೆಲ್ ಮೊದಲಾದ 75 ಪದಾರ್ಥಗಳನ್ನು ಹೊರಗಿಟ್ಟು ಹೆಚ್ಚುವರಿ ವರಮಾನದ 400 ಕೋಟಿ ರೂ. ಬಿಟ್ಟುಕೊಟ್ಟಿದ್ದರೂ ಉಳಿದ 500 ಕೋಟಿ ರೂ.ಗಳ ಸುಂಕ ಹೊರೆ ಜನರ ಮೇಲೆ ಹಾಗೆ ಉಳಿದಿದೆ ಎಂಬುದನ್ನು ಮರೆಯುವಂತಿಲ್ಲ.

ಮತದಾರರನ್ನು ಮೋಡಿ ಮಾಡಲು ಹೊಸ ತೆರಿಗೆ ಹೇರಲಾಗದಿದ್ದರೂ ಹೊಸ ಯೋಜನೆಗಳಿಗೆ ಅಗತ್ಯವಿರುವ ಹಣಕ್ಕಾಗಿ ಹೆಚ್ಚೆಚ್ಚು ಸಾಲದ ಮೇಲೆ ಅವಲಂಬಿಸಲು ಸರ್ಕಾರ ಹೊರಟಿರುವುದು ಸ್ಪಷ್ಟವಾಗುತ್ತಿದೆ. 2003-04 ರ ಸಾಲಿನಲ್ಲಿ ಭಾರತ ಸರ್ಕಾರ, ಮುಕ್ತ ಮಾರುಕಟ್ಟೆ ಮತ್ತು ಇತರ ಮೂಲಗಳಿಂದ ಒಟ್ಟು 6241.41 ಕೋಟಿ ರೂ. ಸಾಲವನ್ನು ಅಂದಾಜು ಮಾಡಲಾಗಿತ್ತಾದರೂ ಪರಿಷ್ಕೃತ ಅಂದಾಜು 7163.78 ಕೋಟಿ ರೂ.ಗಳಿಗೆ ಏರಿತ್ತು. 2004-05 ರ ಸಾಲಿಗೆ ಒಟ್ಟು 6526.78 (ಶೇಕಡಾ 24) ರೂ. ಸಾಲವನ್ನು ಅಂದಾಜು ಮಾಡಲಾಗಿದ್ದು ಈ ಮೊತ್ತ ಗಣನೀಯವಾಗಿ ಹೆಚ್ಚಾಗುವ ಸಾಧ್ಯತೆ ಇದೆ. ಸಾಲದ ಮೇಲೆ ಹೆಚ್ಚುತ್ತಿರುವ ಈ ಅವಲಂಬನೆ ಒಂದು ಆರೋಗ್ಯಕರ ಬೆಳವಣಿಗೆಯಂತೂ ಅಲ್ಲವೇಅಲ್ಲ.

ಅನೇಕ ಹೊಸ ನಿಗಮಗಳ ಸ್ಥಾಪನೆಯನ್ನು ಘೋಷಿಸಲಾಗಿದೆ. ಈಗ ಇರುವ ನಿಗಮಗಳಿಗೆ ಸರಿಯಾಗಿ ಹಣ ಪೂರೈಕೆ ಸಾಧ್ಯವಾಗದೆ ಅವುಗಳು ಸೊರಗುತ್ತಿರುವಾಗ ಹೊಸ ನಿಗಮಗಳಿಗೆ ಹಣ ಎಲ್ಲಿಂದ?

ರಾಜ್ಯವನ್ನು ಆವರಿಸಿರುವ ಬರ ಸತತ ನಾಲ್ಕನೇಯ ವರ್ಷಕ್ಕೆ ಕಾಲಿಟ್ಟಿದೆ. ಹಿಂದಿನ ವರ್ಷ ಬರಪರಿಹಾರ ಕ್ರಮಗಳಿಗಾಗಿ ಸರ್ಕಾರ ನಾಲ್ಕುನೂರು ಕೋಟಿ ರೂ.ಗಳಿಗೂ ಅಧಿಕ ಹಣವನ್ನು ವೆಚ್ಚ ಮಾಡಿದೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಇಷ್ಟೊಂದು ಪ್ರಮಾಣದ ಹಣ ರಾಜಕೀಯ ಪುಡಾರಿಗಳ ಜೇಬಿಗೆ ಮತ್ತು ಅವರ ಕಂಟ್ರಾಕ್ಟರುಗಳಿಗೆ ಹೋಗಿದೆಯೇ ಹೊರತು ಅದು ಬರಗಾಲದಿಂದ ತತ್ತರಿಸಿದ ಗ್ರಾಮೀಣ ಜನತೆಗೆ ತಲುಪಿಲ್ಲ ಎಂಬುದನ್ನು ಅವರು ಒಪ್ಪಿಕೊಂಡಿಲ್ಲ. ಮಾತ್ರವಲ್ಲ ಮುಂದಿನ ಅವಧಿಗೆ ಬರಪರಿಹಾರ ಕ್ರಮಗಳನ್ನು ಪರಿಣಾಮಕಾರಿಯಾಗಿಸಲು ಯಾವುದೇ ಪ್ರಸ್ತಾಪ ಈ ಬಜೆಟ್‌ನಲ್ಲಿ ಇಲ್ಲ. ಬೆಳೆಯುತ್ತಿರುವ ಬೆಂಗಳೂರು ನಗರದ ಕುಡಿಯುವ ನೀರು ಪೂರೈಕೆಗಾಗಿ 90 ಕೋಟಿ ರೂ. ಒದಗಿಸಿರುವುದು ಸ್ವಾಗತಾರ್ಹ ವಾಗಿದ್ದರೂ ಮುಂದುವರೆದಿರುವ ಬರಗಾಲದ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರು ಪೂರೈಕೆಗೆ ಆದ್ಯತೆ ನೀಡದಿರುವುದು ಖಂಡನಾರ್ಹವಾಗಿದೆ.

ರಾಜ್ಯದಲ್ಲಿ ತೀವ್ರಗೊಳ್ಳುತ್ತಿರುವ ಕೃಷಿ ಬಿಕ್ಕಟ್ಟಿಗೆ ಈ ಬಜೆಟ್‌ನಲ್ಲಿ ಯಾವುದೇ ಪರಿಣಾಮಕಾರಿ ಕ್ರಮಗಳು ಪ್ರಕಟವಾಗಿಲ್ಲ. ರೈತರಿಗಾಗಿ 880 ಕೋಟಿ ರೂ.ಗಳ ಪ್ಯಾಕೇಜ್ ಘೋಷಿಸಲಾಗಿದ್ದರೂ ರೈತರನ್ನು ಆತ್ಮಹತ್ಯೆಗೆ ನೂಕುತ್ತಿರುವ ಅವರ ಸಾಲವನ್ನು ಮನ್ನಾ ಮಾಡುವ ಕ್ರಮಕ್ಕೆ ಸರ್ಕಾರ ಮುಂದಾಗಲಿಲ್ಲ. ಕೃಷಿ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಅನೇಕ ಮಾತುಗಳನ್ನು ಹೇಳಲಾಗಿದ್ದರೂ ಕಳೆದ ವರ್ಷಕ್ಕಿಂತ ಈ ವರ್ಷ ಕೃಷಿ ಕ್ಷೇತ್ರಕ್ಕೆ ಕಡಿಮೆ



ಹಣವನ್ನು ಒದಗಿಸಲಾಗಿದೆ. ಕಳೆದ ವರ್ಷ ಕೃಷಿ ಮತ್ತು ಕೃಷಿ ಸಂಬಂಧಿಸಿದ ಚಟುವಟಿಕೆಗಳಿಗೆ ಶೇಕಡಾ 5 ರಷ್ಟು ಹಣ ನಿಗದಿಯಾಗಿದ್ದರೆ 2004 - 05 ರಲ್ಲಿ ಕೇವಲ ಶೇಕಡಾ 4.41 ಮಾತ್ರ ಮೀಸಲಿಡಲಾಗಿದೆ. ಕೇವಲ ಭರವಸೆಗಳಿಂದ ರೈತರನ್ನು ಬದುಕಿಸಲು ಸಾಧ್ಯವಿಲ್ಲ.

ಸತತ ಮೂರು ವರ್ಷಗಳ ಬರಗಾಲಕ್ಕೆ ತುತ್ತಾಗಿ ತತ್ತರಿಸಿದ ಭೂಹೀನ ಕೃಷಿ ಕಾರ್ಮಿಕರು ಊರೂರು ಅಲೆಯುತ್ತಾ ಉಪವಾಸ ವನವಾಸ ಅನುಭವಿಸುತ್ತಿರುವುದನ್ನು, ರಾಜ್ಯದಲ್ಲಿ ಸಂಭವಿಸಿದ ಹಸಿವಿನ ಸಾವುಗಳನ್ನು ಸರ್ಕಾರ ಕಡೆಗಣಿಸಿರುವುದು ಸ್ಪಷ್ಟವಾಗಿದೆ. ಎಲ್ಲಾ ಬಡವರಿಗೆ ಹಳದಿ ಪಡಿತರ ಕಾರ್ಡುಗಳನ್ನು ವಿತರಿಸಿ ಅಂತ್ಯೋದಯ ದರಗಳಲ್ಲಿ ಅವರಿಗೆ ಆಹಾರ ಧಾನ್ಯಗಳನ್ನು ಒದಗಿಸಲು ಸರ್ಕಾರ ಅಗತ್ಯ ಹೆಚ್ಚುವರಿ ಹಣವನ್ನು ಒದಗಿಸಿಲ್ಲ. ಆದ್ದರಿಂದ ಈ ಬಜೆಟ್ ಬಹಳ ಸ್ಪಷ್ಟವಾಗಿ ಗ್ರಾಮೀಣ ಜನತೆಯ ವಿರೋಧಿಯಾಗಿದೆ.

ಮಹಿಳೆಯರ ಮತಗಳ ಮೇಲೆ ಕಣ್ಣಿಟ್ಟು ಆಂಧ್ರದ ಚಂದ್ರಬಾಬು ನಾಯ್ಡು ಮಾದರಿಯಲ್ಲಿ 'ಇಂದಿರಾ ಜ್ಯೋತಿ' ಎಂಬ ಯೋಜನೆಯ ಅಡಿಯಲ್ಲಿ 5 ಲಕ್ಷ ಕುಟುಂಬಗಳಿಗೆ ಅಡುಗೆ ಸಿಲಿಂಡರ್ ಮತ್ತು ಬರ್ನರ್ ಒಲೆಯನ್ನು ಒದಗಿಸಲು 35 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಬರಗಾಲದ ಆ ದಿನಗಳಲ್ಲಿ ಸ್ವಸಹಾಯ ಗುಂಪು ಯೋಜನೆಯ ಲಾಭ ಪಡೆಯಲು ಗ್ರಾಮೀಣ ಮಹಿಳೆಯರು ಅರೆಹೊಟ್ಟೆ ಜೀವನ ನಡೆಸಿ ಉಳಿತಾಯ ಮಾಡಬೇಕಾದ ಪರಿಸ್ಥಿತಿಯತ್ತ ಸರ್ಕಾರ ಕಣ್ಮುಚ್ಚಿದೆ. ಸರ್ಕಾರ ತನ್ನ ಹೂಡಿಕೆಯನ್ನು ಕಡಿಮೆ ಮಾಡುತ್ತಾ ಜನರ ಉಳಿತಾಯವನ್ನೇ ತನ್ನ ಸಾಧನೆಯಾಗಿ ಬಿಂಬಿಸುವ ಪ್ರಯತ್ನ ಇದಾಗಿದೆ.

ರಾಜ್ಯದ ನೇಕಾರರಿಗೆ 105 ಕೋಟಿ ರೂ.ಗಳ ಪ್ಯಾಕೇಜನ್ನು ಪ್ರಕಟಿಸಲಾಗಿದ್ದರೂ ಪ್ರಸಕ್ತ ಸಾಲಿಗೆ ಒದಗಿಸಿದ್ದು ಕೇವಲ 20 ಕೋಟಿ ರೂ. ಮಾತ್ರ. ಗ್ರಾಮೀಣ ಬಡವರಿಗೆ ನ್ಯಾಯ ಬೆಲೆ ಅಂಗಡಿಗಳಲ್ಲಿ ಒದಗಿಸುವ ಸೀರೆ ದೋತಿ ತಯಾರಿಕೆಗೆ ನೀಡಲಾಗುತ್ತಿದ್ದ ಹಣವನ್ನು ಗಣನೀಯ ಕಡಿಮೆ ಮಾಡಲಾಗಿದ್ದು ಇದರಿಂದ ನೇಕಾರರ ಸಂಕಷ್ಟ ಮತ್ತೆ ತೀವ್ರವಾಗಿದೆ.

ವಿದ್ಯುತ್ ಕ್ಷೇತ್ರಕ್ಕೆ ಶೇ.23 ರಷ್ಟು ಅನುದಾನ ಹೆಚ್ಚಿಸಲು ನಿರ್ಧರಿಸಲಾಗಿದ್ದರೂ ಅದೆಲ್ಲವೂ ಸರ್ಕಾರ ವಿದ್ಯುತ್ತನ್ನು ಖರೀದಿಸುತ್ತಿರುವ ಖಾಸಗಿ ಕಂಪನಿಗಳಿಗೆ ಹೋಗಲಿದೆಯೇ ಹೊರತು ಸರ್ಕಾರಿ ಕ್ಷೇತ್ರದಲ್ಲಿ ವಿದ್ಯುತ್ ಉತ್ಪಾದನೆಗೆ ದೊರೆಯಲಾರದು. ಕೇಂದ್ರ ಸರ್ಕಾರ ಮತ್ತು ಮಹಾರಾಷ್ಟ್ರ ಸರ್ಕಾರ ಎನ್ರಾನ್ ಕಂಪನಿಗೆ ನೀಡಿದ ಲಾಭದ ಗ್ಯಾರಂಟಿ ಮತ್ತು ಕೌಂಟರ್ ಗ್ಯಾರಂಟಿಗಳ ಮಾದರಿಯಲ್ಲೇ ರಾಜ್ಯದಲ್ಲಿಯೂ ಖಾಸಗಿ ಕಂಪನಿಗಳಿಗೆ ಗ್ಯಾರಂಟಿ ನೀಡಲು ಮುಂದಾಗಿರುವುದು ಮುಂದೆ ವಿದ್ಯುತ್ ರಂಗದಲ್ಲಿ ಭಾರೀ ಅನಾಹುತಕ್ಕೆ ಕಾರಣವಾಗಲಿದೆ. ಈ ಸಲದ ಬಜೆಟ್‌ನಲ್ಲಿ ರೈತರ 31-3-2003 ರ ವರೆಗಿನ ನೀರಾವರಿ ಪಂಪ್‌ಸೆಟ್ ವಿದ್ಯುತ್ ಬಾಕಿಯನ್ನು ಮನ್ನಾ ಮಾಡಿರುವುದು ಸ್ವಾಗತಾರ್ಹವಾದರೂ ಭಾಗ್ಯಜ್ಯೋತಿ/ಕುಟೀರಜ್ಯೋತಿ ವಿದ್ಯುತ್ ಬಾಕಿಗಳನ್ನು ಮನ್ನಾ ಮಾಡಲಾಗಿಲ್ಲ. 31.3.2001 ರ ವರೆಗಿನ ಬಾಕಿಯನ್ನು ಹಿಂದೆ ಮನ್ನಾ ಮಾಡಲಾಗಿತ್ತು.

ಒಟ್ಟಾರೆಯಾಗಿ ಕೃಷ್ಣರವರ ಈ ಬಜೆಟ್ ಮತದಾರರ ಕಣ್ಣಿಗೆ ಮಣ್ಣೆರಚುವ ಮೋಸದ ಬಜೆಟ್ ಆಗಿದೆ. ಕೇಂದ್ರದಲ್ಲಿ ವಾಜಪೇಯಿ ಸರ್ಕಾರ ಚುನಾವಣೆಯ ಮೇಲೆ ಕಣ್ಣಿಟ್ಟು ಮಂಡಿಸಿರುವ ಬಜೆಟ್‌ಗಿಂತ ಕೃಷ್ಣರವರ ಬಜೆಟ್ ಭಿನ್ನವಾಗಿಲ್ಲ.

- ನಿತ್ಯಾನಂದಸ್ವಾಮಿ

ಹಣ ಎಲ್ಲಿಂದ ತರುತ್ತಾರೆ?

"ಕೃಷ್ಣ ಅವರು ತೆರಿಗೆ ಏರಿಕೆ ಇಲ್ಲ ಎಂದು ಬಜೆಟ್ ಭಾಷಣದಲ್ಲಿ ಹೇಳಿಕೊಂಡಿದ್ದಾರೆ. ಇದು ತಾಂತ್ರಿಕವಾಗಿ ಮಾತ್ರ ಸರಿ. ಈಚೆಗೆ ಕೆಲವು ವಾರಗಳ ಹಿಂದೆಯಷ್ಟೇ ಅವರು ತೆರಿಗೆ ಮೇಲೆ ತೆರಿಗೆ ಹೇರಿ ಸುಮಾರು 900 ಕೋಟಿ ರೂಪಾಯಿ ವರಮಾನದ ದಾರಿ ಮಾಡಿಕೊಂಡಿದ್ದರು"

ಪ್ರಜಾವಾಣಿ

★

"ಗ್ರಾಮೀಣ ಜನತೆ ಮತ್ತು ಗ್ರಾಮೀಣ ಮಹಿಳೆಯರ ಮತಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಳ್ಳುವ ಪರಮ ಉದ್ದೇಶದ ಬಜೆಟ್ ಇದೆಂದರೆ ತಪ್ಪಾಗದು. ರೈತರು, ಮಹಿಳೆಯರು, ಯುವಜನರಿಗೆ ಯಾವ ಎಗ್ಗೂ ಇಲ್ಲದಂತೆ ನೆರವಿನ ಮಹಾಪೂರ ಹರಿಸಲಾಗಿದೆ. ಆದರೆ ಸಂಪನ್ಮೂಲ ಕ್ರೋಢೀಕರಣದ ಬಗೆಗೆ ಚಕಾರವಿಲ್ಲ"

ವಿಜಯ ಕರ್ನಾಟಕ

★

"ಈ ಎಲ್ಲಾ ಕಾರ್ಯಕ್ರಮಗಳಿಗೂ ಮುಖ್ಯಮಂತ್ರಿ ಕೃಷ್ಣ ಹಣವನ್ನು ಎಲ್ಲಿಂದ ತರುತ್ತಾರೆ ? ಈ ಪ್ರಶ್ನೆಗೆ ಬಜೆಟ್‌ಅಂಕಿ ಅಂಶಗಳಲ್ಲಿ ಸಿಕ್ಕುವ ಉತ್ತರ ಎಂದರೆ ತೆರಿಗೆ ಅಲ್ಲದ ಸರ್ಕಾರದ ಆದಾಯವನ್ನು ಹೆಚ್ಚಿಸಿಕೊಳ್ಳುವುದು, ಹೆಚ್ಚು ಸಾಲ ಮಾಡುವುದು. ಕೇಂದ್ರದಿಂದ ಹೆಚ್ಚು ನೆರವು ಕೇಳುವುದು"

ಕನ್ನಡ ಪ್ರಭ

ಐಕ್ಯರಂಗ

4 ದಶಕಗಳ ಹಿಂದೆ

ಕಾಂಗ್ರೆಸ್ 'ಫ್ಯಾಸಿಸ್ಟ್' ದುರಾಡಳಿತೆಯ ಇನ್ನೊಂದು ಮೈಲುಗಲ್ಲು, ಹದಿನಾರನೇ ಪ್ರಜಾಪ್ರಭುತ್ವ ದಿನ!

26 ಜನವರಿ 1965 ರಂದು ಭಾರತ ಇಂಡಿಯಾ - ದೇಶ 16 ನೇ ಪ್ರಜಾಪ್ರಭುತ್ವ ದಿನವನ್ನು ಆಚರಿಸಿತು.

ವಾಡಿಕೆಯ ಕಾಂಗ್ರೆಸ್ ಭಾಷಣಗಳು ದೇಶಾದ್ಯಂತ ಕೇಳಿ ಬಂದುವು. ಹದಿನೇಳು ವರ್ಷಗಳ 'ಸ್ವಾತಂತ್ರ್ಯ'ದ ಅವಧಿಯಲ್ಲಿ 15 ವರ್ಷಗಳ ಕಾಂಗ್ರೆಸ್ ಮಾದರಿಯ ಫ್ಯಾಸಿಸ್ಟ್ 'ಪ್ರಜಾಪ್ರಭುತ್ವ'ದ ಕಾಲಾವಧಿಯಲ್ಲಿ ಕಾಂಗ್ರೆಸ್ ಆಳುವ ವರ್ಗ ಸಾಧಿಸಿದ 'ಮಹಾ ಸಾಧನೆ'ಗಳನ್ನು ಹಳ್ಳಿಯಿಂದ ದಿಲ್ಲಿಯವರೆಗಿನ ಕಾಂಗ್ರೆಸ್ 'ನೇತಾ'ಗಳು ಹಾಡಿ ಹೊಗಳಿದುದನ್ನು ಇಂದು ಅರೆ ಹೊಟ್ಟೆಗೂ ಸಿಗದೆ ಉಪವಾಸ ಬೀಳುತ್ತಿರುವ ಭಾರತದ 44 ಕೋಟಿ ಜನತೆ ಆಲಿಸಿ ಕೇಳಿತು!

★

ಮದ್ರಾಸು ರಾಜ್ಯದಲ್ಲಿ ವಿದ್ಯಾರ್ಥಿಗಳ ಮೇಲೆ ಪೋಲೀಸು ಗೋಲಿಬಾರು ಹಿಂದೀ ವಿರೋಧಿಗಳಿಬ್ಬರ ಪ್ರಾಣಾರ್ಪಣೆ

ಪ್ರಜಾಪ್ರಭುತ್ವ ದಿನದಂದು ಹಿಂದಿಯನ್ನು ಆಡಳಿತ ಭಾಷೆಯಾಗಿ ಬಳಕೆಗೆ ತಂದುದನ್ನು ಅನುಸರಿಸಿ ಮದ್ರಾಸು ರಾಜ್ಯಾದ್ಯಂತ ತೀವ್ರ ಹಿಂದೀ ವಿರೋಧಿ ಚಳುವಳಿಯು ಪ್ರಜಾಪ್ರಭುತ್ವ ದಿನದ ಹಿಂದಿನ ದಿನದಿಂದ ತೀವ್ರ ಗತಿಯಿಂದ ಆರಂಭವಾಗಿದೆ. ವಿದ್ಯಾರ್ಥಿಗಳ ಮೇಲೆ ಪೋಲೀಸು ಗೋಲಿಬಾರು, ಹಿಂದೀ ವಿರೋಧಿಗಳ ಆತ್ಮ ಬಲಿದಾನ, ವಿದ್ಯಾರ್ಥಿಗಳ ಬೃಹತ್ ಪ್ರದರ್ಶನ ಮೆರವಣಿಗೆಗಳು ವಿದ್ಯಾರ್ಥಿಗಳು, ಹಾಗೂ ಡಿ.ಎಂ.ಕೆ.ನಾಯಕರ ಸಾಮೂಹಿಕ ಬಂಧನ ಇತ್ಯಾದಿಗಳಿಂದ ಹಿಂದೀ ವಿರೋಧಿ ಚಳುವಳಿಗೆ ರೌದ್ರ ರೂಪವನ್ನು ತಾಳಿದೆ.

★

ಜಾಗತಿಕ ಯುದ್ಧದ ಶ್ರೇಷ್ಠ ನಾಯಕ, ಬ್ರಿಟಿಷ್ ಸಾಮ್ರಾಜ್ಯರಾಣಿಯ ನೆಚ್ಚಿನ ಬಂಟ, ಶೀತಲ ಸಮರದ ಮಹಾ ಮುತ್ಸದ್ದಿ ಚರ್ಚಿಲ್ ಇನ್ನಿಲ್ಲ

ಚರ್ಚಿಲ್ ಪ್ರತಿಭಾನ್ವಿತ ವ್ಯಕ್ತಿ. ಮೊನ್ನೆ ಮೊನ್ನೆ ಕಾಲನಿಗೆದುರಾಗಿ ಹೋರಾಡಿ ಗೆದ್ದು ಸೋತಂತೆ, ಬ್ರಿಟೀಷ್ ಸಾಮ್ರಾಜ್ಯದ ರಕ್ಷಣೆಗಾಗಿ ಕಾಲಕ್ಕೆದುರಾಗಿ ಹೋರಾಡಿ ಗೆದ್ದು ಸೋತವರು. ಯಾವ ತಮ್ಮ ನೆಚ್ಚಿನ ಸಾಮ್ರಾಜ್ಯದ ರಕ್ಷಣೆಗಾಗಿ ಸಮಾಜವಾದೀ ರಾಷ್ಟ್ರಗಳೆದಿರು ಬಿಸಿಯುದ್ಧ, ಶೀತಲ ಸಮರಗಳೆರಡನ್ನೂ ನಡೆಸಿದರೋ, ಯಾವ ವಸಾಹತು ಗುಲಾಮಗಿರಿಯ ಪೋಷಣೆಗಾಗಿ ಭಾರತದಂತಹ ಹಲವು ರಾಷ್ಟ್ರಗಳ ವಿಮೋಚನಾ ಹೋರಾಟಗಳನ್ನು ರಕ್ತದ ಮಡುವಿನಲ್ಲಿ ಮುಳುಗಿಸಲು ಹವಣಿಸಿದರೋ, ಯಾವ ಚಕ್ರಾಧಿಪತ್ಯವನ್ನುಳಿಸಲು ಇತರ ಸಾಮ್ರಾಜ್ಯಶಾಹಿಗಳ ಕೂಡ ಕುಟಿಲ ನೀತಿಯನ್ನನುಸರಿಸಿ ಒಮ್ಮೆ ಸ್ನೇಹದ ಕೈಚಾಚಿ ಬೆನ್ನಲ್ಲೇ ನಿರ್ದಾಕ್ಷಿಣ್ಯವಾಗಿ ಹೊಡೆದಾಡಿದ್ದರೋ, ಅಂತಹ "ರವಿ ಮುಳುಗದ" ಬ್ರಿಟಿಷ್ ಸಾಮ್ರಾಜ್ಯ ರವಿಯು ಅಸ್ತಂಗತನಾಗುತ್ತಿರುವುದನ್ನು ಕಾಣುತ್ತಾ ಚರ್ಚಿಲರು ಕಣ್ಣು ಮುಚ್ಚುವಂತಾದರೂ, ಚರ್ಚಿಲ್ ಒಂದು ಯುಗದ - ಸಾಮ್ರಾಜ್ಯಶಾಹೀ ಯುಗದ ಸಂಕೇತ. ಅವರ ಅಳಿವಿನ ಜೊತೆ ಸಾಮ್ರಾಜ್ಯಶಾಹಿಯ ಅಳಿವೂ ಸನ್ನಿಹಿತವಾಗುತ್ತಿದೆಯೆಂಬುದನ್ನು ಜಗತ್ತೇ ಕಾಣುತ್ತಿದೆ. ಅಮೇರಿಕನ್ ಬ್ರಿಟಿಷ್ ವಸಾಹತುವಾದಿಗಳು ಮಲೇಶಿಯಾ, ವಿಯಟ್‌ನಾಮ್, ಕಾಂಗೋಗಳಲ್ಲಿ ಚರ್ಚಿಲ್ ನೀತಿಯನ್ನು ಮುಂದುವರಿಸಲು ಅದೆಷ್ಟು ಯತ್ನಿಸಿದರೂ, ಚರ್ಚಿಲರ ಪಾರ್ಥಿವ ಶರೀರದ ಜತೆಯಲ್ಲೇ ಚರ್ಚಿಲ್ ನೀತಿಯೂ ಗೌರವಪೂರ್ವಕವಾಗಿ ಸಮಾಧಿ ಹೊಂದುತ್ತಿರುವುದನ್ನು ನಾವು ಕಾಣುತ್ತಿದ್ದೇವೆ.

★

ಗೃಹಮಂತ್ರಿ ನಂದಾರ ಪ್ರಜಾರಾಜ್ಯ

ನಮ್ಮ ದೇಶದ 15ನೇ ಪ್ರಜಾರಾಜ್ಯದಿನವನ್ನು ಅರೆಹೊಟ್ಟೆಯಲ್ಲಿರುವ ಜನತೆ ಎಲ್ಲೆಡೆಗಳಲ್ಲೂ ವಿಜೃಂಭಣೆಯಿಂದ ಆಚರಿಸಿತು. ಮದ್ರಾಸು ಮೊದಲಾದ ಕಡೆ ಹಿಂದಿಯನ್ನು ಸರಕಾರೀ ಭಾಷೆಯಾಗಿ ಜಾರಿಗೊಳಿಸುವುದನ್ನು ಪ್ರತಿಭಟಿಸಿ ಡಿಎಂಕೆಯ ಕರೆಯ ಮೇರೆಗೆ ಈ ದಿನವನ್ನು ಶೋಕ ದಿನವನ್ನಾಗಿ ಆಚರಿಸಲಾದರೂ, ಉಳಿದೆಡೆಗಳಲ್ಲಿ ಜನ ಪ್ರಜಾರಾಜ್ಯಕ್ಕುಚಿತವಾದ ಗೌರವದಿಂದಲೇ ಇದನ್ನಾಚರಿಸಿದ್ದಾರೆ.

ಓಬಳ ಬಂಡಿ: ನಿವೇಶನ ಕಬಳಿಕೆ ಯತ್ನ ವಿಫಲ

ಗಂಗಾವತಿ ತಾಲೂಕಿನ ಒಬಳಬಂಡಿ ಗ್ರಾಮದ ನಿವೇಶನವೊಂದರಲ್ಲಿ ದಲಿತ ವಡ್ಡರ ಜನಾಂಗಕ್ಕೆ ಸೇರಿದ ಒಂದು ಕುಟುಂಬ ಕಳೆದ ಸುಮಾರು 40 ವರ್ಷಗಳಿಂದ ಗುಡಿಸಲು ಹಾಕಿಕೊಂಡು ವಾಸಮಾಡುತ್ತಾ ಬಂದಿತ್ತು. ರಡ್ಡೆಪ್ಪ ತಂದೆ ಹನುಮಪ್ಪ ತನ್ನ ನಾಲ್ವರು ಸಹೋದರರು ತಮ್ಮ ಕುಟುಂಬಗಳೊಂದಿಗೆ ಈ ನಿವೇಶನದಲ್ಲಿ ವಾಸಮಾಡುತ್ತಾ ಇರಲಾಗಿ ಮುಸಲಾಪುರ ಗ್ರಾಮಪಂಚಾಯತಿ ಡಿಮಾಂಡ್ ರಜಿಸ್ಟರ್‌ನಲ್ಲಿ 1963 ರಲ್ಲೇ ಇವರ ಹೆಸರು ದಾಖಲಾಗಿತ್ತು ಮಾತ್ರವಲ್ಲ ಸದರಿ ನಿವೇಶನದ ಹಕ್ಕುಪತ್ರವನ್ನು ನೀಡಿ ಅಲ್ಲಿ ಮನೆಕಟ್ಟಿಕೊಳ್ಳಲು ಅನುಮತಿಯನ್ನು ಸಹ ನೀಡಲಾಗಿತ್ತು. ಆ ನಂತರ ಸದರಿ ನಿವೇಶನದಲ್ಲಿ 5 ಭಾಗಗಳಿರುವ ಒಂದು ಸಾಮಾನ್ಯ ರೀತಿಯ ಮನೆಯನ್ನು ಕಟ್ಟಿಕೊಂಡು ರಡ್ಡೆಪ್ಪ ಸಹೋದರರು ಅದರಲ್ಲಿ ವಾಸ ಮಾಡುತ್ತಿದ್ದರು.

ಒಬಳಬಂಡಿ ಗ್ರಾಮದ ಗಂಗಾಧರ ತಂದೆ ಸಿದ್ದಪ್ಪ ಎಂಬ ಶ್ರೀಮಂತನೊಬ್ಬನ ಕಣ್ಣು ಗ್ರಾಮದ ಮಧ್ಯಭಾಗದಲ್ಲಿರುವ ಈ ನಿವೇಶನದ ಮೇಲೆ ಬಿದ್ದು ಅದನ್ನು ಕಬಳಿಸಲು ಆತ ಮುಸಲಾಪುರ ಪಂಚಾಯತಿ ಅಧ್ಯಕ್ಷರ ಮತ್ತು ತಾಲೂಕ ಪಂಚಾಯತಿ ಅಧಿಕಾರಿಗಳ ನೆರವಿನಿಂದ ಸುಳ್ಳು ದಾಖಲೆ ಪತ್ರಗಳನ್ನು ಸೃಷ್ಟಿಸುವುದರಲ್ಲಿ ಯಶಸ್ವಿಯಾದನು. ಪ್ರಕರಣವು ನ್ಯಾಯಾಲಯದ ಕಟ್ಟೆ ಏರಿತು. ಕೆಳಗಿನ ನ್ಯಾಯಾಲಯದಲ್ಲಿ ರಡ್ಡೆಪ್ಪ ಸಹೋದರರಿಗೆ ಜಯವಾಯಿತು. ಆದರೆ ಮೇಲಿನ ಕೋರ್ಟಿನಲ್ಲಿ ಮೇಲ್ಮನವಿ ವಿಚಾರಣೆಗೆ ಒಳಪಟ್ಟಾಗ ವಕೀಲರಿಗೆ ಸಕಾಲದಲ್ಲಿ ಹಣ ಪಾವತಿ ಮಾಡಲಾಗದೆ ಸೋಲುವಂತಾಯಿತು. ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ನೀಡಿ ನಿವೇಶನವನ್ನು ಬಿಟ್ಟುಕೊಡಬೇಕೆಂಬ ಆದೇಶವನ್ನು ಪಡೆಯಲು ಗಂಗಾಧರಪ್ಪನಿಗೆ ಸಾಧ್ಯವಾಯಿತು. ರಡ್ಡೆಪ್ಪ ಸಹೋದರರಿಗೆ ಅನ್ಯಾಯವಾದ ಸುದ್ದಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಸಂಘದ ಗಂಗಾವತಿ ತಾಲ್ಲೂಕ ಸಮಿತಿಗೆ ತಲುಪಿದ ತಕ್ಷಣ ಅದು ಕಾರ್ಯೋನ್ಮುಖವಾಯಿತು. ಪ್ರಕರಣಕ್ಕೆ ಸಂಬಂಧಪಟ್ಟು ಎಲ್ಲಾ ದಾಖಲೆಗಳನ್ನು ಪಡೆದು ಮಾಧ್ಯಮಗಳ ಮುಂದೆ ಇಡಲಾಯಿತು. ಮಾಧ್ಯಮದ ಪ್ರತಿನಿಧಿಗಳು ಸ್ವತಂತ್ರವಾದ ಪರಿಶೀಲನೆ ನಡೆಸಿ ಸತ್ಯವನ್ನು ಬಯಲಿಗೆಳೆದರು. ಗಂಗಾಧರಪ್ಪ ಮನೆಯನ್ನು ಖಾಲಿ ಮಾಡಲು ಒತ್ತಾಯ ಮಾಡತೊಡಗಿದಾಗ ರಡ್ಡೆಪ್ಪ ಸಹೋದರರ 5 ಕುಟುಂಬಗಳ ಎಲ್ಲಾ ಸದಸ್ಯರು ಮಕ್ಕಳು ಮಹಿಳೆಯರು ಸೇರಿ ತಾಲೂಕ ಪಂಚಾಯತ್ ಕಾರ್ಯಾಲಯದ ಎದುರು ಅನಿರ್ದಿಷ್ಟ ಸತ್ಯಾಗ್ರಹವನ್ನು ಆರಂಭಿಸಿದರು. ಕರ್ನಾಟಕ ಪ್ರಾಂತ ಕೂಷಿ ಕೂಲಿಕಾರರ ಸಂಘ ನಿರಂತರವಾಗಿ ಅವರ ಬೆಂಬಲಕ್ಕೆ ನಿಂತಿತು. ಹಳ್ಳಿಹಳ್ಳಿಗಳಿಂದ ಬೆಂಬಲ ಹರಿದುಬಂತು. ಸತ್ಯಾಗ್ರಹನಿರತರಿಗೆ ಅಗತ್ಯವಾದ ಆಹಾರ ಪದಾರ್ಥಗಳನ್ನು ಗ್ರಾಮ ಗ್ರಾಮಗಳಿಂದ ಒದಗಿಸಲಾಯಿತು. ಗಂಗಾಧರಪ್ಪನಿಂದ ಲಂಚ ಪಡೆದು ಶಾಮೀಲಾಗಿದ್ದ ಅಧಿಕಾರಿಗಳಲ್ಲಿ ನಡುಕ ಉಂಟಾಯಿತು. ಒಬಳಬಂಡಿ ಊರಿಗೆ ಊರೇ ರಡ್ಡೆಪ್ಪ ಸಹೋದರರ ಬೆಂಬಲಕ್ಕೆ ನಿಂತಿತು. ತಾಲೂಕಿನಾದ್ಯಂತ ಇದು ಮನೆಮನೆಯ ಸುದ್ದಿಯಾಯಿತು. ಪೋಲೀಸರಿಗೆ ನ್ಯಾಯಾಲಯದ ಆದೇಶ ಜಾರಿ ಮಾಡಲು ಸಾಧ್ಯವಾಗಲಿಲ್ಲ.



ಕೋರ್ಟಿನ ಬೇಲಿಫ್ ಖಬ್ಜಾ ವಾರೆಂಟ್ ವಾಪಸ್ ಮಾಡುವಂತಾಯಿತು. ಕೋರ್ಟಿನ ಆದೇಶದಲ್ಲಿ ಖುಲ್ಲಾ ಜಾಗ ಎಂದು ಸೂಚಿಸಲಾಗಿತ್ತು. ಆದರೆ ಜಾಗದಲ್ಲಿ ಮನೆ ಇರುವುದರಿಂದ ಕೋರ್ಟಿನ ಆದೇಶ ಜಾರಿಗೊಳಿಸಲು ಬರುವಂತಿರಲಿಲ್ಲ. ಒಬ್ಬ ಬಡ ಕುಟುಂಬದ ಮೇಲೆ ಅನ್ಯಾಯ ನಡೆಯುತ್ತಿರುವಾಗ ಅದರ ಒತ್ತಡ ಸಹಜವಾಗಿಯೇ ತಾಲೂಕಿನ ಶಾಸಕರೂ, ಜಿಲ್ಲೆಯ ಉಸ್ತುವಾರಿ ಮಂತ್ರಿಗಳೂ ಆಗಿರುವ ಮಲ್ಲಿಕಾರ್ಜುನ ನಾಗಪ್ಪನವರ ಮೇಲೆ ಬಿತ್ತು.

ಸಚಿವರ ಮಧ್ಯಸ್ಥಿಕೆಯಿಂದಾಗಿ 24-1-04 ರಂದು ರಾಜಿ ಪಂಚಾಯತಿಯೊಂದು ಏರ್ಪಟ್ಟಿತು. ಅಡಿವೆಪ್ಪ ಶ್ಯಾಮಪ್ಪ, ಮಹಾದೇವಪ್ಪ ಬಸಟ್ಟೆಪ್ಪ, ಮುಕ್ಕಾಲಪ್ಪ ಭರಮಪ್ಪ, ಮಹಮ್ಮದ್‌ಸಾಬ, ಮೌಲಾಸಾಬ, ಈಶ್ವರಪ್ಪ ಬೀರಪ್ಪ ಎಂಬ ಗ್ರಾಮದ ಪಂಚರ ಸಮಕ್ಷಮ, ಗಂಗಣ್ಣ, ಬಸನಗೌಡ್ರು, ಮಹಾಬಲೇಶ್ವರ ಸ್ವಾಮಿಗಳು, ವಿರೂಪಾಕ್ಷಪ್ಪ ದೇಸಾಯಿ, ಗಂಗಾಧರ ಸಜ್ಜನ ಮೊದಲಾದ ಹಿರಿಯರ ಸಮಕ್ಷಮ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಮುಖಂಡರ ಎದುರು ಗಂಗಾಧರಪ್ಪ ನ್ಯಾಯಾಲಯದ ಮುಂದಿರುವ ಕೇಸನ್ನು ವಾಪಸ್ ಪಡೆಯಬೇಕೆಂದೂ ರಡ್ಡೆಪ್ಪ ತನ್ನ ಮನೆಯ ಮುಂದೆ 5 ಅಡಿಗಳಷ್ಟು ಜಾಗವನ್ನು ಇಟ್ಟುಕೊಂಡು ಉಳಿದ ಖಾಲಿ ಜಾಗವನ್ನು ಮಾತ್ರ ಗಂಗಾಧರಪ್ಪನಿಗೆ ಬಿಟ್ಟುಕೊಡಬೇಕು ಎಂಬ ಒಪ್ಪಂದವಾಯಿತು. ಲಿಖಿತ ಒಪ್ಪಂದಕ್ಕೆ ಉಭಯ ಪಕ್ಷದವರು ಸಹಿ ಹಾಕಿದರು.

ಕೊನೆಗೂ ನಿವೇಶನವನ್ನು ಕಬಳಿಸುವ ಗಂಗಾಧರಪ್ಪನ ಯತ್ನ ವಿಫಲವಾಯಿತು. ರಡ್ಡೆಪ್ಪ ಮತ್ತು ಸಹೋದರರು ಕಳೆದ 25 ವರ್ಷಗಳಿಂದ ಏಕಾಂಗಿಯಾಗಿ ಹೋರಾಡುತ್ತಾ ಬಂದಿದ್ದರು. ಕೂಲಿಕಾರರ ಸಂಘದ ಬೆಂಬಲ ಅವರಿಗೆ ಮರಳಿ ಜೀವ ತಂದುಕೊಟ್ಟಿದೆ. ಹೋರಾಟದಿಂದ ಅನ್ಯಾಯವನ್ನು ತಡೆಗಟ್ಟಬಹುದೆಂಬ ವಿಶ್ವಾಸ ಅವರಲ್ಲಿ ಮೂಡಿದೆ. ಕೂಲಿಕಾರರ ಸಂಘದ ಈ ಸಾಧನೆ ತಾಲೂಕಿನಾದ್ಯಂತ ಚರ್ಚೆಯಾಗುತ್ತಿದ್ದು ಸಂಘಟನೆಯ ಪ್ರಭಾವ ವ್ಯಾಪಕವಾಗಿ ಹರಡುವಂತಾಗಿದೆ.

ಮಹಿಳಾ ಬೀಡಿ ಕಾರ್ಮಿಕರಿಂದ ಬ್ಯಾಂಕ್‌ಗೆ ಮುತ್ತಿಗೆ

ನಿವೇಶನ ಖರೀದಿಸಲು ಸಾಲ ನೀಡಬೇಕೆಂದು ಒತ್ತಾಯಿಸಿ ರಾಮದುರ್ಗದ ಮಹಿಳಾ ಬೀಡಿ ಕಾರ್ಮಿಕರು ಡಿ.31 ರಂದು ಮಲಪ್ರಭಾ ಗ್ರಾಮೀಣ ಬ್ಯಾಂಕಿಗೆ ಮುತ್ತಿಗೆ ಹಾಕಿದರು. ಮೆರವಣಿಗೆ ಮೂಲಕ ಆಗಮಿಸಿದ ಇನ್ನೂರಕ್ಕೂ ಹೆಚ್ಚು ಬೀಡಿ ಕಾರ್ಮಿಕ ಮಹಿಳೆಯರು ಬ್ಯಾಂಕಿನ ಕಟ್ಟಡದ ಒಳಗಡೆ ಆಗಮಿಸಿ ಪ್ರತಿಭಟನಾ ಘೋಷಣೆ ಕೂಗಿದರು.

ಮಲಪ್ರಭಾ ಗ್ರಾಮೀಣ ಬ್ಯಾಂಕಿನ ಸ್ಥಳೀಯ ವ್ಯವಸ್ಥಾಪಕರು ಪ್ರಧಾನ ವ್ಯವಸ್ಥಾಪಕರಿಗೆ ದೂರವಾಣಿ ಮೂಲಕ ಪ್ರತಿಭಟನೆ ವಿವರ ತಿಳಿಸಿದರು.

ಕಾರ್ಮಿಕ ಮುಖಂಡರನ್ನು ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು ಆಹ್ವಾನಿಸಿದ ನಂತರವೇ ತಮ್ಮ ಮುಷ್ಕರ ನಿಲ್ಲಿಸಿದರು. ಕಾರ್ಮಿಕರಿಗೆ ಸಮರ್ಪಕ ಸಂಬಳ ಸಿಗದೆ ಅವರ ಪರಿಸ್ಥಿತಿ ತುಂಬಾ ಶೋಚನೀಯವಾಗಿದೆ. ಕೇಂದ್ರ ಸಮಾಜ ಕಲ್ಯಾಣ ಇಲಾಖೆಯು ಬೀಡಿ ಕಾರ್ಮಿಕರಿಗೆ ಉಚಿತ ಮನೆ ನಿರ್ಮಿಸುವ ಯೋಜನೆ ರೂಪಿಸಿದೆ. ಆ ಯೋಜನೆಯ ಲಾಭ ಪಡೆಯಲು ಸ್ವಂತ ನಿವೇಶನದ ಅವಶ್ಯಕತೆಯಿದ್ದು ನಿವೇಶನ ಖರೀದಿಸಲು ಸುಮಾರು 10 ಲಕ್ಷ ರೂ. ಬೇಕಾಗಿದೆ. ಸಂಘಕ್ಕೆ ಯಾವುದೇ ಆರ್ಥಿಕ ಮೂಲಗಳು ಇಲ್ಲದ್ದರಿಂದ ಬ್ಯಾಂಕಿನ ಸಾಲ ಪಡೆದು ನಿವೇಶನ ಖರೀದಿಸಲು ಸಾಲದ ಅವಶ್ಯಕತೆಯಿದೆ ಎಂದು ಗೈಬು ಜೈನೆಖಾನ ತಿಳಿಸಿದರು.

ಕಾರ್ಮಿಕರಿಗೆ ನಿವೇಶನ ಒದಗಿಸಲು ಬೀಡಿ ಕಾರ್ಮಿಕ ಸಂಘದ ವತಿಯಿಂದ ಪ್ರಯತ್ನಿಸಲಾಗುತ್ತಿದೆ. ನಿವೇಶನ ಖರೀದಿಗೆ 5 ಸಾವಿರ ರೂ. ಅವಶ್ಯಕತೆ ಇದ್ದು ಅದನ್ನು ಭರಿಸಲು ಬಡ ಬೀಡಿ ಕಾರ್ಮಿಕರಿಗೆ ಅಸಾಧ್ಯವಾಗಿದ್ದರಿಂದ ಅನಿವಾರ್ಯವಾಗಿ ಬ್ಯಾಂಕ್ ಸಾಲ ಅವಲಂಬಿಸಬೇಕಾಗಿದೆ ಎಂದು ಅವರು ಹೇಳಿದರು.

ಹಿರೇ ಹುಲ್ಲಾಳ ಶಾಲೆಗೆ 'ಬೀಗ' ಪ್ರತಿಭಟನೆ

ಹೀರೆಹುಲ್ಲಾಳ ಗ್ರಾಮದ ಪ್ರಾಥಮಿಕ ಶಾಲೆಗೆ ಶಿಕ್ಷಕರನ್ನು ನೇಮಿಸುವಂತೆ ಆಗ್ರಹಿಸಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಹಾವೇರಿ ಜಿಲ್ಲೆಯ ಹಿರೇಹುಲ್ಲಾಳ ಗ್ರಾಮದ ಪ್ರಾಥಮಿಕ ಶಾಲೆಯಲ್ಲಿ ಖಾಲಿ ಇರುವ ಶಿಕ್ಷಕ ಹುದ್ದೆಗಳನ್ನು ಭರ್ತಿ ಮಾಡುವಂತೆ ಒತ್ತಾಯಿಸಿ ಪ್ರಾಥಮಿಕ ಶಾಲೆಗೆ ಡಿವೈಎಫ್‌ಐ ಗ್ರಾಮ ಘಟಕದ ನೇತೃತ್ವದಲ್ಲಿ ವಿದ್ಯಾರ್ಥಿಗಳು ಬೀಗ ಜಡಿದು ಜನವರಿ 27 ರಂದು ಪ್ರತಿಭಟನೆ ನಡೆಸಿದರು.

ಗ್ರಾಮಸ್ಥರು ಶಾಲೆ ವಿದ್ಯಾರ್ಥಿಗಳೊಂದಿಗೆ ಗ್ರಾಮದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ಶಿಕ್ಷಣ ಇಲಾಖೆಯ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿದರು. ಮೆರವಣಿಗೆ ನಂತರ ಪ್ರತಿಭಟನಾ ಸಭೆಯಾಗಿ ಬದಲಾಯಿತು.

ಡಿವೈಎಫ್‌ಐನ ಜಿಲ್ಲಾ ಮುಖಂಡ ಗಂಗಯ್ಯ ಕುಲಕರ್ಣಿ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿ, ಕಳೆದ ಹಲವು ದಿನಗಳಿಂದ ಶಾಲೆಯಲ್ಲಿ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಇದರಿಂದಾಗಿ ಶಾಲೆಯಲ್ಲಿ ತರಗತಿಗಳು ನಡೆಯದೆ ವಿದ್ಯಾರ್ಥಿಗಳು ಪರದಾಡುವಂತಾಗಿದೆ. ಈ ಕುರಿತು ಸ್ಥಳೀಯ ಶಾಸಕರಿಗೆ ಹಾಗೂ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಕೂಡ ಯಾವುದೇ ಪ್ರಯೋಜನವಾಗಿಲ್ಲ ಎಂದರು.

ನಂತರ ಪ್ರತಿಭಟನಾ ಸ್ಥಳಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ ಜಿ.ಪರಮೇಶ್ವರಪ್ಪ ಭೇಟಿ ನೀಡಿ, ಈ ಹಿಂದೆ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶಿಕ್ಷಕರು ಕೃಪಾಂಕ ಆಧಾರದ ಮೇಲೆ ನೇಮಕಗೊಂಡವರಾಗಿದ್ದರು. ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಈಗ ಈ ಶಿಕ್ಷಕರು ಕಾರ್ಯನಿರ್ವಹಿಸುತ್ತಿಲ್ಲ. ಇದರಿಂದಾಗಿಯೇ ಶಾಲೆಯಲ್ಲಿ ಶಿಕ್ಷಕರ ಕೊರತೆ ಇದೆ ಎಂದರು.

ಶಿಕ್ಷಣಾಧಿಕಾರಿಗಳ ಮಾತಿಗೆ ಕಿವಿಗೊಡದ ಪ್ರತಿಭಟನಾಕಾರರು ಶಿಕ್ಷಕರನ್ನು ನೇಮಿಸುವವರೆಗೂ ಪ್ರತಿಭಟನೆ ಹಿಂದಕ್ಕೆ ಪಡೆಯುವುದಿಲ್ಲ ಎಂದು ಪಟ್ಟುಹಿಡಿದರು. ನಂತರ ಶಿಕ್ಷಣಾಧಿಕಾರಿಗಳು ತಾತ್ಕಾಲಿಕವಾಗಿ ಇಬ್ಬರು ಶಿಕ್ಷಕರನ್ನು ನಿಯೋಜಿಸುವುದಾಗಿ ಭರವಸೆ ನೀಡಿದ ಮೇಲೆ ಪ್ರತಿಭಟನೆ ಹಿಂದಕ್ಕೆ ಪಡೆಯಲಾಯಿತು. ಮಾರನೇ ದಿನದಿಂದಲೇ ಇಬ್ಬರು ಶಿಕ್ಷಕರು ಶಾಲೆಗೆ ಹಾಜರಾದರು.

ಡಿವೈಎಫ್‌ಐ ಹಿರೆಮಲ್ಲಾಳ ಗ್ರಾಮ ಘಟಕದ ಅಧ್ಯಕ್ಷ ಪುಟ್ಟಪ್ಪ ಮಾಳಗಿ, ರವಿಕುಮಾರ ದೊಡ್ಡಮನಿ, ಆನಂದ ಹಾದೆಣ್ಣನವರ, ಪುಟ್ಟು ಕೋಡಿಹಳ್ಳಿ, ಜನದೀಶ ಗೂಳನಗೌಡ್ರ,



ಪ್ರೊ. ನಂಜುಂಡಸ್ವಾಮಿ ನಿಧನ
ಸಿಪಿಐ(ಎಂ) ಸಂತಾಪ

ರಾಜ್ಯದಲ್ಲಿ ಸಮಾಜವಾದಿ ಚಳುವಳಿಯ ಪ್ರಮುಖ ನಾಯಕರಲ್ಲೊಬ್ಬರಾದ ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡ ಪ್ರೊ. ನಂಜುಂಡಸ್ವಾಮಿಯವರ ನಿಧನಕ್ಕೆ ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ (ಸಿಪಿಐ-ಎಂ) ಸಂತಾಪವನ್ನು ವ್ಯಕ್ತಪಡಿಸಿದೆ.

ಲೋಹಿಯಾವಾದಿಯಾಗಿದ್ದ ನಂಜುಂಡಸ್ವಾಮಿಯವರು ಹಲವಾರು ದ್ರಶಕಗಳ ಕಾಲ ಸಮಾಜವಾದಿ ಚಳುವಳಿಗೆ ತನ್ನ ಕಾಣಿಕೆ ನೀಡಿದ್ದು, ಅಂದಿನ ಕಾಂಗ್ರೆಸ್ ಸರ್ವಾಧಿಕಾರದ ವಿರುದ್ಧ ಜಯಪ್ರಕಾಶ್ ನಾರಾಯಣ್ ನೇತೃತ್ವದಲ್ಲಿ ನಡೆದ ಚಳುವಳಿಯಲ್ಲಿ ನೇರವಾಗಿ ಭಾಗವಹಿಸಿ, ಜನರನ್ನು ಅಣಿ ನೆರೆಸಿದರು.



80 ರ ದಶಕದಲ್ಲಿ ಗುಂಡುರಾಯರ ಸರ್ಕಾರದ ವಿರುದ್ಧ ನವಲಗುಂದ-ನರಗುಂದದಲ್ಲಿ ಭುಗಿಲೆದ್ದ ಸ್ವಯಂ ಸ್ಫೂರ್ತಿಯ ರೈತ ಚಳುವಳಿಯನ್ನು ಮುಂದುವರಿಕೊಂಡು ಹೋಗುವಲ್ಲಿ, ಆ ಮೂಲಕ ಕರ್ನಾಟಕದ ರೈತ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ ಮುಖಂಡರಲ್ಲಿ ಒಬ್ಬರಾಗಿದ್ದರು.

ಇತ್ತೀಚಿನ ದಿನಗಳಲ್ಲಿ ಜಾಗತೀಕರಣ, ಉದಾರೀಕರಣ ನೀತಿಗಳಿಂದಾಗಿ ಉಂಟಾದ ಪರಿಣಾಮದ ವಿರುದ್ಧ ಅದರಲ್ಲೂ ರೈತಾಪಿ ಜನತೆ ಅನುಭವಿಸುತ್ತಿರುವ ಸಂಕಟದ ವಿರುದ್ಧದ ಹೋರಾಟದಲ್ಲಿ ಮುತುವರ್ಜಿ ವಹಿಸಿದರು. ಲಾಭಕೋರ ಬಹುರಾಷ್ಟ್ರೀಯ ಸಂಸ್ಥೆಗಳ ವಿರುದ್ಧದ ಹೋರಾಟದಲ್ಲಿ ಪ್ರೊ. ನಂಜುಂಡಸ್ವಾಮಿಯವರ ಕಾಣಿಕೆ ಮಹತ್ತರವಾದುದು.

ರೈತ ಚಳುವಳಿಯ ಭಾಗವಾಗಿ ಧಾರವಾಡ ರೂರಲ್ ಕ್ಷೇತ್ರದಿಂದ ಕರ್ನಾಟಕ ವಿಧಾನಸಭೆಗೆ ಆಯ್ಕೆಯಾದ ನಂಜುಂಡಸ್ವಾಮಿಯವರು ರೈತರ ಸಮಸ್ಯೆಗಳನ್ನು ಎತ್ತಿ ಹಿಡಿಯುವಲ್ಲಿ ಸಫಲರಾಗಿದ್ದರು.

ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಅಗಲಿದ ನಾಯಕನಿಗೆ ಶ್ರದ್ಧಾಂಜಲಿ ಸಲ್ಲಿಸುತ್ತದೆ.

ದೇಶ ಅತ್ಯಂತ ಸಮೃದ್ಧವಾಗಿದೆ; ಸುಭಿಕ್ಷವಾಗಿದೆಯೆಂಬ ಮಹಾಮೋಸದ ಮಂಕುಬೂದಿ ಎರಚಲು ವಾಜಪೇಯಿ ಸರ್ಕಾರ ಹೊರಟಿದೆ. ಚುನಾವಣಾ ಉದ್ದೇಶದ ಸಂದರ್ಭಸಾಧಕತನಕ್ಕೆ ಕೆಲವರನ್ನು ಓಲೈಸಲು ಯತ್ನಿಸಿದೆ. ಈಗ ಮಂಡಿಸಿದ ಬಜೆಟ್ ಕೂಡ ಹಾದಿತಪ್ಪಿಸುವಂತಹದ್ದು. ಅದರಲ್ಲೇನಿದೆ ನೋಡಿ...

ಬೇಜವಾಬ್ದಾರಿ ಸರಕಾರದ ಹಾದಿ ತಪ್ಪಿಸುವ ಬಜೆಟ್



ಕೇಂದ್ರ ಸರಕಾರದ 2004 - 2005 ರ ಮಧ್ಯಾವಧಿ ಬಜೆಟ್‌ನ್ನು ಬೇಜವಾಬ್ದಾರಿ ಸರಕಾರದ ಹಾದಿ ತಪ್ಪಿಸುವ ಬಜೆಟ. ತನ್ನ ಬಜೆಟ್ ಭಾಷಣದಲ್ಲಿ ಕಳೆದ 50 ವರ್ಷಗಳಲ್ಲಿ ಈಗ ಮಾತ್ರವೇ ಆರ್ಥಿಕ ಸ್ಥಿತಿ ಉತ್ತಮಗೊಂಡಿದೆ ಎಂದು ಹಣಕಾಸು ಸಚಿವರು ನೀಡಿದ ಹೇಳಿಕೆ ಹಾಸ್ಯಾಸ್ಪದ .

ಪ್ರತಿಯೊಬ್ಬ ವ್ಯಕ್ತಿಗೆ ಲಭಿಸುತ್ತಿದ್ದ ಆಹಾರ ಧಾನ್ಯಗಳು ಶೇ.15 ರಷ್ಟು ಕುಸಿದಿದ್ದು 2ನೇ ಜಾಗತಿಕ ಯುದ್ಧದ ಕಾಲದಲ್ಲಿದ್ದುದಕ್ಕಿಂತ ಕಡಿಮೆಯಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದ್ದು, ಗ್ರಾಮೀಣ ಅಭಿವೃದ್ಧಿಗೆ ಮೀಸಲಾಗಿಟ್ಟ ಹಣ ರಾಷ್ಟ್ರೀಯ ಉತ್ಪನ್ನದ (ಜಿಡಿಪಿ) ಶೇ.6 ರಷ್ಟು ಇದ್ದು ಏಳನೇ ಪಂಚವಾರ್ಷಿಕ ಯೋಜನೆಯ ಸಂದರ್ಭದಲ್ಲಿ ಇದು ಶೇ.14.5 ರಷ್ಟಿತ್ತು. ಒಟ್ಟಾರೆಯಾಗಿ ನಿರುದ್ಯೋಗ ಹೆಚ್ಚಿದ್ದು ಗ್ರಾಮೀಣ ಪ್ರದೇಶದಲ್ಲಿ ಇನ್ನಷ್ಟು ತೀವ್ರಗೊಂಡಿದೆ. ಕೃಷಿ ಕೂಲಿಕಾರರು ವರ್ಷದಲ್ಲಿ ಸರಾಸರಿ 100 ದಿನಗಳಷ್ಟು ಕಾಲ ಮಾತ್ರ ಕೆಲಸ ಪಡೆದುಕೊಳ್ಳುತ್ತಿದ್ದಾರೆ. ಸ್ವಾತಂತ್ರ್ಯದ ನಂತರದ 56 ವರ್ಷಗಳ ಅವಧಿಯಲ್ಲಿ ಇಷ್ಟೊಂದು ಬಡತನ ನಿರುದ್ಯೋಗ, ರೈತರ ಸಂಕಷ್ಟ ಹಿಂದೆಂದೂ ಇರಲಿಲ್ಲ. ಬಿಜೆಪಿ ನೇತೃತ್ವದ ಎನ್.ಡಿ.ಎ. ಆಡಳಿತದಲ್ಲಿ ಮಾತ್ರ ಇದು ಸಾಧ್ಯವಾಗಿದೆ.

7.5/8 ಶೇ. ಅಭಿವೃದ್ಧಿ ಹೊಂದಿದೆ ಎಂದು ಹೇಳಲಾಗುತ್ತಿದೆ. ಈ 'ಅಭಿವೃದ್ಧಿ' ಕಳೆದ ವರ್ಷದ ಆಧಾರದಲ್ಲಿ ಅಂದಾಜಿಸಲಾಗಿದ್ದು, ಕಳೆದ ವರ್ಷದ ಆರ್ಥಿಕ ವ್ಯವಸ್ಥೆ ತೀರಾ ಕುಂಠಿತಗೊಂಡಿತ್ತು ಎಂಬುದನ್ನು ಗಮನಿಸಬೇಕು. ಕೈಗಾರಿಕಾ ಕ್ಷೇತ್ರ ಮತ್ತು ಕೃಷಿ ಉತ್ಪನ್ನ ಕಳೆದ ವರ್ಷ ತೀವ್ರ ಇಳಿಮುಖಗೊಂಡಿತ್ತು. ಆದ್ದರಿಂದಲೇ ಈ ವರ್ಷ ಶೇಕಡಾವಾರು ಅಭಿವೃದ್ಧಿ ಹೆಚ್ಚಾದಂತೆ ತೋರಿಕೆಗೆ ಕಾಣುತ್ತದೆ. ಹೂಡಿಕೆ ಪ್ರಮುಖ ಪಾತ್ರ ನಿರ್ವಹಿಸುತ್ತದೆ. 90 ರ ದಶಕದಲ್ಲಿ, ಬಂಡವಾಳ ಹೂಡಿಕೆಯ ದರ ಸ್ಥಗಿತಗೊಂಡಿದ್ದು ಎನ್.ಡಿ.ಎ. ಸರಕಾರ ಬಂದ ನಂತರ ಈ ದರವು 90 ರ ದಶಕದ ಆರಂಭಕ್ಕಿಂತಲೂ ಕಡಿಮೆಯಾಗಿದೆ. ಹಣಕಾಸು ಸಚಿವರು 'ಸಾಧನೆ' ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿರುವ 'ವಿದೇಶಿ ವಿನಿಮಯ ನಿಧಿಯು' ದೇಶದ ಕುತ್ತಿಗೆಗೆ ಕಟ್ಟಿರುವ ಬಂಡೆಯಾಗಿದೆ. ಅಂದರೆ ಈ ವಿದೇಶಿ ವಿನಿಮಯ ನಿಧಿಯು ಹೆಚ್ಚಲು ಕಾರಣ, ಶೇರು ಬಂಡವಾಳ ಮತ್ತಿತರ ಜೂಜುಕೋರ ಚಟುವಟಿಕೆಗಳಲ್ಲಿ ವಿದೇಶಿ ಬಂಡವಾಳವು ತೊಡಗಿಸಿದ ಹಣ. ಇದರಲ್ಲಿ, ದೇಶದ ಆರ್ಥಿಕತೆಗೆ ಲಾಭವಾಗುವುದಕ್ಕಿಂತ ಹೆಚ್ಚು ವಿದೇಶಿ ಬಂಡವಾಳಗಾರರಿಗೆ ಲಾಭವಾಗುತ್ತದೆ ಮತ್ತು ಈ 'ನಿಧಿ'ಯನ್ನು ಯಾವಾಗ ಬೇಕೆಂದರೂ ತೆಗೆದುಕೊಂಡು ಹೋಗಬಹುದು.

'ಹಣಕಾಸು ವ್ಯವಸ್ಥೆ ಕ್ರೋಢೀಕರಣಗೊಳ್ಳುತ್ತಿದೆ' ಎಂದು ಸಚಿವರು ಹೇಳುವುದಕ್ಕೆ ಯಾವುದೇ ಆಧಾರವಿಲ್ಲ. ಏಕೆಂದರೆ, ಹಣಕಾಸಿನ ಆರೋಗ್ಯವನ್ನು ನಿಜವಾಗಿಯೂ ನಿರ್ಧರಿಸುವುದು ಆದಾಯದ ಕೊರತೆ ಎಷ್ಟು ಎಂಬುದರ ಮೂಲಕ ಆದಾಯದ ಕೊರತೆ ಜಾಸ್ತಿಯಾಗಿದೆ. ಅಂದರೆ 1999-2000 ರಲ್ಲಿ ಶೆ.3.5 ರಷ್ಟಿದ್ದ ಆದಾಯದ ಕೊರತೆ ಈ ವರ್ಷ 2003-04 ಕ್ಕೆ 3.6 ಕ್ಕೆ ಏರಿದೆ.

ಜನ ಸಾಮಾನ್ಯರ ಸಂಕಷ್ಟದ ನಡುವೆಯೂ ಕೇಂದ್ರ ಸರಕಾರ ಮಾಡಿದ್ದು ಏನೆಂದರೆ, ಶ್ರೀಮಂತ ವಿಭಾಗಕ್ಕೆ ರಿಯಾಯತಿ ನೀಡಿದ್ದು. ಆಸ್ತಿ ಮಾರಾಟದಿಂದ ಬರುವ ಆದಾಯಕ್ಕೆ ತೆರಿಗೆ ರಿಯಾಯತಿ, ವಿಮಾನ ನಿಲ್ದಾಣಗಳ ಆಧುನೀಕರಣಕ್ಕೆ ಆದ್ಯತೆ, ವಿದೇಶಿ ಪ್ರಯಾಣಿಕರಿಗೆ ಸುಂಕ ಕಡಿತ, ಆಸ್ತಿ ಮಾರಾಟಕ್ಕೆ ಅನುಕೂಲವಾಗುವಂತೆ ಸ್ಟಾಂಪ್ ತೆರಿಗೆ ಕಡಿತ ಇತ್ಯಾದಿಗಳಿಂದ ಸಾಮಾನ್ಯ ಜನರಿಗೆ ಯಾವುದೇ ಪರಿಹಾರ ದೊರಕುವುದಿಲ್ಲ. ಗ್ರಾಮೀಣ ಪ್ರದೇಶಗಳಿಗಾಗಿ ಪ್ರಕಟಿಸಿದ ಯೋಜನೆಗಳಿಗೆ ಬಜೆಟ್‌ನಲ್ಲಿ ಯಾವುದೇ ಹಣ ನೀಡದೆ, ಇತರೆ ಮೂಲಗಳಿಂದ ಹಣ ಕ್ರೋಢೀಕರಿಸಲು ಹೇಳಲಾಗಿದೆ. ಬಡತನ ಹೆಚ್ಚಳವಾಗಿರುವುದರಿಂದ ಅಂತ್ಯೋದಯ ಯೋಜನೆಯಲ್ಲಿ ಇನ್ನೂ 50 ಲಕ್ಷ ಸೇರಿಸಿರುವುದರಿಂದ ಹೇಳಿಕೊಳ್ಳುವಂತಹ ಪ್ರಯೋಜನವೇನೂ ಆಗುವುದಿಲ್ಲ. ಹಾಗೆಯೇ ಬ್ಯಾಂಕಿಂಗ್ ಉದ್ದಿಮೆಯಲ್ಲಿ ಆದ್ಯತಾ ವಲಯಕ್ಕೆಂದು ಹಣ ಮೀಸಲಿಟ್ಟರೂ, ಗ್ರಾಮೀಣ ಪ್ರದೇಶಕ್ಕೆ ನೀಡುತ್ತಿರುವ ಸಾಲ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಅಂತಹುದರಲ್ಲಿ ರೈತರಿಗೆ ಸಾಲ ಹೆಚ್ಚಿಸಬೇಕೆಂದು ಬ್ಯಾಂಕುಗಳಿಗೆ ಸೂಚಿಸುವುದರಲ್ಲಿ ಯಾವುದೇ ಅರ್ಥವಿಲ್ಲ.

ಒಟ್ಟಾರೆಯಾಗಿ ಮಧ್ಯಾವಧಿ ಬಜೆಟ್ ಜನರ ದಿಕ್ಕು ತಪ್ಪಿಸುವ ತಂತ್ರವಾಗಿದೆ. ಜತೆಯಲ್ಲಿ ಜನಸಾಮಾನ್ಯರ ಹಣದಿಂದ ಜಾಹೀರಾತುಗಳ ಮೂಲಕ ಸುಳ್ಳಿನ ಸರಮಾಲೆಯನ್ನು ಪ್ರಚಾರ ಮಾಡಲಾಗುತ್ತಿದೆ. ಮಧ್ಯಂತರ ಬಜೆಟ್ ವಂಚನೆಯ ತಂತ್ರವಾಗಿದ್ದು ಜನತೆ ಇದನ್ನು ಗಮನಿಸಬೇಕೆಂದು ಸಿಪಿಐ(ಎಂ) ಪಾಲಿಟ್ ಬ್ಯೂರೊ ಕರೆನೀಡಿದೆ.

ತನ್ನ ಚುನಾವಣಾ ಉದ್ದೇಶಗಳಿಗಾಗಿ ಕೆಲವೊಂದು ವಿಭಾಗದ ಜನರನ್ನು ಓಲೈಸಲು ಎನ್.ಡಿ.ಎ. ಸರಕಾರ ಬಯಸಿದ್ದು, ಇದು ಸರಕಾರದ ಬೇಜವಾಬ್ದಾರಿತನವನ್ನು ಎತ್ತಿ ತೋರಿಸುತ್ತದೆ. ಕಳೆದ ನಾಲ್ಕು ವರ್ಷಗಳಲ್ಲಿ ಜನತೆಯ ಮೇಲೆ ಹೇರಿದ್ದ ವಿಪರೀತ ಹೊರೆಯನ್ನು ಮರೆಮಾಚಲು ಈ ಬಜೆಟನ್ನು ಬಳಸಲಾಗಿದೆ. ಸಾರ್ವತ್ರಿಕ ಚುನಾವಣೆಯ ನಂತರ ಅಧಿಕಾರಕ್ಕೆ ಬರುತ್ತೇವೆ ಎನ್ನುವ ನಂಬಿಕೆ ಎನ್.ಡಿ.ಎ. ಸರಕಾರಕ್ಕಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಧರಣಿ ಸತ್ಯಾಗ್ರಹ

ತಮ್ಮ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಜನವರಿ 22 ರಂದು ರಾಜ್ಯಾದ್ಯಂತ ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯ ಕೇಂದ್ರದಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರ ನಡುವಿನ ವೇತನ, ಡಿಸಿಆರ್‌ಜಿ ಕುಟುಂಬ ಪಿಂಚಣಿ ಕಮ್ಯುಟೇಶನ್, ರಜೆ ನಗದೀಕರಣ, ಮುಂತಾದ ತಾರತಮ್ಯಗಳನ್ನು ಕೂಡಲೇ ನಿವಾರಿಸಿ, ಸಮಾನ ವೇತನ ಹಾಗೂ ಇತರೆ ಸೌಲಭ್ಯಗಳನ್ನು ನೀಡುವುದು.

ಜುಲೈ 2003 ರಿಂದ ಬಾಕಿಯಿರುವ ಶೇ.4 ರಷ್ಟು ತುಟ್ಟಿಭತ್ಯೆ ಬಾಕಿಯನ್ನು ಕೂಡಲೇ ಬಿಡುಗಡೆ ಮಾಡಬೇಕು.

ನಿವೃತ್ತಿ ವೇತನಗಳ ಸುಧಾರಣೆ ಹೆಸರಿನಲ್ಲಿ ನೌಕರರ ನಿವೃತ್ತಿ ವೇತನ ಉಪದಾನಗಳನ್ನು ಕಡಿತಗೊಳಿಸಲು ಹೊರಡಿಸಿರುವ ಕರಾಳ ಆದೇಶವನ್ನು ಕೂಡಲೇ ಹಿಂದಕ್ಕೆ ಪಡೆಯಬೇಕು.

ಆಡಳಿತ ಸುಧಾರಣೆಗಳ ಹೆಸರಿನಲ್ಲಿ ಹುದ್ದೆಗಳ ಕಡಿತ, ಇಲಾಖೆಗಳ ರದ್ದತಿ ದೊಡ್ಡ ಪ್ರಮಾಣದ ಗಣಕೀಕರಣ ಕಾರ್ಯಗಳನ್ನು ಕೂಡಲೇ ನಿಲ್ಲಿಸಬೇಕು.

ಖಾಲಿ ಹುದ್ದೆಗಳಿಗೆ ನಿರುದ್ಯೋಗಿ ವಿದ್ಯಾವಂತರನ್ನು ಕೂಡಲೇ ನೇಮಕಾತಿ ಮಾಡಬೇಕು.

ಇಲಾಖೆಗಳ ಖಾಸಗೀಕರಣ, ಗುತ್ತಿಗೆ ಆಧಾರದ



ನೇಮಕಾತಿಗಳು, ನಿವೃತ್ತರ ನೇಮಕಾತಿಗಳನ್ನು ಕೂಡಲೇ ನಿಲ್ಲಿಸಬೇಕು.

ರಾಜ್ಯ ಸರ್ಕಾರಿ ನೌಕರರಿಗೆ ಮುಷ್ಕರದ ಹಕ್ಕು ಇಲ್ಲ ಎಂಬ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ ಸಂಬಂಧಿಸಿದಂತೆ ಕೂಡಲೇ ಸಂವಿಧಾನದ ತಿದ್ದುಪಡಿಯನ್ನು ಕೇಂದ್ರ ಸರ್ಕಾರ ಮಾಡಬೇಕು. ವಹತೆ ನಿಯಮಗಳಿಗೆ ಸೂಕ್ತ ಪ್ರಜಾಪ್ರಭುತ್ವ ರೀತಿಯಲ್ಲಿ ನೌಕರರಿಗೆ ಹಕ್ಕು ನೀಡುವ ತಿದ್ದುಪಡಿಗಳನ್ನು ಮಾಡಬೇಕು. ಕೇಂದ್ರ ಸರ್ಕಾರಿ ಮತ್ತು ಎಲ್ಲಾ ರಾಜ್ಯಗಳಲ್ಲಿ 2-3 ಸಂಘಟನೆಗಳಿಗೆ ಮಾನ್ಯತೆ ಇರುವಂತೆ ನಮ್ಮ ರಾಜ್ಯದಲ್ಲಿಯೂ ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟಕ್ಕೂ ಸದಸ್ಯತ್ವದ ಆಧಾರದ ಮೇಲೆ ಮಾನ್ಯತೆಯನ್ನು ಕೂಡಲೇ ನೀಡಬೇಕು.

ಗ್ರೂಪ್ ಸಿ ಮತ್ತು ಡಿ ವರ್ಗದ ನೌಕರರಿಗೆ ನೀಡುತ್ತಿರುವ ಮಾಸಿಕ ವೈದ್ಯಕೀಯ ಭತ್ಯೆಯನ್ನು ರೂ.250 ಹೆಚ್ಚಿಸಬೇಕು.

ಪ್ರಾಥಮಿಕ ಶಾಲಾ ಶಿಕ್ಷಕರು ಸರ್ಕಾರಿ ನೌಕರರಲ್ಲವೆಂಬ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಕೂಡಲೇ ಪರಿಷ್ಕರಿಸಬೇಕೆಂದು ಒತ್ತಾಯಿಸಿ ಧರಣಿ ನಡೆಸಿದರು.

ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳ, ಬಳ್ಳಾರಿ, ಬಿಜಾಪುರ, ಹಾವೇರಿ, ದಾವಣಗೆರೆ, ಬೆಳಗಾಂ, ಧಾರವಾಡ, ಗದಗ, ದಕ್ಷಿಣಕನ್ನಡ, ಕೊಡಗು, ಮಂಡ್ಯ, ಕೋಲಾರ ಮುಂತಾದ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಹಲವಾರು ತಾಲ್ಲೂಕು ಕೇಂದ್ರಗಳಲ್ಲಿ ಒಕ್ಕೂಟದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಧರಣಿ ಸತ್ಯಾಗ್ರಹ ನಡೆಸಿ ತಹಶೀಲ್ದಾರರು ಮತ್ತು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಬೆಂಗಳೂರಿನಲ್ಲಿ ಮಹಾತ್ಮಗಾಂಧಿ ಪ್ರತಿಮೆ ಎದುರು ನೂರಾರು ಕಾರ್ಯಕರ್ತರು ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ರಾಜ್ಯ ಸರ್ಕಾರಿ ನೌಕರರ ಹಿರಿಯ ಮುಂದಾಳು ಕರುಣಾಕರ ಶೆಟ್ಟಿಯವರು ತಮ್ಮ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಧರಣಿ ಸತ್ಯಾಗ್ರಹವನ್ನು ಉದ್ಘಾಟಿಸಿದರು. ಒಕ್ಕೂಟದ ಮುಖಂಡರಾದ ಯು.ಡಿ.ನರಸಿಂಹಯ್ಯ, ಸಚ್ಚಿದಾನಂದ ಮೂರ್ತಿ, ಮಹಾದೇವಯ್ಯ ಮಠಪತಿ, ಅಮರ ನಾರಾಯಣ, ಚಂದ್ರಶೇಖರ್, ರಾಮಲಿಂಗ, ಪುಟ್ಟಸ್ವಾಮಿ ಗೌಡ, ರಮಾದೇವಿ, ಎಸ್.ಎಸ್. ಹದ್ದಿ, ಗೋಪಾಲಯ್ಯ, ರೇಣುಕಾರಾಧ್ಯ ಮೊದಲಾದವರು ವಿಶ್ವಬ್ಯಾಂಕ್ ನಿರ್ದೇಶನದಂತೆ, ನೌಕರರ ಮೇಲೆ ನಡೆಯುತ್ತಿರುವ ಧಾಳಿಗಳನ್ನು ಹಿಮ್ಮೆಟ್ಟಿಸಲು ಸಂಘಟಿತರಾಗಿ ಹೋರಾಟ ನಡೆಸುವಂತೆ ಕರೆ ನೀಡಿದರು.

ಖ್ಯಾತ ವಕೀಲರಾದ ಸುಬ್ಬರಾವ್, ಬ್ಯಾಂಕ್ ನೌಕರರ ಸಂಘಟನೆಯ ದೇವದಾಸ್‌ರಾವ್, ಸಿಐಟಿಯು ರಾಜ್ಯ ಕಾರ್ಯದರ್ಶಿ ಎಸ್. ವರಲಕ್ಷ್ಮಿ, ಡಿವೈಎಫ್‌ಐ ಮುಂದಾಳು ವಿಠಲ ಭಂಡಾರಿ, ಕೆ.ರಾಮಯ್ಯ ಹೆಗ್ಡೆ, ಚೆಲುವರಾಜ್ ಮತ್ತಿತರ ಮುಖಂಡರು ಒಕ್ಕೂಟದ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ ಮಾತನಾಡಿದರು. ನಂತರ ಒಕ್ಕೂಟದ ಪದಾಧಿಕಾರಿಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಬೇಡಿಕೆಗಳ ಮನವಿ ಸಲ್ಲಿಸಿದರು.

ವರದಿ. ಕೆ.ರಾಮಯ್ಯ ಹೆಗ್ಡೆ

ಎನ್‌ಡಿಎಗೆ ಸೇರಿದ ಧರ್ಮನಿರಪೇಕ್ಷ ಶಕ್ತಿಗಳ ಮುಂದಿರುವ ಅನಿವಾರ್ಯ ಚುನಾವಣೆಯೇನಲ್ಲ. ದೇಶದ ಭವಿಷ್ಯವೇ ಅದನ್ನು ಅವಲಂಬಿಸಿದೆ ಎಂಬುದ ಹಲವು ಪ್ರಶ್ನೆಗಳ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳಿವೆ. ಆದರೆ ಒಂದು ವಿಷಯ ಪ್ರಥಮ ಅವಶ್ಯಕತೆಯೆಂದರೆ ನಮ್ಮ ದೇಶವನ್ನು ಅದರ ಧರ್ಮನಿರಪೇಕ್ಷ ಸಂಸ್ಕೃತಿಯನ್ನು ಉಳಿಸುವುದು. ಇವು ನಮ್ಮ ಮೂಲಭೂತ ಗುರುತು. ಭಿನ್ನಾಭಿಪ್ರಾಯಗಳಿಗೆ ಏನಾದರೂ ಅರ್ಥ ಬರುವುದು? ದೇಶ ಹೋದರೆ ಎನ್‌ಡಿಎ ಯೇತರ ಧರ್ಮನಿರಪೇಕ್ಷ ಪಕ್ಷಗಳು ಮುಂದಿನ ಚುನಾ

ಬಿಜೆಪಿಯನ್ನು ಸೋ
ಅನಿವಾರ್ಯ

ಹೈದರಾಬಾದಿನಲ್ಲಿ ಜನವರಿ 29 ರಿಂದ 31 ರ ವರೆಗೆ ಸಭೆ ಸೇರಿದ ನಮ್ಮ ಪಕ್ಷದ ಕೇಂದ್ರ ಸಮಿತಿ 'ಮುಂಬರುವ ಲೋಕಸಭಾ ಹಾಗೂ ಕೆಲವು ರಾಜ್ಯಗಳಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳನ್ನು ಸೋಲಿಸುವುದು ಸಿಪಿಐ(ಎಂ) ಮತ್ತು ಎಡ ಹಾಗೂ ಪ್ರಜಾಪ್ರಭುತ್ವವಾದೀ ಶಕ್ತಿಗಳ ಪ್ರಧಾನ ಕರ್ತವ್ಯ; ಇದಕ್ಕನುಸಾರವಾಗಿ 14ನೇ ಲೋಕಸಭಾ ಚುನಾವಣೆಗಳ ನಂತರ ಒಂದು ಧರ್ಮನಿರಪೇಕ್ಷ ಸರ್ಕಾರ ರಚನೆಯಾಗುವಂತೆ ನೋಡುವುದು ಸಿಪಿಐ(ಎಂ)ನ ಮೂಲಭೂತ ಗುರಿಯಾಗಿರುತ್ತದೆ" ಎಂದು ಅಭಿಪ್ರಾಯಪಟ್ಟಿದೆ.

ಇದು ಅಕ್ಟೋಬರ್ 1998 ರಲ್ಲಿ 16ನೇ ಸಿಪಿಐ(ಎಂ) ಮಹಾಧಿವೇಶನ ಮಾಡಿರುವ ವಿಶ್ಲೇಷಣೆಗೆ ಅನುಗುಣವಾಗಿದೆ. ಬಿಜೆಪಿ ಕೇವಲ ಇನ್ನೊಂದು ಬಂಡವಾಳಶಾಹಿ- ಭೂಮಾಲಕ ಪಕ್ಷವಲ್ಲ, ಅದರ ಹಿಂದೆ ದೇಶದಲ್ಲಿ ಒಂದು ಮತೀಯ ಪ್ರಭುತ್ವ ಕಟ್ಟ ಬಯಸುವ ಫ್ಯಾಸಿಸ್ಟ್ ಮಾದರಿಯ ಆರ್‌ಎಸ್‌ಎಸ್ ಇದೆ ಎಂದು ವಿಶ್ಲೇಷಣೆ ಮಾಡಲಾಗಿತ್ತು.


ಸಂಘ ಪರಿವಾರದ ಮನಸ್ಸಿನಲ್ಲಿ ಎಂತಹ ಆಡಳಿತ ವಿಧಾನವಿದೆ ಎಂಬುದು ವಿಹೆಚ್‌ಪಿ ಮುಖಂಡ ಅಶೋಕ್ ಸಿಂಘಾಲ್ ಇತ್ತೀಚೆಗೆ ನೇಪಾಳದ ರಾಜನ ಬಗ್ಗೆ ಮಾಡಿರುವ ಪ್ರಶಂಸೆಯ ಮಹಾಪೂರದಿಂದಲೇ ಸ್ಪಷ್ಟವಾಗುತ್ತದೆ. ಆತನನ್ನು ಹಿಂದೂ ಧರ್ಮದ ರಕ್ಷಕ ಎಂದು ಹಾಡಿ ಹೊಗಳಲಾಗಿದೆ. ನೇಪಾಳದ ಜನತೆ ಇಂದು ಒಂದು ಗಣತಂತ್ರ ಸರಕಾರಕ್ಕಾಗಿ ಮಾಡುತ್ತಿರುವ ಜೀವನ್ಮರಣ ಹೋರಾಟದ ಬಗ್ಗೆ ಸಂಘ ಪರಿವಾರಕ್ಕೆ ಪ್ರೀತಿಯೇನೂ ಇಲ್ಲ. ಅವರ ಆಸಕ್ತಿಯೆಲ್ಲಾ ತನ್ನ ಸೋದರ ಮತ್ತು ಕುಟುಂಬದ ಇತರ ಸದಸ್ಯರ ಕೊಲೆಯ ಹಿಂದೆ ಇರಬಹುದೆಂದು ಬಹುಮಂದಿ ನಂಬಿರುವ ಒಂದು ಸಾಮ್ರಾಟನ ಬಗ್ಗೆ ಮಾತ್ರ.

1947-48 ರಲ್ಲಿ ಆರ್‌ಎಸ್‌ಎಸ್ ನ ಒಂದು ಅಂಗ ಸಂಸ್ಥೆಯಾದ ಪ್ರಜಾ ಪರಿಷದ್ ಹೇಗೆ ಆಗಿನ ಕಾಶ್ಮೀರ ಮಹಾರಾಜ ಭಾರತವನ್ನು ಸೇರುವುದನ್ನು ಪ್ರತಿರೋಧಿಸುತ್ತಿದ್ದಾಗ ಆತನಿಗೆ ನೆರವಾಯಿತು ಎಂಬುದನ್ನು ನೆನಪಿಸಿಕೊಳ್ಳದಿರಲು ಸಾಧ್ಯವಿಲ್ಲ. ನಿಜ ಸಂಗತಿಯೆಂದರೆ ಆ ಸಂಸ್ಥಾನ ಭಾರತದೊಂದಿಗೆ ವಿಲೀನವಾಗಬೇಕೆಂದು ಬಯಸುವವರನ್ನು ಕೊಲ್ಲುವುದರಲ್ಲಿ ಪ್ರಜಾ ಪರಿಷದ್ ತೊಡಗಿತ್ತು. ಇದರಲ್ಲಿ ಆಶ್ಚರ್ಯವೂ ಇಲ್ಲ. ಏಕೆಂದರೆ ಆರ್‌ಎಸ್‌ಎಸ್ ಎಂದೂ ನಮ್ಮ ಸ್ವಾತಂತ್ರ್ಯ ಹೋರಾಟದ ಭಾಗವಾಗಿರಲಿಲ್ಲ. ಆದರೆ ಈ ಪ್ರಕರಣಗಳು ಆರ್‌ಎಸ್‌ಎಸ್ ದೇಶದ ಮೇಲೆ ಒಂದು ದಬ್ಬಾಳಿಕೆಯ ಸರ್ಕಾರವನ್ನು ಹೇರಬಯಸುತ್ತದೆ ಎಂಬುದನ್ನು ತೋರಿಸುತ್ತದೆ.

ನಾಳೆಯ ಸಂಕೇತಗಳು

ಇಂದು ನಮ್ಮ ಇಡೀ ಸಾಮೂಹಿಕ ಜೀವನಕ್ಕೆ ಎದುರಾಗಿರುವ ಗಂಭೀರ ಅಪಾಯ ಅಡಗಿರುವುದು ಇಲ್ಲಿಯೇ. ಭಾರತ ಒಂದು ಬಹು-ಭಾಷ್ಯಾ, ಬಹುಧರ್ಮೀಯ ಮತ್ತು ಬಹುಸಂಸ್ಕೃತಿಯ ದೇಶ. ವಿವಿಧ ಧರ್ಮಗಳ, ಜನಾಂಗಗಳ ಜನ ಇಲ್ಲಿ ನೆಲೆಸಿದ್ದಾರೆ ಎಂಬುದನ್ನು ಮರೆಯುವಂತಿಲ್ಲ. ಒಂದು ಮಟ್ಟದಲ್ಲಿ ಇವರೆಲ್ಲಾ ಒಬ್ಬರಿಗಿಂತ ಒಬ್ಬರು ಭಿನ್ನವಾಗಿದ್ದಾರೆ, ಇನ್ನೊಂದು ಮಟ್ಟದಲ್ಲಿ ಅವರು ಒಂದಾಗಿದ್ದಾರೆ, ಒಗ್ಗಟ್ಟಾಗಿದ್ದಾರೆ. ಇದು ಅವರ ಪರಸ್ಪರ ಕ್ರಿಯೆಗಳಲ್ಲಿ ಬಿಂಬಿತವಾಗುತ್ತಿದೆ. ನಮ್ಮ ಮಟ್ಟಿಗೆ, ವೈವಿಧ್ಯತೆಯಲ್ಲಿ ಏಕತೆ ಕೇವಲ ಟೊಳ್ಳು ಘೋಷಣೆಯಲ್ಲ. ಅದು ಭಾರತದ ಜೀವಂತ ವಾಸ್ತವತೆಯ ಲಕ್ಷಣ. ಶತಮಾನಗಳಿಂದ ವಿಶ್ವದೆಲ್ಲೆಡೆಯಿಂದ ಜನಗಳ ಪ್ರವಾಹ ಇಲ್ಲಿಗೆ ಹರಿದುಬಂದು, ಅವರು ಇಲ್ಲಿ ನೆಲೆ ನಿಂತರು. ಭಾರತವನ್ನು ತಮ್ಮ ಮನೆಯಾಗಿ ಮಾಡಿಕೊಂಡರು. ಈಗ ನಾವು ಏನನ್ನು ಭಾರತೀಯ ಸಂಸ್ಕೃತಿಯೆನ್ನುತ್ತೇವೆಯೋ ಅದಕ್ಕೆ ತಮ್ಮ ಕೊಡುಗೆ ನೀಡಿದರು. ಈ ಬಹುಮುಖೀ ಸಂಸ್ಕೃತಿ ಯಾವುದೇ ಒಂದು ಗುಂಪಿನದ್ದಲ್ಲ. ಈ ವಿಶಾಲ ದೇಶದಲ್ಲಿ ನೆಲೆಸಿರುವ ಎಲ್ಲರದ್ದು.

ನಮ್ಮ ಸಂವಿಧಾನವನ್ನು ರೂಪಿಸಿದವರಿಗೆ ಈ ವಾಸ್ತವತೆಯ ಅರಿವಿತ್ತು. ಆದ್ದರಿಂದಲೇ ಅವರು ಭಾರತದ ಐಕ್ಯತೆಯನ್ನು ಉಳಿಸಿಕೊಳ್ಳಲು ಧರ್ಮನಿರಪೇಕ್ಷತೆ ಮತ್ತು ಒಕ್ಕೂಟ ತತ್ವ ಅತ್ಯಗತ್ಯ ಎಂದು ಯಾವ ಸಂದೇಹಕ್ಕೂ ಎಡೆಯಿಲ್ಲದಂತೆ ನಿರ್ಧರಿಸಿದರು. ವಾಸ್ತವದಲ್ಲಿ 1947 ರ ಮೊದಲೇ ನಮ್ಮ ಅಸಂಖ್ಯಾತ ಸ್ವಾತಂತ್ರ್ಯ ಹೋರಾಟಗಾರರಿಗೆ



ಸ್ವತಂತ್ರ ಭಾರತ ಒಂದು ಧರ್ಮನಿರಪೇಕ್ಷ ಪ್ರಭುತ್ವವಲ್ಲದೇ ಬೇರೇನೂ ಆಗಲು ಸಾಧ್ಯವಿಲ್ಲ ಎಂಬ ವಿಚಾರ ಸ್ಪಷ್ಟವಾಗಿತ್ತು. ಸಾಮ್ರಾಜ್ಯಶಾಹಿಗಳ ಸಂಚಿನಿಂದಾದ ದೇಶದ ವಿಭಜನೆಯೊಂದಿಗೆ ನಡೆದ ಭೀಕರ ಘಟನೆಗಳು ಕೋಮುವಾದ ನಮ್ಮ ಜನಗಳ ಬದುಕಿನೊಂದಿಗೆ ಎಂತಹ ಭಯಾನಕ ಆಟ ಆಡಬಹುದೆಂಬುದನ್ನು ಕಣ್ಣಾರೆ ಕಂಡ ಮೇಲಂತೂ ಒಂದು ಧರ್ಮನಿರಪೇಕ್ಷ, ರಾಜಕೀಯ ವ್ಯವಸ್ಥೆಯನ್ನೇ ನಮ್ಮ ಜನ ಆರಿಸಿಕೊಂಡರು. ಏಕೆಂದರೆ ಲಕ್ಷಾಂತರ ಜನರನ್ನು ಅವರ ಮನೆ-ಮಠಗಳಿಂದ ಹೊರದಬ್ಬಿದ, ಲಕ್ಷಾಂತರ ಜನ ಪರಸ್ಪರ ಭ್ರಾತೃ ಹತ್ಯೆಗಳಲ್ಲಿ ಸತ್ತ, ಅಸಂಖ್ಯಾತ ಮಹಿಳೆಯರ ಮೇಲೆ ಅತ್ಯಾಚಾರ ನಡೆದ, ಮಕ್ಕಳು ಅನಾಥರಾದ ಭೀಕರ ಘಟನೆಗಳವು. ಕೋಮುವಾದದ ರಕ್ಕಸ ಕೊನೆಗೆ ಸ್ವಾತಂತ್ರ್ಯ ಹೋರಾಟದ ಸರ್ವೋಚ್ಚ ಮುಖಂಡರಾಗಿದ್ದ ಮಹಾತ್ಮಗಾಂಧಿಯವರ ಜೀವವನ್ನು ಬಲಿತೆಗೆದುಕೊಂಡಿತು. ಅದೇ ಶಕ್ತಿಗಳು ಇಂದು ನಮ್ಮ ಮಹಾನ್ ನಾಗರಿಕತೆಯನ್ನು ಕತ್ತಲಯುಗಕ್ಕೆ ತಳ್ಳಲು ಈಗ ತತ್ಪರವಾಗಿದೆ. ಒಂದು ನಿರ್ಣಾಯಕ ವ್ಯತ್ಯಾಸವೆಂದರೆ ಕೆಲವು ಸ್ವಾರ್ಥಸಾಧಕರ ನೆರವಿನಿಂದ ಅವರೀಗ ಪ್ರಭುತ್ವ ಅಧಿಕಾರದ ಮೇಲೆ ಹತೋಟಿ ಪಡೆದಿದ್ದಾರೆ.

ಇವರು ಯಾವ ಮಟ್ಟದವರೆಗೆ ಹೋಗಬಹುದು ಎಂಬುದು ಯೋಚಿಸುವ ಶಕ್ತಿಯಿರುವ ಎಲ್ಲರಿಗೂ ಅತ್ಯಂತ ಸ್ಪಷ್ಟ. ಕೇಂದ್ರದಲ್ಲಿನ ಬಿಜೆಪಿ ಆಳ್ವಿಕೆಯ ಆರಂಭದಲ್ಲೇ ಅತ್ಯಂತ ಕಡಿಮೆ ಸಂಖ್ಯೆಯಲ್ಲಿರುವ ಕ್ರಿಶ್ಚಿಯನ್ನರ ಮೇಲೆ ಹಲವಾರು ಆಕ್ರಮಣಗಳೊಂದಿಗೆ. ಎರಡು ಸಾವಿರ ವರ್ಷಗಳಿಂದ ಇಲ್ಲಿ ಶಾಂತಿಯುತವಾಗಿ ಬಾಳುತ್ತಿರುವ ಅವರ ಮೇಲೆ ಅಲ್ಲಲ್ಲಿ ಧಾಳಿಗಳು ನಡೆದವು. ಜನವರಿ 22, 23 ರ ಮಧ್ಯರಾತ್ರಿ ಒರಿಸ್ಸಾದ ಮನೋಹರಪುರ ಗ್ರಾಮದಲ್ಲಿ ಭಜರಂಗದಳದ ಜಂಗುಳಿ ಒಬ್ಬ ಕ್ರೈಸ್ತ ಮಿಷನರಿ ಮತ್ತು ಆತನ ಚಿಕ್ಕ ಮಕ್ಕಳನ್ನು ಜೀವಂತವಾಗಿ ಸುಟ್ಟ ಅತ್ಯಂತ ಅಮಾನುಷ ಘಟನೆ ನಡೆಯಿತು. ಹಲವು ರಾಜ್ಯಗಳಲ್ಲಿ ಇಂತಹ ಧಾಳಿಗಳ ಸರಣಿಯೇ ನಡೆಯಿತು ಎನ್ನುವುದು ಇದನ್ನು ಮೇಲಿನಿಂದ ಯಾರೋ ಯೋಜಿಸುತ್ತಿದ್ದಾರೆ ಎಂಬುದಕ್ಕೆ ಸಾಕ್ಷಿ.


ನಂತರ ಬಂತು ಗುಜರಾತಿನಲ್ಲಿ ಬಿಜೆಪಿ ಆಡಳಿತದ ಸಕ್ರಿಯ ಶಾಮೀಲಿನೊಂದಿಗೆ ಮುಸಲ್ಮಾನರ ಭಯಾನಕ ಹತ್ಯಾಕಾಂಡ. ಈ ಹತ್ಯಾಕಾಂಡದ ಯೋಜನೆ ತಿಂಗಳುಗಳ ಹಿಂದೆಯೇ ಆಗಿತ್ತು ಎಂಬ ತೀರ್ಮಾನಕ್ಕೆ ಬರಲು ಸಾಕಷ್ಟು ಪುರಾವೆಗಳಿವೆ. ಗೋದ್ರಾದಲ್ಲಿನ ಹೀನ ಕೃತ್ಯದ ನೆವವೊಡ್ಡಿ ಈ ಹತ್ಯಾಕಾಂಡವನ್ನು ಹರಿಯಬಿಟ್ಟಿದ್ದರೂ, ಗೋಧ್ರಾವಿಲ್ಲದಿದ್ದರೂ ಬೇರೆ ಯಾವುದಾದರೂ ನೆವದಿಂದ ಇದನ್ನು ಹರಿಯಬಿಡುತ್ತಿದ್ದರು ಎಂಬುದು ವಾಸ್ತವ. ಸ್ವತಂತ್ರ ಭಾರತದಲ್ಲಿನ ಈ ಅತಿದೊಡ್ಡ ಸಾಮೂಹಿಕ ನರಹತ್ಯೆ ತಿಂಗಳುಗಳ ಕಾಲ ಮುಂದುವರೆಯಿತು ಎಂಬುದು ನಮಗೆ ತಿಳಿದಿದೆ. ಬೆಸ್ಟ್ ಬೇಕರಿ ಮೊಕದ್ದಮೆ ಮತ್ತಿತರ ಕೇಸುಗಳು ಈ ನರಹತ್ಯಾಕಾಂಡ ಭೀಕರತೆಯನ್ನು ಬಯಲಿಗೆ ತರುತ್ತಿದ್ದರೂ ಇದುವರೆಗೆ ಬೆಳಕಿಗೆ ಬಂದಿರುವುದು ಒಂದು ದೊಡ್ಡ ಪರ್ವತದ ಸಣ್ಣ ಶಿಖರವಷ್ಟೇ.

ಕೇಸರಿ ಪಡೆ ಇಂತಹ ಸಾಮೂಹಿಕ ಹತ್ಯಾಕಾಂಡ ನಡೆಸಿರುವುದು ಅಧಿಕಾರಕ್ಕೆ ಬಂದ ಮೇಲೆಯೇ ಎಂದೇನಲ್ಲ. 1947 ರ ಮೊದಲಷ್ಟೇ ಅಲ್ಲ. ನಂತರವೂ ಆರ್‌ಎಸ್‌ಎಸ್ ನ ಅಂಗಸಂಘಟನೆಗಳು ಒಂದಿಲ್ಲೊಂದು ಸಮಯದಲ್ಲಿ ವಿವಿಧೆಡೆ ಭೀಕರ ಗಲಭೆಗಳನ್ನೆಬ್ಬಿಸಿದೆ. ಅವ ಬೀವಂಡಿಯಿರಬಹುದು, ಜಲಗಾಂವ ಇರಬಹುದು, ತೆಲ್ಲಿಚೆರಿ, ಅಲೀಘರ್ ಮೊರಾದಾಬಾದ್, ಮೀರರ್, ಬಾಗಲ್ಪುರ ಇತ್ಯಾ ಇರಬಹುದು. ಇವು ಆ ಪಟ್ಟಿಯಲ್ಲಿನ ಕೆಲವ ಹೆಸರುಗಳಷ್ಟೆ. ಗುಜರಾತ್‌ನ ನರಹತ್ಯಾಕಾಂಡ ಇವೆಲ್ಲಕ್ಕಿಂತಲೂ ಎಷ್ಟೋ ಹೆಚ್ಚು ಭೀಕರ, ಏಕೆಂದು ಇದನ್ನು ಪ್ರಭುತ್ವ ಶಕ್ತಿಯ ಪೂಣ ಬೆಂಬಲದೊಂದಿಗೆ ನಡೆಸಲಾಗಿತ್ತು. ಈಗಲು ಹೆಚ್ಚಿನ ಸದ್ದಿಲ್ಲದೆ ಮುಂದುವರೆಸಲಾಗುತ್ತಿದೆ. ಇವ ಸ್ವತಂತ್ರ ಭಾರತದ ಇತಿಹಾಸದಲ್ಲೇ ಇದುವರೆಗಿ ಅತಿ ದೊಡ್ಡ ಬೆದರಿಕೆ. ಭಾರತ ಇಂದ ಎದುರಿಸುತ್ತಿರುವ ಬೆದರಿಕೆಯ ಗಂಭೀರತೆಯನ ಇದು ತೋರಿಸುತ್ತದೆ. ಕೇಸರಿಪಡೆಗಳು ಮ ಅಧಿಕಾರಕ್ಕೆ ಬರಲು ಬಿಟ್ಟರೆ ನಾಳೆ ಭಾರ ಹೇಗಿರಬಹುದು ಎಂಬುದರ ಬಗ್ಗೆ ಸ್ಪ ಸಂಕೇತವನ್ನು ಇಂತಹ ಘಟನೆಗಳು ನೀಡಿವೆ.

ಕಪಟ ಪುರಾಣ

ಇಂತಹ ನಗ್ನ ಕ್ರೌರ್ಯವಷ್ಟೇ ಆರ್‌ಎಸ್‌ಎಸ ನ ಅಂಗ ಸಂಘಟನೆಗಳ ಲಕ್ಷಣವಲ್ಲ. ಯಾವುದ ಫ್ಯಾಸಿಸ್ಟ್ ಮಾದರಿಯ ಸಂಘಟನೆಯಂತೆ ಇಷ್ಟೆ ಪ್ರಮುಖವಾದ ಅದರ ಇನ್ನೊಂದು ಲಕ್ಷಣವೆಂದ ಅಧಿಕಾರ ಗ್ರಹಣಕ್ಕಾಗಿ ಅವು ನಡೆಸುವ ಕಪಟ ದೇಶಾದ್ಯಂತ ಆರ್‌ಎಸ್‌ಎಸ್ ರಾಷ್ಟ್ರೀಯ ಮಟ್ಟದಿಂದ ಸ್ಥಳೀಯ ಮಟ್ಟದವರೆಗೆ ಸಾವಿರಾ ಸಂಘಟನೆಗಳನ್ನು ಹುಟ್ಟುಹಾಕಿದೆ ಎಂದು ಎಲ್ಲರಿಗ ಗೊತ್ತಿದೆ. ಅವುಗಳಲ್ಲಿ ಹೆಚ್ಚಿನವು ವಿಭಿನ್ನ ಧ್ವನಿಗಳನ ಹೊರಡಿಸುತ್ತಿದೆ. ಉದಾಹರಣೆಗೆ ವಿಹೆಚ್‌ಪಿ ಸದ ಬಿಜೆಪಿಯ ವಿರುದ್ಧ ಒದರಾಡುತ್ತಿರುತ್ತದ ಯಾವುದೇ ವಿಷಯದ ಬಗೆಗ ಬಿಜೆಪಿಯ ಇಬ್ಬರ ಮುಖಂಡರು ತದ್ವಿರುದ್ಧ ಮಾತುಗಳನ ಹೇಳುವುದನ್ನು ಅನೇಕ ಬಾರಿ ಕೇಳಿದ್ದೇವೆ. ಇವುಗ ಹಿಂದಿರುವ ಏಕೈಕ ಉದ್ದೇಶ ಜನಗಳನ್ನು ಮೋ ಮಾಡಿ ಅವರ ಮತಗಳನ್ನು ಬಾಚಿಕೊಳ್ಳುವುದು 1969 ರ ಭೀವಂಡಿ ಗಲಭೆಗಳ ಕುರಿತ ವಿಚಾರಣ ಆಯೋಗ ಆರ್‌ಎಸ್‌ಎಸ್ ಹಾಗೂ ಅದ ಅಂಗಸಂಘಟನೆಗಳು ಹೇಗೆ ಕೆಲಸ ಮಾಡುತ್ತ ಎಂಬುದನ್ನು ಈಗಾಗಲೇ ಹೊರಗೆಡಹಿವೆ. ಹೆಚ್ಚಿನ ಸಂಘಟನೆಗಳು ತಮ್ಮ ಸದಸ್ಯರ ರಿಜಿಸ್ಟರ ಕಲಾಪಗಳ ದಾಖಲೆಗಳನ್ನು ಇಡುವುದಿಲ್ಲ - ಒಂ ಗಲಭೆಯನ್ನು ಸೃಷ್ಟಿಸಿದ ನಂತರ ತಾವೇನೂ ಇರಲಿಲ್ಲ ಎಂದು ಹೇಳಿಕೊಳ್ಳಲು ಸಾಧ್ಯವಾಗ ಎಂಬ ಕಾರಣಕ್ಕಾಗಿ.

1999ರ ಲೋಕಸಭಾ ಚುನಾವಣೆಗಳಲ್ಲಿ ಬಿಜೆ ಹೋರಾಡಿದ ರೀತಿಯಿಂದಲೇ ಈ ವಂ ಸ್ಪಷ್ಟವಾಗುತ್ತದೆ. 1998 ರಲ್ಲಿ ಅದು ತನ್ನ ಚುನಾವಣಾ ಪ್ರಣಾಳಿಕೆ ಹೊರಡಿಸಿತ್ತು.


ಮರೆಯಲಾಗದ ಗೋಧ್ರಾ ನರಹತ್ಯೆ

...ಮುಂಬರುವ ಚುನಾವಣೆ ಸಾಮಾನ್ಯ
... ಶಕ್ತಿಗಳಿಗಿದೆ. ನಿಜ, ಅವರ ನಡುವೆ
...ೂರ್ಯ ಕಿರಣದಷ್ಟು ಸ್ಪಷ್ಟ - ಈಗಿನ
..., ಅದರ ಬಹುಮುಖೀ, ಸಮಿಶ್ರ
...ವರೆ ತಾನೇ ಧೋರಣೆಗಳ ಬಗ್ಗೆ
...ೋದಂತೆ. ಈ ತಿಳುವಳಿಕೆಯೊಂದಿಗೆ
...ರದಲ್ಲಿ ಸೇರಿಕೊಳ್ಳುತ್ತವೆ.

...ಬೇಕಾದ್ದು ...ಕೆ?

...ಶನ್ ಸಿಂಗ್ ಸುರ್ಜಿತ್




1999 ರಲ್ಲಿ ಹಾಗೆ ಮಾಡಲಿಲ್ಲ. ತನ್ನ ನೇತೃತ್ವದಲ್ಲಿರುವ ಎನ್‌ಡಿಎ ಹೆಸರಿನಲ್ಲಿ ಜಂಟಿ ಚುನಾವಣಾ ಪ್ರಣಾಳಿಕೆ ಹೊರಡಿಸಿತು. ಈ ಹಿಂದೆ ನಾವು ಹೇಳಿರುವಂತೆ ಈ ಪ್ರಣಾಳಿಕೆಯನ್ನು ತಯಾರಿಸಿದ್ದು ಬಿಜೆಪಿ ಮುಖಂಡರೇ, ಇತರರು ಅದಕ್ಕೆ ಹೆಬ್ಬೆಟ್ಟು ಒತ್ತಿರಬಹುದು ಅಷ್ಟೆ.

ಇನ್ನೂ ಮಹತ್ವದ ಸಂಗತಿಯೆಂದರೆ 1999 ರಲ್ಲಿ ಬಿಜೆಪಿ ವಿವಾದಾತ್ಮಕ ಪ್ರಶ್ನೆಗಳನ್ನು ಹಿಂದಿಡುವ ಭರವಸೆ ನೀಡಿತ್ತು. ದೇವಸ್ಥಾನ, 370 ನೇ ಕಲಮು ಮತ್ತು ಸಮಾನ ನಾಗರಿಕ ಸಂಹಿತೆ. ಆದರೆ ನಿಜ ಸಂಗತಿಯೆಂದರೆ ಇದು ಇತರ ಎನ್‌ಡಿಎ ಪಕ್ಷಗಳನ್ನು ಸೆಳೆಯಲಷ್ಟೆ. ಬಿಜೆಪಿ ಎಂದೂ ತನ್ನ ಮಿತ್ರರ ಭಾವನೆಗಳ ಬಗ್ಗೆ ಲಕ್ಷ್ಯ ಕೊಡಲಿಲ್ಲ. ತಮಗೆ ಬೇಕಾದ್ದನ್ನೇ ಮಾಡಿಕೊಂಡು ಬಂದರು ಎಂಬುದಕ್ಕೆ ಕಳೆದ ಐದು ವರ್ಷಗಳೇ ಸಾಕ್ಷಿ. ಈ ಪ್ರಶ್ನೆಗಳನ್ನು ಕೈ ಬಿಟ್ಟಿಲ್ಲ. ತಮ್ಮದೇ ಬಹುಮತ ಬರುವವರೆಗೆ ಅದನ್ನು ಮುಂದೂಡಿದ್ದೇವಷ್ಟೆ ಎಂದು ಬಿಜೆಪಿಯ ದೊಡ್ಡ ಮುಖಂಡರು ನೇರವಾಗಿಯೇ ಹೇಳಿರುವ ದಾಖಲೆಗಳಿವೆ.

ಇನ್ನೂ ಎನ್‌ಡಿಎ ಪಕ್ಷಗಳ ಮಟ್ಟಿಗೆ, ಅವುಗಳ ಮನಸ್ಸಾಕ್ಷಿಗೆ ತೊಂದರೆಯಾಗದಿದ್ದರೆ ಸಾಕಿತ್ತು. ಎನ್‌ಡಿಎ ಪ್ರಣಾಳಿಕೆಯಲ್ಲಿ ಆ ಪ್ರಶ್ನೆಗಳಿರಲಿಲ್ಲವಲ್ಲ. ಅಷ್ಟೇ ಸಾಕು. ಕ್ರಿಶ್ಚಿಯನ್ನರ ಮೇಲೆ ಧಾಳಿ ನಡೆಸಿದರೂ, ಗುಜರಾತಿನಲ್ಲಿ ಮುಸಲ್ಮಾನರ ಸಾಮೂಹಿಕ ಹತ್ಯಾಕಾಂಡ ನಡೆಸಿದರೂ ಸುಮ್ಮನಿರಬಹುದು!

ಆದರೆ ಇದೇ ಎನ್‌ಡಿಎ ಪ್ರಣಾಳಿಕೆಯನ್ನು ಅವಮಾನಗೊಳಿಸಿತು. ಆ ಪ್ರಣಾಳಿಕೆ 'ನೈಜಧರ್ಮನಿರಪೇಕ್ಷತೆ', 'ಅಲ್ಪಸಂಖ್ಯಾತರನ್ನು ...ಪುವುದು', ಸಂವಿಧಾನ ಅವರಿಗೆ ನೀಡಿರುವ ...ಗಳನ್ನು ರಕ್ಷಿಸುವುದು ಇತ್ಯಾದಿಗಳ ಬಗ್ಗೆ ...ಮಾತಾಡಿದ್ದಾರೆ, ಅದನ್ನು ಎಷ್ಟರ ಮಟ್ಟಿಗೆ ...ಚರಣೆಗೆ ತರಲಾಗಿದೆ ಎಂಬುದಕ್ಕೆ ಕಳೆದ ಐದು ವರ್ಷಗಳೇ ಸಾಕ್ಷಿ.

ವಾಸ್ತವವಾಗಿ ಬಿಜೆಪಿ ಆಳ್ವಿಕೆಯ ಐದು ವರ್ಷಗಳೇ ಆಗಿರುವ ಎನ್‌ಡಿಎ ಆಳ್ವಿಕೆಯ ಅವಧಿ ...ವಾಗಿಯೂ ಒಂದು ದೊಡ್ಡ ಕಪಟ ನಾಟಕವೇ



ಸರಿ.

ಹೋಗುವ ಸಮಯ ಬಂದಿದೆ

ಅದೇ ವಂಚನೆಯನ್ನು, ಬೇರೆ ಸ್ವರೂಪಗಳಲ್ಲಿ ಮುಂದುವರೆಸಲಾಗುತ್ತಿದೆ. ಇಲ್ಲಿ ಬಿಜೆಪಿ ನೇತೃತ್ವದ ಆಡಳಿತ ಕಳೆದ ಐದು ವರ್ಷಗಳಲ್ಲಿ ಏನು ಮಾಡಿದೆ ಎಂಬುದರ ಕಥೆಯನ್ನು ಹೇಳುವುದಿಲ್ಲ. ಜನಸಮೂಹಗಳ ಮೇಲೆ ಅವರು ಹೇರಿದ ಅಭೂತಪೂರ್ವ ಹೊರೆಗಳು, ವಿವಿಧ ಘಟ್ಟಗಳಲ್ಲಿ ಜನತೆಯ ಹಿತಾಸಕ್ತಿಗಳನ್ನು ಬಲಿಗೊಟ್ಟ ರೀತಿ, ಅಂಗುಲ ಅಂಗುಲವಾಗಿ ನಮ್ಮ ಆರ್ಥಿಕ ಸಾರ್ವಭೌಮತೆಯನ್ನು ಅವರು ಬಿಟ್ಟುಕೊಟ್ಟಿದ್ದು, ದಬ್ಬಾಳಿಕೆ ನಡೆಸಲು ಅವರು 'ಪೋಟಾ' ಮತ್ತಿತರ ಕರಾಳ ಶಾಸನಗಳನ್ನು ತಂದ ವಿಧಾನ, ಉನ್ನತ್ತ ಗಲಭೆಕೋರರ ಮತ್ತು ಫಿರಂಗಿ ಗುಂಡುಗಳ ಒಂದು ತಲೆಮಾರನ್ನೇ ತಯಾರಿಸಲು ಶೈಕ್ಷಣಿಕ ಪಠ್ಯಕ್ರಮ ಮತ್ತು ಪಠ್ಯ ಪುಸ್ತಕಗಳೂ ಸೇರಿದಂತೆ ಇಡೀ ವ್ಯವಸ್ಥೆಯನ್ನು ಕೇಸರೀಕರಣಗೊಳಿಸಲು ಅವರು ಪ್ರಯತ್ನಿಸಿದ ರೀತಿ, ಒಂದಾದ ಮೇಲೊಂದರಂತೆ ಭ್ರಷ್ಟಾಚಾರ ಹಗರಣಗಳು ಮತ್ತು ಎಲ್ಲಾ ನಿರ್ಣಾಯಕ ವಿಷಯಗಳಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಎದುರು ತಲೆಬಾಗಲು ಅವರು ಸಿದ್ಧರಾಗುತ್ತಿದ್ದುದು - ಇವೆಲ್ಲಾ ನಮ್ಮ ಜನಗಳಿಗೆ ಚೆನ್ನಾಗಿ ಗೊತ್ತಿದೆ. ಒಟ್ಟಿನಲ್ಲಿ ನಮ್ಮ ರಾಷ್ಟ್ರೀಯ ಹಿತಾಸಕ್ತಿಗಳಿಗೆ ವಿದೇಶಿ ಯಜಮಾನ ಅಣತಿಯೆಂತೆ ಇಷ್ಟೊಂದು ನಾಚಿಕೆಯಿಲ್ಲದೆ ವಿಶ್ವಾಸಘಾತ ಬಗೆದ ಒಂದು ಆಡಳಿತವನ್ನು ಸ್ವತಂತ್ರ ಭಾರತ ಹಿಂದೆಂದೂ ಕಂಡಿರಲಿಲ್ಲ ಎಂದು ಹೇಳಿದರಷ್ಟೇ ಸಾಕು.

ನಿಜ ಸಂಗತಿಯೆಂದರೆ ಈ ಐದು ವರ್ಷಗಳ ತನ್ನ ನಾಚಿಕೆಗೇಡಿ ದಾಖಲೆಯನ್ನು ಮರೆಮಾಚಲಿಕ್ಕಾಗಿಯೇ ಬಿಜೆಪಿ ಈಗ ಮಾಡುತ್ತಿರುವಂತೆ ಒಂದು ನಾಟಕ ಸರಣಿಯನ್ನೇ ನಡೆಸಬೇಕಾಗಿ ಬಂದಿದೆ. ಕಳೆದ ಐದೂ ವರ್ಷಗಳೂ ಬೆಳವಣಿಗೆ, ಅಭಿವೃದ್ಧಿ, ಉದ್ಯೋಗ ನಿರ್ಮಾಣ, ರಸ್ತೆ ನಿರ್ಮಾಣದ ಬಗ್ಗೆ ಆಧಾರವಿಲ್ಲದ ಹೇಳಿಕೆಗಳು ಒಂದುಕಡೆಯಾದರೆ ಇನ್ನೊಂದು ಕಡೆ ಜನಸಮೂಹಗಳ ಪರಿಸ್ಥಿತಿ ದಿನಕಳೆದಂತೆ ಹದಗೆಡುತ್ತಾ ಸಾಗಿದೆ. ಆಹಾರ ಧಾನ್ಯ ಗೋದಾಮುಗಳು ತುಂಬಿ ತುಳುಕುತ್ತಿರುವಾಗ ಜನ ಹಸಿವಿನಿಂದ ಸಾಯುತ್ತಿದ್ದಾರೆ. ತಲಾ ಆಹಾರ ಧಾನ್ಯ ಬಳಕೆ 1993-94 ರಲ್ಲಿ ದಿನಕ್ಕೆ 177 ಗ್ರಾಂ ಇದ್ದದ್ದು ಈಗ 153 ಗ್ರಾಂ ಗಿಳಿದಿದೆ. ಆದರೆ ಧಾನ್ಯಗಳನ್ನು ಅತ್ಯಂತ ಅಗ್ಗ ದರಗಳಲ್ಲಿ ಅಮೆರಿಕಾ ಮತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ಕೋಳಿಗಳಿಗೆ ತಿನ್ನಿಸಲು ರಫ್ತು ಮಾಡಲಾಗುತ್ತಿದೆ. ನಿಜಕ್ಕೂ, ಅಲ್ಲಿನ ಕೋಳಿಮರಿಗಳು ಬಡಪಾಯಿ ಭಾರತೀಯರಿಗಿಂತ ಹೆಚ್ಚು ಬೆಲೆಯುಳ್ಳವುಗಳು!

ಇಂದೂ ಕೂಡಾ 30 ಕೋಟಿ ಭಾರತೀಯರಿಗೆ ಸರಿಯಾಗಿ ಎರಡು ಹೊತ್ತಿನ ಊಟ ಸಿಗುತ್ತಿಲ್ಲ ಎಂದು ಅಂದಾಜು ಮಾಡಲಾಗಿದೆ. ಪ್ರತಿದಿನ ಕುಪೋಷಣೆಗೆ ಸಂಬಂಧಪಟ್ಟ ಕಾಯಿಲೆಗಳಿಂದ ಸುಮಾರು 5000 ಮಕ್ಕಳು ಸಾಯುತ್ತಿದ್ದಾರೆ. ಹೀಗಿರುವಾಗ ಭಾರತ ಹಿಂದೆಂದೂ ಕಾಣದ ರೀತಿಯಲ್ಲಿ ಪ್ರಕಾಶಿಸುತ್ತಿದೆ ಎಂದು ಯಾರು ತಾನೇ ನಂಬಲು ಸಾಧ್ಯ?

ಬಿಜೆಪಿ ಮುಖಂಡರಾದರೂ ಇದನ್ನು ನಂಬುತ್ತಾರೆಯೇ? ಬಹಳ ಮಟ್ಟಿಗೆ ಅವರು ನಂಬುತ್ತಿಲ್ಲ. ಇಲ್ಲವಾದರೆ ಈಗ ಮಾಡುತ್ತಿರುವಂತೆ ವಿವಿಧ ಜನ ವಿಭಾಗಗಳಿಗೆ ರೊಟ್ಟಿ ತುಣುಕುಗಳನ್ನು ಎಸೆಯುವ ಅಗತ್ಯವೇಕೆ ಎಂದಿದೆ? ಈ ನಾಟಕಗಳು ಅವರ ಪ್ರಮುಖ ಲಕ್ಷಣವಾದ ಕಪಟವೇಷಗಳಿಗೆ ಅನುಗುಣವಾಗಿಯೇ ಇದೆ. ಈ ವಂಚನೆಯ ಒಂದು ಉದಾರಹರಣೆಯನ್ನಷ್ಟೇ ನೆನಪಿಸಿಕೊಂಡರೆ ಸಾಕು. ಕಳೆದ ಅಕ್ಟೊಬರ್ 1999 ರ ಚುನಾವಣೆಗಳ ಕೊನೆಯ ಘಟ್ಟ ಮುಗಿಯುತ್ತಿದ್ದಂತೆಯೇ ಫಲಿತಾಂಶಗಳಿಗೂ ಕಾಯದೆ ವಾಜಪೇಯಿ ಸರ್ಕಾರ ಪೆಟ್ರೋಲ್, ಡೀಸೆಲ್ ಬೆಲೆಗಳನ್ನು ಏರಿಸಿತು.

ಆದರೆ ಭಾರತದ ರಾಜಕೀಯ ಚರಿತ್ರೆ, ಕನಿಷ್ಟ 1977 ರ ನಂತರದ ಚರಿತ್ರೆ ನಮ್ಮ ಜನತೆಯ ರಾಜಕೀಯ ಪ್ರೌಢತೆಯನ್ನು ಸಾರಿದೆ. ಆಗಾಗ ನಡೆಸಿದ ಇಂತಹ ಪ್ರಚಾರದ ಅಬ್ಬರವನ್ನು ಸ್ವಲ್ಪವೂ ಲೆಕ್ಕಿಸದೆ ಅವರು ಒಂದಾದ ಮೇಲೊಂದರಂತೆ ಸರ್ಕಾರಗಳನ್ನು ಕಿತ್ತೆಸೆದಿದ್ದಾರೆ. ಬಿಜೆಪಿ ಮತ್ತು ಅವರ ಬಾಲಬಡುಕರೂ ಹೋಗಬೇಕಾದ ಸಮಯವೀಗ ಬಂದಿದೆ.



ಭಜರಂಗಿಗಳಿಂದ ಹತ್ಯೆಗೀಡಾದ ಗ್ರಹಾಂ ಸ್ಟೈನ್ಸ ಪತ್ನಿ ಮತ್ತು ಮಗಳು

ಧರ್ಮ ನಿರಪೇಕ್ಷ ಪಕ್ಷಗಳ ಪಾತ್ರ


ಬಿಜೆಪಿ ಮತ್ತು ಎನ್‌ಡಿಎ ಇಂದು ಸಾಮಾನ್ಯವಾಗಿ ಸೋಲುವವರು ಧರಿಸುವಂತೆ ಧೈರ್ಯದ ಮುಖವಾಡ ಧರಿಸಿದ್ದಾರೆ. ಕೆಲವೊಮ್ಮೆ ಅವರು ಕನಿಷ್ಟ 340 ಲೋಕಸಭಾ ಸ್ಥಾನಗಳನ್ನು ಗೆಲ್ಲುವುದಾಗಿ ಹೇಳುತ್ತಾರೆ. ಕೆಲವೊಮ್ಮೆ ಬಿಜೆಪಿಯೊಂದೇ 300 ಸ್ಥಾನಗಳನ್ನು ಗೆಲ್ಲುತ್ತದೆ ಎನ್ನುತ್ತಾರೆ. ವಾಸ್ತವ ಸಂಗತಿಯೆಂದರೆ 1998 ಕ್ಕೆ ಹೋಲಿಸಿದರೆ 1999 ರಲ್ಲಿ ಬಿಜೆಪಿ ಒಂದು ಸ್ಥಾನವನ್ನೂ ಹೆಚ್ಚಾಗಿ ಗಳಿಸಿಲ್ಲ. ಕೇವಲ ತೆಲುಗುದೇಶಂ ಪಕ್ಷದ ಹೊರಗಿನ ಬೆಂಬಲದಿಂದಾಗಿಯಷ್ಟೇ ಅದು ದೇಶದ ಮೇಲೆ ಸವಾರಿ ಮಾಡಲು ಸಾಧ್ಯವಾಯಿತು. ಆದರೆ ಬಿಜೆಪಿಯ ಮಿತ್ರರು ಗುಜರಾತಿನಲ್ಲಿ ಹತ್ಯಾಕಾಂಡ ನಡೆಯುತ್ತಿದ್ದಾಗ ಕ್ರಿಶ್ಚಿಯನ್ನರ ಮೇಲೆ ಧಾಳಿಗಳು ನಡೆಯುತ್ತಿದ್ದಾಗ, ಕೇಸರೀಕರಣ ನಡೆಯುತ್ತಿರುವಾಗ ವಿದೇಶಿ ಶಕ್ತಿಗಳಿಗೆ ನಮ್ಮ ರಾಷ್ಟ್ರೀಯ ಹಿತಾಸಕ್ತಿಗಳನ್ನು ಮಾರುತ್ತಿರುವಾಗ ತಮ್ಮ ಸಂಖ್ಯಾಬಲದಿಂದ ಇವನ್ನೆಲ್ಲಾ ತಡೆಯಲು ಸಾಧ್ಯವಿದ್ದರೂ ಮೂಕ ಪ್ರೇಕ್ಷಕರಾಗಿದ್ದರು.

ಇಂದು ತನ್ನ ಮಿತ್ರರ ಮೇಲೆ ಅವಲಂಬಿಸಿರುವಾಗಲೂ ಅವರನ್ನು ಸ್ವಲ್ಪವೂ ಲೆಕ್ಕಿಸದೆ ಬಿಜೆಪಿಗೆ ತನ್ನದೇ ಬಹುಮತ ದೊರೆತರೆ ಮರುಗಳಿಗೆಯೇ ಈ ಮಿತ್ರರನ್ನೆಲ್ಲಾ ಒದ್ದು ಹೊರಗೆ ಹಾಕುತ್ತದೆ ಎಂದು ಯಾರಾದರೂ ಊಹಿಸಬಹುದು.

ಎನ್‌ಡಿಎ ಪಕ್ಷಗಳು ಕೂಡಾ ಸರ್ಕಾರದ ಕೆಲಸಗಳ ಬಗ್ಗೆ ಜನಸಮೂಹಗಳಿಗೆ ಉತ್ತರ ಕೊಡಬೇಕಾಗುತ್ತದೆ. ಅವರಲ್ಲಿ ಹಲವರ ಜನಬೆಂಬಲ ಇಳಿದಿದೆ. ಈಗಾಗಲೇ ಆರು ಪಕ್ಷಗಳು ಎನ್‌ಡಿಎ ಎಂಬ ಕೂಟವನ್ನು ತ್ಯಜಿಸಿವೆ.

ಎನ್‌ಡಿಎಗೆ ಸೇರಿದ ಧರ್ಮನಿರಪೇಕ್ಷ ಶಕ್ತಿಗಳ ಮುಂದಿರುವ ಅನಿವಾರ್ಯತೆ ಸ್ಪಷ್ಟ. ಮುಂಬರುವ ಚುನಾವಣೆ ಸಾಮಾನ್ಯ ಚುನಾವಣೆಯೇನಲ್ಲ. ದೇಶದ ಭವಿಷ್ಯವೇ ಅದನ್ನು ಅವಲಂಬಿಸಿದೆ ಎಂಬುದರ ಅರಿವು ಈ ಶಕ್ತಿಗಳಿಗಿದೆ. ನಿಜ, ಅವರ ನಡುವೆ ಹಲವು ಪ್ರಶ್ನೆಗಳ ಬಗ್ಗೆ ತೀವ್ರ ಭಿನ್ನಾಭಿಪ್ರಾಯಗಳಿವೆ. ಆದರೆ ಒಂದು ವಿಷಯವಂತೂ ಸೂರ್ಯ ಕಿರಣದಷ್ಟು ಸ್ಪಷ್ಟ - ಈಗಿನ ಪ್ರಥಮ ಅವಶ್ಯಕತೆಯೆಂದರೆ ನಮ್ಮ ದೇಶವನ್ನು ಅದರ ಧರ್ಮನಿರಪೇಕ್ಷ ಸ್ವರೂಪವನ್ನು, ಅದರ ಬಹುಮುಖೀ, ಸಮಿಶ್ರ ಸಂಸ್ಕೃತಿಯನ್ನು ಉಳಿಸುವುದು. ಇವು ನಮ್ಮ ಮೂಲಭೂತ ಗುರುತು. ದೇಶ ಉಳಿದರೆ ತಾನೇ ಧೋರಣೆಗಳ ಬಗ್ಗೆ ಭಿನ್ನಾಭಿಪ್ರಾಯಗಳಿಗೆ ಏನಾದರೂ ಅರ್ಥ ಬರುವುದು? ದೇಶ ಹೋದರೆ ಎಲ್ಲವೂ ಹೋದಂತೆ.

ಈ ತಿಳುವಳಿಕೆಯೊಂದಿಗೆ ಎನ್‌ಡಿಎ ಯೇತರ ಧರ್ಮನಿರಪೇಕ್ಷ ಪಕ್ಷಗಳು ಮುಂದಿನ ಚುನಾವಣಾ ಸಮರದಲ್ಲಿ ಸೇರಿಕೊಳ್ಳುತ್ತವೆ. ಸಿಪಿಐ(ಎಂ) ಮಟ್ಟಿಗೆ ಹೇಳುವುದಾದರೆ, ನಮಗೆ ಪರಿಸ್ಥಿತಿಯ ಗಂಭೀರತೆ,



ಪ್ರತಿಪಕ್ಷಗಳ ನಡುವೆ ವಿಭಜನೆಗಳ ಅರಿವಿದೆ. **ಬಿಜೆಪಿ ಮತ್ತು ಅದರ ಮಿತ್ರರನ್ನು ಸೋಲಿಸಲು ನಮ್ಮಿಂದ ಆಗಬಹುದಾದುದನ್ನೆಲ್ಲಾ ಮಾಡುತ್ತೇವೆ. ಪ್ರಮುಖ ಪ್ರತಿಪಕ್ಷವಾದ ಕಾಂಗ್ರೆಸ್‌ನೊಂದಿಗೆ ಧೋರಣೆಗಳ ಬಗ್ಗೆ ನಮಗೆ ಭಿನ್ನಾಭಿಪ್ರಾಯಗಳಿವೆ ಎಂಬುದು ನಿಜ. ಆದ್ದರಿಂದ ಅದರೊಂದಿಗೆ ಒಂದು ರಂಗ ರಚಿಸಿಕೊಳ್ಳಲು ನಮಗೆ ಸಾಧ್ಯವಿಲ್ಲ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಅನುಸರಿಸಿದ ಧೋರಣೆಗಳನ್ನೇ ಅನುಸರಿಸಿದರೆ ಅದು ಕೇಸರಿಪಡೆಗಳಿಗೆ ಅನುಕೂಲ ಮಾಡಿಕೊಡುತ್ತದೆ ಎಂಬುದು ಕೂಡಾ ನಮ್ಮ ಅಭಿಪ್ರಾಯ.** ಆದ್ದರಿಂದ ಧೋರಣೆಯ ವಿಷಯಗಳಲ್ಲಿ ಕಾಂಗ್ರೆಸ್ ತನ್ನನ್ನು ಬಿಜೆಪಿಯಿಂದ ಪ್ರತ್ಯೇಕಿಸಿಕೊಳ್ಳಬೇಕೆಂದು ನಾವು ಕೇಳುತ್ತೇವೆ. ಆದರೆ ರಂಗ ರಚಿಸಿಕೊಳ್ಳುವುದೊಂದನ್ನು ಬಿಟ್ಟು ಬಿಜೆಪಿಯೇತರ ಮತಗಳು ವಿಭಜನೆಯಾಗುವುದನ್ನು ತಡೆಯಲು ನಾವು ಬದ್ಧರಾಗಿದ್ದೇವೆ. ಇದು ಇಂದು ಬಿಜೆಪಿಯನ್ನು ಸೋಲಿಸಲು ಇರುವ ಅತ್ಯಂತ ಸಮರ್ಥ ಮಾರ್ಗ. ನಮ್ಮ ಕೇಂದ್ರ ಸಮಿತಿ ಹೇಳಿದಂತೆ ಇದು 'ಧರ್ಮನಿರಪೇಕ್ಷತೆ ಮತ್ತು ಒಕ್ಕೂಟ ತತ್ವದ ರಕ್ಷಣೆಗೆ, ಸಾಮಾಜಿಕ ನ್ಯಾಯದ ಆಧಾರದಲ್ಲಿ ಭಾರತ ಪ್ರಗತಿ ಹೊಂದುವಂತೆ ಮಾಡಲು ಅತ್ಯಗತ್ಯ".

WSF ಸಾಮಾಜಿಕ ಚಳುವಳಿಗಳ ಮಹಾಮೇಳವಾಗಿದ್ದು, ರಾಜಕೀಯ ಪಕ್ಷಗಳಿಗೆ ಈಗ ತೆರೆದುಕೊಳ್ಳುತ್ತಿದೆ. ಮುಂಬಯಿಯ 4ನೇ ಮಹಾಮೇಳದಲ್ಲಿ 'ರಾಜಕೀಯ ಪಕ್ಷಗಳು ಮತ್ತು ಸಾಮಾಜಿಕ ಚಳುವಳಿಗಳು' ಎಂಬ ಚರ್ಚೆಯಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಪ್ರಕಾಶ್ ಕಾರಟ್ ಮಾತನಾಡಿದರು. ನಿಕರಾಗುವದ ಮಾಜಿ ಆರ್ಥಿಕ ಮಂತ್ರಿ ಮತ್ತು ಸ್ಯಾಂಡಿನಿಸ್ಟಾ ನಾಯಕ ಅಧ್ಯಕ್ಷತೆ ವಹಿಸಿದ್ದ ಚರ್ಚೆಯಲ್ಲಿ ಇಟಲಿಯನ್ ಕಮ್ಯುನಿಸ್ಟ್ ಪಕ್ಷದ ನಾಯಕ, ಫ್ರಾನ್ಸ್‌ನ ಗ್ರೀನ್ ಪಾರ್ಟಿಯ ನಾಯಕಿ ಭಾಗವಹಿಸಿದ್ದರು. ಅಲ್ಲಿ ಮಾಡಿದ ಭಾಷಣ ಮಹತ್ವಪೂರ್ಣವಾಗಿದ್ದು, ಸಾಮಾಜಿಕ ಚಳುವಳಿಗಳ ಬಗ್ಗೆ ಸಿಪಿಐ(ಎಂ)ನ ನಿಲುವನ್ನು ಸ್ಪಷ್ಟಪಡಿಸುತ್ತದೆ. WSF ನ ಸಂದರ್ಭದಲ್ಲಿ ಮಾತ್ರವಲ್ಲ, ಅದರ ಹೊರಗೂ ಸಾಮಾಜಿಕ ಚಳುವಳಿಗಳನ್ನು ಹೇಗೆ ನೋಡಬೇಕು ಎನ್ನುವ ಬಗ್ಗೆ ಸೂಚನೆ ಇಲ್ಲಿ ಇದೆ.



WSF ಚರ್ಚೆಯೊಂದರಲ್ಲಿ ಪ್ರಕಾಶ್ ಕಾರಟ್

"ಎಡಪಕ್ಷಗಳು ಮತ್ತು ಸಾಮಾಜಿಕ ಚಳುವಳಿಗಳು ಸಾಮಾನ್ಯ ಅಂಶಗಳನ್ನು ಗುರುತಿಸುವುದು ಸಾಧ್ಯ"


ಮೊದಲನೆಯದಾಗಿ ವಿಭಿನ್ನ ರೀತಿಯ ರಾಜಕೀಯ ಪಕ್ಷಗಳೂ ಮತ್ತು ಸಾಮಾಜಿಕ ಚಳುವಳಿಗಳೂ ಇವೆ ಎಂದು ನಾವು ಗಮನಕ್ಕೆ ತೆಗೆದುಕೊಳ್ಳಬೇಕು. ಆಳುವ ವರ್ಗಗಳು ಮತ್ತು ವ್ಯವಸ್ಥೆಯ ಹಿತಾಸಕ್ತಿಗಳನ್ನು ಎತ್ತಿ ಹಿಡಿಯುವ ರಾಜಕೀಯ ಪಕ್ಷಗಳಿದ್ದಂತೆ, ಸಾಮಾಜಿಕವಾಗಿ ಪ್ರತಿಗಾಮಿ ಮತ್ತು ವಿಚ್ಛಿದ್ರಕಾರಿ ಪಾತ್ರ ವಹಿಸುವ ಸಾಮಾಜಿಕ ಚಳುವಳಿಗಳೂ ಇವೆ. ಮೂಲಭೂತ ಸಾಮಾಜಿಕ ಮತ್ತು ರಾಜಕೀಯ ಬದಲಾವಣೆಗಳನ್ನು ತರಬಯಸುವ ರಾಜಕೀಯ ಪಕ್ಷಗಳೂ ಇವೆ. ಸಮಾಜದಲ್ಲಿ ತುಳಿತಕ್ಕೊಳಗಾದವರ ಮತ್ತು ಮೂಲೆಗೊತ್ತಲ್ಪಟ್ಟವರ ಸಮಸ್ಯೆಗಳನ್ನು ಎತ್ತಿ ಹಿಡಿಯುವ, ಅವರ ಹಿತಾಸಕ್ತಿಗಳಿಗೆ ಹೋರಾಡುವ ಸಾಮಾಜಿಕ ಚಳುವಳಿಗಳೂ ಇವೆ.

ನಾವು ಇಲ್ಲಿ ಚರ್ಚೆ ಮಾಡಬೇಕಾಗಿರುವುದು ಸಾಮಾಜಿಕ ನ್ಯಾಯ, ಪ್ರಜಾಸತ್ತೆ ಮತ್ತು ಸಮಾನತೆ ತರುವ ಮೂಲಭೂತ ಸಾಮಾಜಿಕ - ಆರ್ಥಿಕ ಬದಲಾವಣೆಗಳಿಗಾಗಿ ಶ್ರಮಿಸುತ್ತಿರುವ ರಾಜಕೀಯ ಪಕ್ಷಗಳ ಮತ್ತು ಸಾಮಾಜಿಕ ಚಳುವಳಿಗಳ ಬಗ್ಗೆ. ಚಾರಿತ್ರಿಕ ಅನುಭವವೆಂದರೆ - ಇವರೆಡು ಪರಸ್ಪರ ಪೂರಕ ಪಾತ್ರ ವಹಿಸುತ್ತವೆ ಅಥವಾ ಕೆಲವೊಮ್ಮೆ ಒಂದರ ಕೆಲಸ, ಇನ್ನೊಂದರ ಕೆಲಸಕ್ಕೆ ಎಡೆ ಮಾಡಿಕೊಡುತ್ತದೆ. ಇಪ್ಪತ್ತನೇ ಶತಮಾನದ ಅನುಭವವೆಂದರೆ ದುಡಿಯುವ ವರ್ಗಗಳಿಗೆ ಸಾಮಾಜಿಕ ಮತ್ತು ಆರ್ಥಿಕ ಸವಲತ್ತುಗಳನ್ನು ಒದಗಿಸಿದ್ದು, ಸಾಮೂಹಿಕ ಪ್ರಜಾಸತ್ತಾತ್ಮಕ ಮತ್ತು ಎಡ ರಾಜಕೀಯ ಪಕ್ಷಗಳು ರಾಜಕೀಯ ಹೋರಾಟ ಮತ್ತು ರಾಜಕೀಯ ಬದಲಾವಣೆಗಳು ಸಾಮಾಜಿಕ-ಆರ್ಥಿಕ ಅನುಕೂಲಕ್ಕೆ ಎಡೆ ಮಾಡಿಕೊಟ್ಟವು. ವಯಸ್ಕ ಮತದಾನವಿರಲಿ, ಸಮಾಜ ಕಲ್ಯಾಣ ಯೋಜನೆಗಳು, ಸಾರ್ವತ್ರಿಕ ಶಿಕ್ಷಣ, ವೈದ್ಯಕೀಯ ಮತ್ತು ನಿರುದ್ಯೋಗ ಸವಲತ್ತುಗಳು ಅಥವಾ ಎಂಟು ಗಂಟೆ ಕೆಲಸದ ದಿನವಿರಲಿ - ಇವೆಲ್ಲ ರಾಜಕೀಯ ಹೋರಾಟದ ಫಲ. ನಿಜವಾದ ಬದಲಾವಣೆ ಬಂದಿದ್ದು ರಾಜಕೀಯ ಪಕ್ಷಗಳ ರಾಜಕೀಯ ಕಾರ್ಯಾಚರಣೆಯಿಂದ. ಆದರೆ ಹಲವು ಸಮಸ್ಯೆಗಳನ್ನು ಎತ್ತಿದ್ದು, ಆ ಬಗ್ಗೆ ಅರಿವು - ಸಾರ್ವತ್ರಿಕ ಜನಾಭಿಪ್ರಾಯ ಮೂಡಿಸಿದ್ದು ಸಾಮಾಜಿಕ ಚಳುವಳಿಗಳು ಮತ್ತು ಸಂಘಟನೆಗಳು.

ನಾವು ಇಲ್ಲಿ ರಾಜಕೀಯ ಪಕ್ಷಗಳು ಮತ್ತು ಸಾಮಾಜಿಕ ಚಳುವಳಿಗಳ ನಡುವೆ ಸಂಬಂಧಗಳ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಇದಕ್ಕಾಗಿ ಅವುಗಳ ನಡುವೆ ಇರುವ ಸಾಮ್ಯ ಮತ್ತು ವ್ಯತ್ಯಾಸ ಎರಡನ್ನೂ ವಿಶ್ಲೇಷಿಸಬೇಕು. ಎಡ ಪಕ್ಷಗಳ ಬಗ್ಗೆ ಹೇಳಬೇಕಾದರೆ, ಅವು ತಮ್ಮ ಕಾರ್ಯಕ್ರಮದ ಸುತ್ತ ಪ್ರಚಾರ-ಪ್ರಕ್ಷೋಭೆ ನಡೆಸುತ್ತವೆ. ಪ್ರಭುತ್ವದ ನೀತಿಯ ಮೇಲೆ ಪರಿಣಾಮ ಬೀರಲು ಮತ್ತು ಸರ್ಕಾರ ರಚಿಸಿ ತಮ್ಮ ಕಾರ್ಯಕ್ರಮ ಜಾರಿಗೊಳಿಸಲು ಪ್ರಯತ್ನಿಸುತ್ತವೆ. ಬಹಳ ಸಂದರ್ಭಗಳಲ್ಲಿ ಇದು ಚುನಾವಣಾ ಹೋರಾಟವನ್ನು ಒಳಗೊಳ್ಳುತ್ತದೆ. ಎಡಪಕ್ಷಗಳು ಹೀಗೆ ಕಾರ್ಯಕ್ರಮ - ಆಧಾರಿತವಾಗಿರುತ್ತವೆ. ಸಮಾಜದ ಹಲವು ವಿಭಾಗಗಳನ್ನು ಅಣಿನೆರೆಸುವುದು ಮಾತ್ರವಲ್ಲ, ಹಲವು ವಿಷಯಗಳ ಬಗೆಗೆ ಕಾರ್ಯಪ್ರವೃತ್ತವಾಗುತ್ತದೆ. ಎಡಪಕ್ಷಗಳಲ್ಲಿ ಮಾರ್ಕ್ಸ್‌ವಾದಿ ಧೋರಣೆಯ ಪಕ್ಷಗಳಿವೆ. ಅವು ವರ್ಗವ್ಯೂಹವನ್ನು ಆಧರಿಸಿರುತ್ತವೆ.

ಈಗಿನ ಸಂದರ್ಭದಲ್ಲಿ, ಇಂಡಿಯಾದಲ್ಲಿ ಆಳುವ ವರ್ಗಗಳು ತಮ್ಮ ವರ್ಗ ಆಳ್ವಿಕೆ ಮತ್ತು ವ್ಯವಸ್ಥೆ ಉಳಿಸಿಕೊಳ್ಳಲು ಉದಾರೀಕರಣ ಮತ್ತು ಕೋಮುವಾದಿಕರಣಗಳನ್ನು ಬಳಸಿಕೊಳ್ಳುತ್ತಿವೆ. ಇದರ ಒಟ್ಟು ಪರಿಣಾಮವೆಂದರೆ ನಮ್ಮ ದೇಶದ ರಾಜಕೀಯ ಮತ್ತು ಆರ್ಥಿಕ ಪ್ರಕ್ರಿಯೆಯಲ್ಲಿ ಸಾಮ್ರಾಜ್ಯಶಾಹಿ ಮಧ್ಯಪ್ರವೇಶ ಮತ್ತು ನೇರಪರಿಣಾಮ, ಕಳೆದ ಒಂದೂವರೆ ದಶಕದ ಅನುಭವವೆಂದರೆ, ಕೋಮುವಾದಿ - ಪ್ರತ್ಯೇಕವಾದಿ ಚಳುವಳಿ ಮತ್ತು ನವ-ಉದಾರವಾದಿ ಸುಧಾರಣೆಗಳಿಂದ ಕುಮ್ಮಕ್ಕು ಪಡೆದ ಬಲಪಂಥೀಯ ಆಕ್ರಮಣ ಆರಂಭವಾಗಿದೆ. ದುಡಿಯುವ ಜನ ಮತ್ತು ಸಾಮಾಜಿಕವಾಗಿ ತುಳಿತಕ್ಕೊಳಗಾದ ಜನರ ಮೇಲೆ ಅತ್ಯಂತ ಕೆಟ್ಟ ಪರಿಣಾಮಗಳಾಗಿವೆ. ಎಡಪಕ್ಷಗಳೂ - ಬಲಪಂಥೀಯ ಈ ಅವಳಿ ದಾಳಿಯನ್ನು ಸೈದ್ಧಾಂತಿಕವಾಗಿಯೂ- ರಾಜಕೀಯವಾಗಿಯೂ ವಿರೋಧಿಸುವುದರಿಂದ ದಾಳಿಗೆ ಒಳಗಾಗಿವೆ.

ಸಾಮ್ರಾಜ್ಯಶಾಹಿ-ಜಾಗತೀಕರಣದ ಸಾಮಾಜಿಕ ಮತ್ತು ಆರ್ಥಿಕ ದುಷ್ಪರಿಣಾಮಗಳ ಬಗ್ಗೆ ಹೊಸ ಸಾಮಾಜಿಕ ಚಳುವಳಿ ಸ್ಪಂದಿಸಬೇಕಾಗಿ ಬಂದಿದೆ. ಇದು ಹಿಂದಿನ ಸಾಮಾಜಿಕ ಚಳುವಳಿಗಳಿಗೆ ಆವಶ್ಯಕವಾಗಿರಲಿಲ್ಲ. ಆಹಾರ, ನೀರು, ಸಾಮುದಾಯಿಕ ಸಂಪನ್ಮೂಲಗಳ ರಕ್ಷಣೆ, ಮಹಿಳೆಯರು, ದಲಿತರ ವಿಮೋಚನೆ - ಇಂತಹ ಏಕ-ಸಮಸ್ಯೆಗಳ ಬಗ್ಗೆ ಇರುವ ಸಾಮಾಜಿಕ ಚಳುವಳಿಗಳೂ, ಇತರ ಸಂಬಂಧಿತ ಜನ-ವಿಭಾಗ ಮತ್ತು ಸಮಸ್ಯೆಗಳ ಬಗೆಗೂ ತಮ್ಮ ದನಿ ಎತ್ತಬೇಕಾಗಿದೆ. ಸಾಮ್ರಾಜ್ಯಶಾಹಿ ಜಾಗತೀಕರಣ



ಮತ್ತು ಸ್ಥಳೀಯ ಆಳುವ ವರ್ಗಗಳ ವಿರುದ್ಧ ಹೋರಾಟದ ಚೌಕಟ್ಟಿಗೆ ಎರಡಕ್ಕೂ ಸಾಮಾನ್ಯ ಚಟುವಟಿಕೆಗಳ ಮತ್ತು ಹಿತಾಸಕ್ತಿಗಳ ಸಂಗಮದ ಅವಕಾಶ ಬಂದಿದೆ. ನಾವು ಇಂದು ಇಲ್ಲಿ ಈ ಬಗ್ಗೆ ಸೇರಿ ಚರ್ಚೆ ಮಾಡುತ್ತಿದ್ದೇವೆ ಎಂಬುದೇ- ಈ ಬಗ್ಗೆ ಅರಿವಿನ ದ್ಯೋತಕ.

ಎಡಪಕ್ಷಗಳ ಮತ್ತು ಪ್ರಗತಿಶೀಲ ಸಾಮಾಜಿಕ ಚಳುವಳಿಗಳ ನಡುವೆ ಸಂಬಂಧಕ್ಕೆ ಇನ್ನೊಂದು ರಾಜಕೀಯ ಮತ್ತು ಸೈದ್ಧಾಂತಿಕ ಪ್ರೇರಕವೂ ಇದೆ. ಅಮೇರಿಕನ್ ಸಾಮ್ರಾಜ್ಯಶಾಹಿಯ ಸರ್ವ-ವಿನಾಶಕಾರಿ ಬಲ-ಆರ್ಥಿಕ, ರಾಜಕೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಎಲ್ಲಾ ಆಯಾಮಗಳನ್ನು ಆವರಿಸಿದೆ. ಆದ್ದರಿಂದ ಹೋರಾಟ ರಾಜಕೀಯ - ಆರ್ಥಿಕ ವಲಯಗಳಿಗೆ ಸೀಮಿತವಿರುವುದು ಸಾಧ್ಯವಿಲ್ಲ. ಸಾಮಾಜಿಕ ಆಯಾಮವೂ ಅತ್ಯವಶ್ಯಕ ಮತ್ತು ಅದು ಹೋರಾಟದ ಭಾಗವಾಗಬೇಕು. ಸಾಮ್ರಾಜ್ಯಶಾಹಿ ಜಾಗತೀಕರಣ ಸಾಮಾಜಿಕವಾಗಿ ವಿಘಟನಕಾರಿ ಪರಿಣಾಮಗಳನ್ನು ತರುತ್ತದೆ ಮತ್ತು ಅದರ ಪರಿಣಾಮ ವಿಷಮಕಾರಿ. ಅದು ಸಾಮೂಹಿಕ ಸೌಹಾರ್ದತೆ ನಾಶ ಮಾಡುತ್ತ ಅಷ್ಟು ಪ್ರಮಾಣದ ಸಾಮಾಜಿಕ ಚಿಹ್ನೆಗಳನ್ನು ಪ್ರಚೋದಿಸುವಂತವರು ಇಂತಹ ಸಂದರ್ಭದಲ್ಲಿ, ರಾಜಕೀಯ ಗುರಿಯೇ ಪ್ರಮುಖವಾಗಿರುವ ಎಡಪಕ್ಷಗಳು ಸತತ ಸಾಮಾಜಿಕ ಮತ್ತು ಸಾಂಸ್ಕೃತಿಕ ಹೋರಾಟದ ಅತ್ಯುತ್ತಮ ವಾಹಕಗಳಾಗುವ ಸಾಧ್ಯತೆ ಕಡಿಮೆ. ಅಣು- ಪ್ರಮಾಣದ ಸಾಮಾಜಿಕ ಚಿಹ್ನೆಯ ರಾಜಕೀಯ ಅಂಗೀಕರಿಸಿದರೆ, ಎಡ-ಮಾರ್ಕ್ಸ್‌ವಾದಿ ಪಕ್ಷಗಳು ದುರ್ಬಲವಾಗುವವು. ಸಾಮಾಜಿಕ ವಿಘಟನೆಗೊಳಗಾದ ಹಲವು ಜನ-ವಿಭಾಗಗಳು ಪ್ರತ್ಯೇಕತಾವಾದಿ - ಸ್ವಂತಿಕೆಯ ರಾಜಕೀಯ ಮತ್ತು ಬಲಪಂಥೀಯ ಸಿದ್ಧಾಂತಗಳಿಗೆ ಬಲಿಪಶುಗಳಾಗಿದ್ದಾರೆ. ಇಂತಹ ಜನವಿಭಾಗಗಳನ್ನು ಸಾಮಾಜಿಕ ನ್ಯಾಯ ಮತ್ತು ಸಾಮಾನ್ಯ ಪ್ರಜಾಸತ್ತಾತ್ಮಕ ಚಳುವಳಿಯತ್ತ ಸೆಳೆಯುವುದು ಅಗತ್ಯ. ಇದನ್ನು ಪ್ರಗತಿಶೀಲ ಸಾಮಾಜಿಕ ಚಳುವಳಿಗಳು ಮಾಡುವುದು ಸಾಧ್ಯ. ಒಂದು ಸ್ಥಳೀಯ ಸಮಸ್ಯೆಯನ್ನು ವ್ಯಾಪಕ ಪ್ರಜಾಸತ್ತಾತ್ಮಕ ಮತ್ತು ರಾಜಕೀಯ ಚಳುವಳಿಗೆ ಜೋಡಿಸುವ ವಿಶಾಲ ಕಣ್ಣೋಟ ಹೊಂದಿರುವ ಪ್ರಗತಿಶೀಲ ಸಾಮಾಜಿಕ ಚಳುವಳಿಗಳು ಮೂಡುವುದು ಸಾಧ್ಯ.

ನಾಲ್ಕು ತೊಡಕುಗಳು

ಇದಕ್ಕೆ ಬೇಕಾದ ಸಾಮಾನ್ಯ ವೇದಿಕೆ ಮತ್ತು ಕಾರ್ಯಸಾಧ್ಯ ಯೋಜನೆ ಹಾಕುವ ಮೊದಲು - ಇದಕ್ಕೆ ತೊಡಕಾಗಿರುವ ಕೆಲವು ಸಮಸ್ಯೆಗಳನ್ನು ಗುರುತಿಸಬೇಕು. ಇಂತಹ ನಾಲ್ಕು ಪ್ರಮುಖ ಸಮಸ್ಯೆ - ತೊಡಕುಗಳನ್ನು ಗುರುತಿಸಬಹುದು.

ಮೊದಲನೆಯ ತೊಡಕು, ಪ್ರಭುತ್ವದ ಪಾತ್ರದ ಬಗ್ಗೆ ಇರುವ ಭಿನ್ನಾಭಿಪ್ರಾಯ. ಎಲ್ಲಾ ನಾಗರಿಕರ ಕನಿಷ್ಠ ಅಗತ್ಯಗಳನ್ನು ಪೂರೈಸುವುದು ಪ್ರಭುತ್ವದ ಕರ್ತವ್ಯ. ಇದಕ್ಕೆ ಮತ್ತು ಐಶ್ವರ್ಯ - ಹಂಚಿಕೆಯಲ್ಲಿ ನ್ಯಾಯ ಸಂದಾಯ ಮತ್ತು ರಾಷ್ಟ್ರೀಯ ಅಂತರಾಷ್ಟ್ರೀಯ ಬಂಡವಾಳವನ್ನು ನಿಯಂತ್ರಿಸುವುದು - ಪ್ರಭುತ್ವಬದ್ಧವಾಗಿರಬೇಕು. ಇಂತಹ ಬದ್ಧತೆ ಅದರ ಪ್ರಾಥಮಿಕ ಜವಾಬ್ದಾರಿ. ಇದು ಎಡ ಪಕ್ಷಗಳ ದೃಷ್ಟಿಕೋನ. ಇಂತಹ ಬದ್ಧತೆಗೆ ಅವು ಹೋರಾಡುತ್ತವೆ. ಸರ್ಕಾರೇತರ ಸಂಘಟನೆಗಳ ಮತ್ತು ಸಾಮಾಜಿಕ ಚಳುವಳಿಗಳ ಒಂದು ವಿಭಾಗ ಪ್ರಭುತ್ವದ ಪಾತ್ರವನ್ನು ನಿರಾಕರಿಸಿ, ಪ್ರಭುತ್ವ - ವಿರೋಧಿ ದೃಷ್ಟಿಕೋನ ಹೊಂದಿದೆ. ಪ್ರಭುತ್ವ ಬೆಳವಣಿಗೆ ಮತ್ತು ಜನ ಕಲ್ಯಾಣದ ಜವಾಬ್ದಾರಿ - ಬದ್ಧತೆಯಿಂದ ಮುಕ್ತಗೊಳಿಸುವುದು ವಿಶ್ವಬ್ಯಾಂಕ್ ಮತ್ತು ರೈತ ಕಾರ್ಪೊರೇಷನ್‌ಗಳ ದೃಷ್ಟಿಕೋನ ಕೂಡಾ ಎಂದು ಇಲ್ಲಿ ಗುರುತಿಸಬೇಕು. ಅವು ತಮ್ಮ ಹಿತಾಸಕ್ತಿಗಾಗಿ ಇಂತಹ ದೃಷ್ಟಿಕೋನವನ್ನು ಪ್ರಚಾರಪಡಿಸುತ್ತವೆ. ಇಂಡಿಯಾದಲ್ಲಿ ಈ ಭಿನ್ನಾಭಿಪ್ರಾಯ ಕಾರ್ಯಾಚರಣೆಯಲ್ಲಿ ಪರಿಹಾರ ಕಾಣುತ್ತಿದೆ.

ಎರಡನೆಯದಾಗಿ - ರಾಜಕೀಯದಿಂದ ಪರಕೀಯತೆಯ ಧೋರಣೆ

ಇಂಡಿಯಾದಲ್ಲಿ ಮಧ್ಯಮವರ್ಗಗಳಲ್ಲಿ ವ್ಯಾಪಕವಾಗಿ ರಾಜಕೀಯ ಮತ್ತು ರಾಜಕಾರಣಗಳ ಬಗ್ಗೆ ಅಪಾರ ಅಪನಂಬಿಕೆ ಇದೆ. ಸಾಮಾಜಿಕ ಚಳುವಳಿಗಳ ಕಾರ್ಯಕರ್ತರು ಬಹಳ ಮಟ್ಟಿಗೆ ಮಧ್ಯಮ ವರ್ಗದಿಂದ ಬರುವುದರಿಂದ, ಅಲ್ಲೂ ಈ ಧೋರಣೆ ವ್ಯಾಪಕವಾಗಿದೆ. ಈ ಅಪನಂಬಿಕೆಯನ್ನು ಎಡಪಕ್ಷಗಳಿಗೂ ವಿಸ್ತರಿಸಲಾಗುತ್ತದೆ. ಇದಕ್ಕೆ ಸೈದ್ಧಾಂತಿಕ ಮತ್ತು ತತ್ವಶಾಸ್ತ್ರೀಯ ಭಿನ್ನಾಭಿಪ್ರಾಯಗಳು ಸ್ವಲ್ಪಮಟ್ಟಿಗೆ ಕಾರಣವಾಗಿರಬಹುದು. ಇಂಡಿಯಾದಲ್ಲಿ ಎಡಪಕ್ಷಗಳಲ್ಲಿ ಹೆಚ್ಚಿನವು ಮಾರ್ಕ್ಸ್‌ವಾದಿ ಧೋರಣೆಯವು. ಅವರ ಕಾರ್ಯಕ್ರಮ ಆಧಾರಿತ ದೃಷ್ಟಿಕೋನ ಮತ್ತು ಸಂಘಟನಾ ಪರಿಕಲ್ಪನೆಗಳನ್ನು ಸಂಶಯ ಮತ್ತು ದ್ವೇಷದಿಂದ ನೋಡಲಾಗುತ್ತದೆ. ವಿವಾದ ಕಾರ್ಯಕ್ರಮ ಮತ್ತು ಸಂಘಟನೆಯ ಬಗೆಗೆನೇ ಅಲ್ಲ. ಹಲವು ಸಾಮಾಜಿಕ ಚಳುವಳಿಗಳು ಹಲವು ಸಮಸ್ಯೆಗಳ ಪರಿಹಾರದ ತಮ್ಮದೇ ಕಾಯಕ್ರಮ ಹೊಂದಿವೆ. ಸಂಘಟನಾ ನೀತಿಯನ್ನು ಹೊಂದಿವೆ. ಮೈತ್ರಿಕೂಟಗಳನ್ನು ರಚಿಸುತ್ತವೆ. ಬರಿಯ ಕೆಳಗಿನಿಂದ ಬರುವ ಸ್ವಯಂಸ್ಫೂರ್ತ ಚಲುವಳಿ ಮೇಲೆ ಆಧರಿಸಿಲ್ಲ. ಆದರೆ ರಾಜಕೀಯದ ಬಗ್ಗೆ ಅವರು ತಳೆಯುವ ಧೋರಣೆ ಆಳವಾದದ್ದು, ಅವರು ವಿರೋಧಿಸುವ ಜಾಗತೀಕರಣದ ಶಕ್ತಿಗಳಿಗೆ ಇಂತಹ ರಾಜಕೀಯದಿಂದ ದೂರ ಉಳಿಯುವ ಧೋರಣೆ ಅತ್ಯಂತ ಪ್ರಿಯವಾದದ್ದು - ಎಂದು ಗ್ರಹಿಸದಿರುವಷ್ಟು.

ಮೂರನೆಯದಾಗಿ - ವಿದೇಶಿ ಧನದ ಮೇಲೆ ಆಧಾರಿತ ರಾಜಕೀಯ-ಸಾಮಾಜಿಕ ಚಟುವಟಿಕೆ : ವಿದೇಶಿ ಧನದ ಮೇಲೆ ಆಧಾರಿತ ಸ್ವಯಂ-ಸೇವಾ ಚಟುವಟಿಕೆಗಳ ಬಗ್ಗೆ ಇಂಡಿಯಾದಲ್ಲಿ

ಚರ್ಚೆ-ವಿವಾದ ಹಳೆಯದು. ಸಾಮ್ರಾಜ್ಯಶಾಹಿ, ವಿಶ್ವಬ್ಯಾಂಕ್ ಮತ್ತು ಪಾಶ್ಚಿಮಾತ್ಯ ಸರ್ಕಾರಗಳು ಈ ಪ್ರಕ್ರಿಯೆಯನ್ನು 70 ರ ದಶಕದ ಕೊನೆ - 80 ರ ದಶಕದ ಆರಂಭದ ಹೊತ್ತಿಗೆ ಆರಂಭಿಸಿದ್ದೇಕೆ? ಈ ಚರ್ಚೆ-ವಿವಾದ ಸಕಾರಾತ್ಮಕ ಪರಿಣಾಮಗಳನ್ನು ಕಂಡಿದೆ. ವಿಶ್ವ ಬ್ಯಾಂಕ್ - ಭಾರತ ಸರ್ಕಾರದ ಧನ ಸಹಾಯದ ಧೋರಣೆ ಮೇಲೆ ಅವಲಂಬಿಸಿರುವ ಸರ್ಕಾರೇತರ ಸಂಘಟನೆಗಳ ವರ್ತುಲದ ಹೊರಗೆ, ಇತರ ಹಲವು ಸಂಘಟನೆಗಳು - ಚಳುವಳಿಗಳಿಗೂ ವಿದೇಶಿ- ಧನ ಸಹಾಯವನ್ನು ವಿರೋಧಿಸುತ್ತವೆ. ಇಂತಹುದೇ ಹೆಚ್ಚು ಸಾಮಾಜಿಕ ಚಳುವಳಿಗಳಲ್ಲಿ ಕೆಲಸ ಮಾಡುತ್ತಿರುವುದು. ವಿದೇಶಿ ಧನಸಹಾಯದ ಆಧಾರದ ಮೇಲೆ ಕೆಲಸ ಮಾಡುವ ಸರ್ಕಾರೇತರ ಸಂಘಟನೆಗಳು 'ಬೆಳವಣಿಗೆ'ಯ ವಹಿವಾಟು, ಸಾಮ್ರಾಜ್ಯಶಾಹಿ ಧೋರಣೆಗಳಿಗೆ ಪೂರಕವಾಗಿವೆ. ಇಂದು ಸರ್ಕಾರೇತರ ಸಂಘಟನೆಗಳಿಗೆ 4000 ಕೋಟಿ ರೂ. ಧನ ಸಹಾಯ ಹರಿದು ಬರುತ್ತದೆ. ಈ ಧನಸಹಾಯದಿಂದ ಮತ್ತು ವಿಶ್ವಬ್ಯಾಂಕ್‌ನ 'ಬೆಳವಣಿಗೆ' ರಾಜಕೀಯದಿಂದ ಸಾಮಾಜಿಕ ಚಳುವಳಿಗಳು ದೂರವಿದ್ದರೆ ಐಕ್ಯ ಕಾರ್ಯಾಚರಣೆ, ಕಾರ್ಯಕ್ರಮಗಳಿಗೆ ಹೆಚ್ಚು ಅನುಕೂಲ.

ನಾಲ್ಕನೆಯದಾಗಿ - ಎಡಪಕ್ಷಗಳೂ ಕೆಲವು ಹೊಸ ವಾಸ್ತವ-ಸವಾಲುಗಳಿಗೆ ನ್ನೂ ಎಚ್ಚೆತ್ತಿಲ್ಲ. ಸಾಮ್ರಾಜ್ಯಶಾಹಿ- ಕೋಮುವಾದಿ ಸವಾಲಿಗೆ ಎಡ-ಪ್ರಜಾಸತ್ತಾತ್ಮಕ ವೇದಿಕೆ ಕಟ್ಟುವ ಪರಿಕಲ್ಪನೆ ಮತ್ತು ಬದಲಿ ನೀತಿಗಳು - ಮುಖ್ಯವಾಗಿ, ಆರ್ಥಿಕ ಮತ್ತು ಜನಸಾಮಾನ್ಯ - ರಾಜಕೀಯ ಹೋರಾಟಗಳಿಗೆ ಸೀಮಿತವಾಗಿವೆ. ಸಾಮಾಜಿಕ-ಸಾಂಸ್ಕೃತಿಕ ರಂಗಗಳಲ್ಲಿ ಅರ್ಥೈಸುವಿಕೆ ಮತ್ತು ಹೋರಾಟಗಳನ್ನು ನಡೆಸುವುದರಲ್ಲಿ ತೀವ್ರ ನ್ಯೂನತೆಗಳಿವೆ. ತಂತ್ರಜ್ಞಾನದ ಪರಿಣಾಮ ಕೆಲವು ಸಾಮಾಜಿಕ ಟ್ರೆಂಡ್‌ಗಳು ಮತ್ತು ಹೊಸ - ಆರ್ಥಿಕದ ಸಾಮಾಜಿಕ ಪರಿಣಾಮಗಳನ್ನು ಪೂರ್ತಿಯಾಗಿ ಅರ್ಥ ಮಾಡಿಕೊಳ್ಳುವುದು ಸಾಧ್ಯವಾಗಿಲ್ಲ. ಹಲವು ಸಂಘಟನಾತ್ಮಕ ನ್ಯೂನ್ಯತೆಗಳಲ್ಲದೆ, ಈ ಮೇಲಿನ ನ್ಯೂನ್ಯತೆಗಳೂ ಸಾಮಾಜಿಕ ಚಳುವಳಿಗಳು ಎತ್ತಿ ತೋರಿಸುತ್ತಿರುವ ಹಲವು ಸಮಸ್ಯೆಗಳಿಗೆ ಎಡ ಪಕ್ಷಗಳು ಸ್ಪಂದಿಸಲು ಸಾಧ್ಯವಾಗಿಲ್ಲ.

ಲ್ಯಾಟಿನ್ ಅಮೆರಿಕದಲ್ಲಿ ಸಾಮ್ರಾಜ್ಯಶಾಹಿಯನ್ನು ವಿರೋಧಿಸುವ ಹಲವು ಪಕ್ಷಗಳು, ಚಳುವಳಿಗಳು ಮತ್ತು ಗುಂಪುಗಳ ಹೋರಾಟದ ವಿಶಾಲ ಕೂಟಗಳನ್ನು ರಚಿಸುವಲ್ಲಿ, ಎಡ ಪಕ್ಷಗಳು ಉತ್ತಮ ಪ್ರಗತಿ ಸಾಧಿಸಿವೆ. ಹತ್ತು ವರ್ಷದ ಹಿಂದೆ ಸಾವೋ ಪಾಲೋ ಫೋರಂ ಇಂತಹುದೇ ಪ್ರಯತ್ನವಾಗಿತ್ತು. ಆ ಮೇಲೆ ಪೋರ್ಟ್ ಅಲೆಗ್ರೆಯಲ್ಲಿ WSF ಉದಯವಾಯಿತು. ಇಂಡಿಯಾದಲ್ಲಿ ಎಡಪಕ್ಷಗಳು ಒಂದು ರೀತಿಯಲ್ಲಿ ಅದೃಷ್ಟಶಾಲಿ ಎನ್ನಬೇಕು. ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನಲ್ಲಿ ಸಮಾಜವಾದದ ಹಿನ್ನೆಡೆಯಿಂದ ಎಡಪಕ್ಷಗಳ ಸಾಮೂಹಿಕ-ನೆಲೆ ಜನಪ್ರಿಯತೆ ಮೇಲೆ ಪರಿಣಾಮ ಸೀಮಿತವಾಗಿತ್ತು. ಕಮ್ಯುನಿಸ್ಟರು ಎಂದು ಕರೆಸಿಕೊಳ್ಳುವವರೇ ಬೇರೆ ಬೇರೆ ಪಕ್ಷಗಳಲ್ಲಿ ಸೇರಿ 15 ಲಕ್ಷದಷ್ಟು ಇದ್ದಾರೆ. ಇನ್ನೂ ವ್ಯಾಪಕವಾದ ಎಡ ಬಣಕ್ಕೆ ಸೇರಿದವರು, ಇನ್ನೊಂದು ದಶಲಕ್ಷದಷ್ಟಾಗಬಹುದು. ಕಳೆದ ಒಂದು ದಶಕದಲ್ಲಿ ಇಂಡಿಯಾದ ಎಡಪಕ್ಷಗಳು ಚಳುವಳಿಯನ್ನು ಉಳಿಸಿಕೊಳ್ಳುವ ಕ್ರಿಯೆಯಲ್ಲಿ ತೊಡಗಿವೆ. ಆದರೆ ಇರುವ ಪ್ರಗತಿಪರ ಪಕ್ಷಗಳೆಂದರೆ ಇವೇ. ದಲಿತರು, ಆದಿವಾಸಿಗಳು, ಜೀವನ ಹಕ್ಕುಗಳ ಮೇಲೆ-ದಾಳಿ, ಜಾತಿ-ಲಿಂಗ ಆಧಾರಿತ ದಮನದ ವಿರುದ್ಧ ದನಿ ಎತ್ತುವ ಚಿಕ್ಕದಾದರೂ ಪ್ರಬಲ ಸಾಮಾಜಿಕ ಚಳುವಳಿಗಳು ಹುಟ್ಟಿವೆ. ಇವೆರಡು ಸಾಮಾನ್ಯ ಅಂಶಗಳನ್ನು ಗುರುತಿಸಿ ಜಂಟಿ ಕಾರ್ಯಾಚರಣೆ ನಡೆಸುವುದು ಸಾಧ್ಯ.

ಉತ್ತರಕನ್ನಡದಲ್ಲಿ ಪ್ರಚಾರಾಂದೋಲನ ಉದ್ಘಾಟನೆ

ಮನೆಮನೆಗೆ ಸಂದೇಶ ತಲುಪಿಸಲು ನಿರ್ಧಾರ

ಬಿಜೆಪಿ ನೇತೃತ್ವದ ಸರಕಾರದ ಜನವಿರೋಧಿ ಆರ್ಥಿಕ ನೀತಿ, ಭ್ರಷ್ಟಾಚಾರ ಮತ್ತು ಕೋಮುವಾದದ ವಿರುದ್ಧ ಪ್ರಚಾರಾಂದೋಲನ ಉತ್ತರಕನ್ನಡ ಜಿಲ್ಲೆಯ ಕಾರ್ಮಿಕ ನಗರ ದಾಂಡೇಲಿಯಲ್ಲಿ ಉದ್ಘಾಟನೆಗೊಂಡಿತು. ಫೆ.1 ರಂದು ಪಕ್ಷದ ರಾಜ್ಯ ಕಾರ್ಯದರ್ಶಿಮಂಡಳಿ ಸದಸ್ಯರಾದ ಕಾಂ.ನಿತ್ಯಾನಂದಸ್ವಾಮಿಯವರು 15 ದಿನಗಳ ಪ್ರಚಾರಾಂದೋಲನವನ್ನು ಉದ್ಘಾಟಿಸುತ್ತಾ ಎನ್.ಡಿ.ಎ ಸರಕಾರದ ದೇಶದ್ರೋಹಿ ನೀತಿಗಳನ್ನು ವಿವರಿಸಿದರು. ಜಿಲ್ಲೆಯ ಮೂಲೆ ಮೂಲೆಗೆ ಪ್ರಚಾರಾಂದಲನ ವಿಷಯಗಳನ್ನು ತಲುಪಿಸಲು ಪಕ್ಷದ ಕಾರ್ಯಕರ್ತರಿಗೆ ಕರೆ ನೀಡಿದರು. ಜಿಲ್ಲಾಸಮಿತಿ ಕಾಯಶದರ್ಶಿ ಶಾಂತಾರಾಮ ನಾಯಕ ಬಹಿರಂಗ ಎಂ.ಬಿ.ನಾಯಕ ಸ್ವಾಗತಿಸಿದರು. ಟಿ.ಎಸ್.ನಾಯ್ಕ ಪ್ರಾಸ್ತಾವಿಕ ಮಾತನಾಡಿದರು. ಕಾರ್ಮಿಕ ಮುಖಂಡ ನಗರಸಭೆ ಸದಸ್ಯ ಎಸ್.ವಿ.ಸಾವಂತ, ಮಂಜುನಾಥ ಪುಲಕರ, ಹೆಚ್.ಬಿ.ನಾಯಕ, ಭೀಮರಾವ್ ಮುಂತಾದವರು ಉಪಸ್ಥಿತರಿದ್ದರು.

ಫೆ-2 ರಂದು ಜೋಯಡಾ ತಾಲೂಕ್ ಕಾರಟೋಳಿಯಲ್ಲಿ ಹಾಗೆ ಹೊನ್ನಾವರದ ಮಾವಿನಕುರ್ವೆ, ಅಂಕೋಲಾದ ಅಗಸೂರಿನಲ್ಲಿ ಕಾರವಾರದ ಉಳಗಾ ಮತ್ತು ಬೈರಾದಕಲ್ಲಿ ಬಟ್ಕಳದ ಕೋಣರ ಪ್ರದೇಶದಲ್ಲಿ ಈಗಾಗಲೇ ಮನೆಮನೆಗೆ ಕರಪತ್ರ ವಿತರಣೆ ಹಾಗೂ ಬಹಿರಂಗ ಸಭೆಗಳು ನಡೆದಿವೆ. ಇನ್ನು ಹಲವಾರು ಗ್ರಾಮಗಳಲ್ಲಿ ನಗರದ ವಾರ್ಡ್‌ಗಳಲ್ಲಿ ಕರಪತ್ರ ವಿತರಣೆ ಹಾಗೂ ಸಭೆಗಳನ್ನು ನಡೆಸಲು ಸಿದ್ಧತೆ ನಡೆದಿದೆ.

ಉತ್ತರ ಕನ್ನಡದಲ್ಲಿ ಫೆ.24 ರ ಮುಷ್ಕರದ ಸಿದ್ಧತೆ ಜಿಲ್ಲಾ ಸಮಾವೇಶ

ಫೆಬ್ರುವರಿ 24 ರಂದು ನಡೆಯುವ ಅಖಿಲ ಭಾರತ ಮುಷ್ಕರವನ್ನು ಉತ್ತರಕನ್ನಡ ಜಿಲ್ಲೆಯಲ್ಲಿ ಯಶಸ್ವಿಗೊಳಿಸಲು ಫೆಬ್ರುವರಿ 8 ರಂದು ನಡೆದ ಕಾರವಾರದಲ್ಲಿ ನಡೆದ ಕಾರ್ಮಿಕ ಸಂಘಟನೆಗಳ ಜಂಟಿಸಮಿತಿ ಜಿಲ್ಲಾ ಸಮಾವೇಶದಲ್ಲಿ ನಿರ್ಧರಿಸಲಾಗಿದೆ. ಸಮಾವೇಶದಲ್ಲಿ ಮುಖ್ಯ ಭಾಷಣಕಾರರಾಗಿ ಆಗಮಿಸಿದ ವಿಮಾ ನೌಕರರ ಸಂಘದ ದಾರವಾಡ ವಲಯದ ಪ್ರಧಾನ ಕಾಯಶದರ್ಶಿ ಬಿ.ಎನ್.ಪೂಜಾರಿ ಮಾತನಾಡಿ ನೂರಾರು ವರ್ಷಗಳ ಹೋರಾಟದಿಂದ ಗಳಿಸಿದ ಮುಷ್ಕರದ ಹಕ್ಕನ್ನು ಉಳಿಸಿಕೊಳ್ಳಲು ಮುಷ್ಕರ ಯಶಸ್ವಿಗೊಳಿಸಲು ಕರೆನೀಡಿದರು. ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರಾದ ಟಿ.ಎಸ್.ನಾಯ್ಕ ವಾಸುದೇಶ ಶೇಟ್, ಶೇಖ್, ಅಧ್ಯಕ್ಷೀಯ ಮಂಡಳಿಯಲ್ಲಿ ಸಮಾವೇಶ ಯಶಸ್ವಿಯಾಗಿ ಸಂಘಟಿಸಲಾಯಿತು. ಸಿ.ಆರ್.ಶ್ಯಾನಭಾಗ ಸ್ವಾಗತಕೋರಿ ಕಾರ್ಯಕ್ರಮ ನಿರ್ವಹಿಸಿದರು. ಹೋರಾಟ ಯಶಸ್ವಿಗೊಳಿಸಲು ತಿಲಕ ಗೌಡ ವಿನೋದ ಮೇತ್ರಿ; ಯಮುನಾ ಗಾಂವಕರ ಸವಿತಾ ತನ್ಮಡಗಿ, ದೀಪಕ್ ನಾಯ್ಕ, ಪ್ರಾಂತ ರೈತ ಸಂಘದ ಶಾಂತಾರಾಮ ನಾಯಕ ಮಾತನಾಡಿದರು.

ಉಡುಪಿ ಜಿಲ್ಲೆಯಾದ್ಯಂತ ರಾಜಕೀಯ ಪ್ರಚಾರಾಂದೋಲನ ಆರಂಭ



ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿಯ ಕರೆಯ ಮೇರೆಗೆ 5 ಪ್ರಮುಖ ಅಂಶಗಳನ್ನು ಆಧರಿಸಿ ರಾಜಕೀಯ ಪ್ರಚಾರಾಂದೋಲನ ಉಡುಪಿ ಜಿಲ್ಲೆಯಲ್ಲಿ ಆರಂಭಗೊಂಡಿದೆ. ಪಕ್ಷದ ಶಾಖೆಗಳು ಹಾಗೂ ಸಾಮೂಹಿಕ ಸಂಘಟನೆಗಳು ಘಟಕಗಳು ಕರಪತ್ರವನ್ನು ಪ್ರವೇಶ ಹಾಗೂ ಗ್ರಾಮಗಳಲ್ಲಿ ಮನೆಮನೆಗಳಿಗೆ ತೆರಳಿ ಹಂಚಲು ನಿರ್ಧರಿಸಲಾಗಿದೆ. ಈಗಾಗಲೇ ಹೆಚ್ಚಿನ ಪ್ರದೇಶಗಳಲ್ಲಿ ಆರಂಭಗೊಂಡಿದೆ.

ಮುಖ್ಯ ಪ್ರದೇಶಗಳಲ್ಲಿ ಸಂಘಟಿತ ಸಾರ್ವಜನಿಕ ಸಭೆಗಳನ್ನು ನಡೆಸಲು, ಅಲ್ಲಲ್ಲಿ ಪ್ರಚಾರ ಸಭೆಗಳನ್ನು ನಡೆಸಲು ನಿರ್ಧರಿಸಲಾಗಿದೆ. ಕುಂದಾಪುರ ತಾಲೂಕಿನಲ್ಲಿ ಫೆಬ್ರುವರಿ 11, 12 ಮತ್ತು 13 ರಂದು ಕಾರಿನಲ್ಲಿ ಮೈಕ್ ಕಟ್ಟಿ ಕರಪತ್ರ ಹಂಚಿ ಪ್ರಚಾರ ಮಾಡಲು ನಿರ್ಧರಿಸಲಾಗಿದೆ. ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ 2 ದಿವಸ ಕಾರಿನಲ್ಲಿ ಪ್ರಚಾರ ನಡೆಸಲು ತೀರ್ಮಾನಿಸಲಾಗಿದೆ.

ಉಡುಪಿ ಮತ್ತು ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದಲ್ಲಿ 2 ದಿವಸ ಪ್ರಚಾರ ಮಾಡಲು ನಿರ್ಧರಿಸಲಾಗಿದೆ. ಅಲ್ಲಲ್ಲಿ ಮುಖ್ಯ ಕೇಂದ್ರಗಳಲ್ಲಿ ಪ್ರಚಾರಸಭೆಗಳನ್ನು ನಡೆಸಲು ನಿರ್ಧರಿಸಲಾಗಿದೆ.

ಫೆಬ್ರುವರಿ 13 ರಂದು ಕುಂದಾಪುರದಲ್ಲಿ ಬೃಹತ್ ಮೆರವಣಿಗೆ ಹಾಗೂ ಸಾರ್ವಜನಿಕ ಸಭೆ ನಡೆಸಲು ನಿರ್ಧರಿಸಲಾಗಿದೆ. ಕುಂದಾಪುರದ ಬೇರೆ ಬೇರೆ ಪ್ರದೇಶ ಕಾರ್ಮಿಕರು, ರೈತ ಮತ್ತು ಕೃಷಿ ಕೂಲಿಕಾರರ ಮೆರವಣಿಗೆಯಲ್ಲಿ ಬರಲಿದ್ದಾರೆ. ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ರಾಜ್ಯದ ಕಾರ್ಯದರ್ಶಿ ಮಂಡಳಿ ಸದಸ್ಯರು ಭಾಷಣ ಮಾಡಲಿದ್ದಾರೆ.

ಸರ್ಕಾರಗಳ ಹುನ್ನಾರಗಳೆದುರು ಸ್ಫೋಟಗೊಂಡ ಆಕ್ರೋಶ

ಜನತೆಯ ಐದು ಪ್ರಮುಖ ಬೇಡಿಕೆಗಳಆಧಾರದಲ್ಲಿ ದೇಶವ್ಯಾಪಿ ನಡೆಯುತ್ತಿರುವ ಪ್ರಚಾಲಾಂದೋಲನ ಕರ್ನಾಟಕದ ಹಲವೆಡೆ ಅತ್ಯಂತ ಯಶಸ್ವಿಯಾದ ವರದಿಗಳು ಬರುತ್ತಿವೆ. ಅವುಗಳಲ್ಲಿ ಕೆಲವು ಇಲ್ಲಿ

"ಈ ತಲಾರಿ ಕಾರ್ಡಿಗೆ ನೂರೈವತ್ತು ತೆಗೀ ಅಂತಾನಲ್ರಿ"

ಕಮಲಾಪುರದಲ್ಲಿ ಜನರ ಆಕ್ರೋಶ

"ಸಾಹೇಬ್ರ, ದಿನಾ ಎಲ್ಲಾ ದುಡಿದ್ರ 10 ರೂಪಾಯಿ ಕೂಲೀರಿ. ಇದ್ರೊಳಗ ಎಷ್ಟು ಕಾಳುಕಡಿ ಬರ್ತಾವ್ರಿ?

ನಮ್ಮ ಹೊಟ್ಟೆ ಹೆಂಗ ತುಂಬಬೇಕ್ರಿ, ನಮ್ಮ ಮಕ್ಕಳ ಮರೀ ಹೊಟ್ಟೆಗೆ ಏನ್ ಹೇಳ್ರಿ.

ಹೇಗೆ ಅಧಿಕರಿಗಳನ್ನು ಆಗ್ರಹಿಸಿ ಕೇಳುತ್ತಿದ್ದಾರೆ ಮಹಿಳೆಯರು. ಮಂಡಲ ಪಂಚಾಯ್ತಿ ಆಫಿಸಿನೆದುರು ನಡೆದಿದೆ ನೂರಾರು ಜನರ ಸಮೂಹ - ಅದರಲ್ಲಿ ಮಹಿಳೆಯರದೇ ದೊಡ್ಡ ದಂಡು. ಅದು ರೇಷನ್ ವ್ಯವಸ್ಥೆ, ಉದ್ಯೋಗಸೃಷ್ಟಿ, ಬರದ ಕಾಮಗಾರಿ, ವಿದ್ಯುತ್ ಧರಗಳ ಅತೀ ಹೊರೆ, ಬಾಕಿ ಮನ್ನಾ ಮತ್ತು ಮುಷ್ಕರದ ಹಕ್ಕು, ಕೋಮು ವಿಭಜನೆಯ ಹುನ್ನಾರಗಳ ವಿರುದ್ಧ ಪ್ರತಿಭಟಿಸಲು, ಹಕ್ಕುಗಳ ಕೇಳಲು ನೆರೆದಿದ್ದ ಜನಸಮೂಹ - ಸಿಪಿಐ(ಎಂ) ರಾಷ್ಟ್ರವ್ಯಾಪಿ ರಾಜಕೀಯ ಜನಾಂದೋಲನ ಹಿನ್ನೆಲೆಯಲ್ಲಿ ಗುಲಬರ್ಗಾ ಜಿಲ್ಲಾಸಮಿತಿಯ ಕಮಲಾಪುರ ವಿಧಾನಸಭಾ ಕ್ಷೇತ್ರದಲ್ಲಿನ 29 ಪಂಚಾಯತ್‌ಗಳ ಮುಂದೆ ಧರಣಿ ಸತ್ಯಾಗ್ರಹ ನಡೆಸಲು ನಿರ್ಧರಿಸಿದಂತೆ ಪ್ರತಿದಿನವೂ ಎಲ್ಲೆಡೆ ಇಂತಹುದೇ ಮತಪ್ರದರ್ಶನ, ಆಗ್ರಹ, ಹಕ್ಕೊತ್ತಾಯ.


"ಅವ ತಲಾರಿ ಇದ್ದನಾ ನೋಡ್ರಿ, ತಿಂಗಳಾದರೂ ಮಾರಿ ತೋರ್ಸೊಂಗಿಲ್ಲ. ರೇಷನ್ ಕಾರ್ಡ್ ಬಂದಿದ್ದು ಕೊಡೂ ಅಂದ್ರೆ ನೂರಾ ಐವತ್ತು ತೆಗೆ ಅಂತಾನ' ನಾವು ಗರೀಬರು ಅಷ್ಟೊಂದು ರೊಕ್ಕ ಎಲ್ಲಿಂದ ತರಬೇಕು "ನೀವೇ ಹೇಳ್ರಿ" ಎಂದು ಅಹವಾಲು ಕೇಳಲು ಬಂದ ಮೇಲಾಧಿಕಾರಿಗಳ ಮುಂದೆ ಮಹಿಳೆಯರ ಆಕ್ರೋಶ. ಇದು ಬಹುತೇಕ ಎಲ್ಲಾ ಕಡೆ ಕಂಡು ಬಂದ ದೃಶ್ಯ.

ಫೆಬ್ರುವರಿ 3 ರಂದು ಈ ಆಂದೋಲನದ ಆರಂಭ, ಅದು ಸಿಪಿಐ(ಎಂ) ಭದ್ರ ನೆಲೆಯಿರುವ ಅಂಬಲಗಾ ಲಾಡ ಮುಗಳಿ ಗ್ರಾಮಗಳಿಂದ ದುಡಿಯುವ ಮಹಿಳೆಯರ ಈ ದೊಡ್ಡ ದಂಡು ಎಲ್ಲಾ ಕಡೆ ಅಧಿಕಾರಿಗಳಿಗೆ ಅಧಿಕಾರಸ್ತ ರಾಜಕಾರಣಿಗಳಿಗೆ ಬಿಸಿ ಮುಟ್ಟಿಸಿದೆ. ಕನಿಷ್ಠ 150 ರಿಂದ 500ರವರೆಗೂ ಈ ಪ್ರದರ್ಶನಗಳಲ್ಲಿ ಜನ ಸೇರುತ್ತಿದ್ದಾರೆ. ಈ ಆಂದೋಲನಗಳಲ್ಲಿ ಸಿಪಿಐ(ಎಂ) ರಾಜ್ಯ ಸೆಕ್ರಟಾರಿಯೇಟ್ ಸದಸ್ಯರಿಂದ ಎಸ್.ವೈ.ಗುರುಶಾಂತ್, ಮಾರುತಿ ಮಾನ್ಪಡೆ, ಜಿಲ್ಲಾ ಮುಖಂಡರಾದ ವಿರೂಪಾಕ್ಷಪ್ಪ ತಡಕಲ್, ಸುಧಾಮ ಧನ್ನಿ, ಭೀಮಶೆಟ್ಟಿ ಎಂಪಳ್ಳಿ, ಚನ್ನಪ್ಪ, ಗಂಗಮ್ಮ ಬಿರಾದಾರ, ಮುಂತಾದವರು ಭಾಗವಹಿಸಲಿದ್ದಾರೆ. ಈ ವಿನೂತನ ಅನುಭವದ ನೊಂದ ಜನಗಳ ನೋವಿನ ಗರ್ಜನೆಯ ವಿಶಿಷ್ಟ ಕಾರ್ಯಕ್ರಮ 19 ರವರೆಗೂ ನಡೆಯುತ್ತಲೇ ಇರುತ್ತದೆ.



ದೇಶದ ತುಂಬ ಚುನಾವಣಾ ರೈಲು ಓಡಿಸುತ್ತಿರುವ ಎನ್‌ಡಿಎ ಸರ್ಕಾರ

ನಾಚಿಕೆಗೇಡಿಗೆ ಇನ್ನೊಂದು ಶಬ್ದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಎಂಬುದನ್ನು ಇನ್ನು ಇತಿಹಾಸವೇ ದಾಖಲಿಸಲಿದೆ. ಈ ಸರ್ಕಾರ ಎಲ್ಲ ಮಾನ ಮರ್ಯಾದೆಗಳನ್ನು ಗಾಳಿಗೆ ತೂರಿ ಚುನಾವಣೆಗಾಗಿ ಇಡೀ ಸರ್ಕಾರಿ ಯಂತ್ರವನ್ನೇ ಆ ದಿಸೆಯಲ್ಲಿ ತಿರುಗಿಸಿಬಿಟ್ಟಿದೆ. ಹಿಂದೆ ಸರ್ಕಾರಗಳು ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಬಜೆಟ್ಟುಗಳನ್ನು ಮಾಡಿರಲಿಲ್ಲವೆಂದಲ್ಲ. ಹಿಂದಿನ ಎಲ್ಲ ಸರ್ಕಾರಗಳು ಬಜೆಟ್ಟನ್ನು ಮಂಡಿಸುವುದರ ಜೊತೆಗೆ ಚುನಾವಣೆಯ ಕಡೆಗೂ ಗಮನವಿರಿಸಿದ್ದರು.



ಎನ್.ಡಿ.ಎ ಸರ್ಕಾರ ಹಾಗಲ್ಲ. ಚುನಾವಣೆಯನ್ನು ಗೆಲ್ಲುವ ಸಲುವಾಗಿಯೇ ಬಜೆಟ್ಟುಗಳನ್ನು ಮಂಡಿಸಿ ಜನರಿಗೆ ಪೂರ್ತಿ ಮೋಸ ಮಾಡುವ ಹುನ್ನಾರದಲ್ಲಿದೆ.

ಜನವರಿ 30 ರಂದು ಕೇಂದ್ರದ ರೈಲು ಮಂತ್ರಿ ನಿತೀಶ್ ಕುಮಾರ್ ರೈಲ್ವೆ ಬಜೆಟ್ಟನ್ನು ಮಂಡಿಸಿದರು. ಇದರಲ್ಲಿ 18 ಹೊಸ ತಡೆರಹಿತ ರೈಲುಗಳನ್ನು ಪ್ರಾರಂಭಿಸುವ ಪ್ರಸ್ತಾಪವಿದೆ. ಪ್ರಯಾಣದರದಲ್ಲಿ ಹೆಚ್ಚಳವೂ ಇಲ್ಲ. ಹಾಗೆಯೇ ರೈಲಿನಲ್ಲಿ ಪ್ರಯಾಣಿಸುವವರಿಗೆ ಸುರಕ್ಷತೆಯ ಭರವಸೆಯೂ ಇಲ್ಲ. ಯಾಕೆಂದರೆ ಸುರಕ್ಷತೆ ಹೆಚ್ಚಿಸುವ ಯಾವುದೇ ಕ್ರಮವೂ ಈ ಬಜೆಟ್ಟಿನಲ್ಲಿಲ್ಲ.

ದೇಶದ ಹಲವು ಭಾಗಗಳಲ್ಲಿ ರೈಲು ಮಾರ್ಗಗಳೇ ಇಲ್ಲ. ಇರುವ ಮಾರ್ಗಗಳ ಸ್ಥಿತಿಯೂ ಅಷ್ಟು ಒಳ್ಳೆಯದಾಗಿಲ್ಲ. ತಲಾ ರೈಲು ಮಾರ್ಗವನ್ನು ಹೆಚ್ಚಿಸಿದರೆ ಈ ಸಂಪರ್ಕ ಸೌಕರ್ಯದಿಂದಾಗಿ ದೇಶದ ವಹಿವಾಟು ಹೆಚ್ಚಾಗಿ ಆರ್ಥಿಕದ ಬೆಳವಣಿಗೆಗೆ ಒಂದು ಭದ್ರ ಬುನಾದಿಯಾಗುತ್ತದೆ. ಹಲವು ಸರಕುಗಳ ಬೆಲೆಯೂ ಈ ರೀತಿಯಿಂದ ಕೆಳಗಿಳಿಯುತ್ತದೆ. ಆದರೆ ಇಂತಹ ಯಾವುದೇ ಕ್ರಮಗಳು ಈ ರೈಲ್ವೆ ಬಜೆಟ್ಟಿನಲ್ಲಿ ಇಲ್ಲ ಎಂದಾದರೆ ಅದು ಈ ದೇಶದ ಜನತೆಗಾಗಿ ಏನು ಮಹಾ ಮಾಡಿದಂತಾಯಿತು?

ಆದರೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ತನ್ನ ತುತ್ತೂರಿಯನ್ನು ಊದಿಕೊಳ್ಳಲು ಅನುಕೂಲವಾದಂತಾಗಿದೆ. ಜನತೆಗೆ ಮೋಸ ಮಾಡಿಯಾದರೂ ತಾವು ಈ ಚುನಾವಣೆ ಗೆಲ್ಲಬೇಕೆಂಬ ಹಠ ಇದರಲ್ಲಿ ಸ್ಪಷ್ಟವಾಗಿ ಕಾಣಿಸುತ್ತದಲ್ಲವೆ?


ಈ ಕೆಳಗಿನ ಕ್ರಮಗಳು ಯಾರಿಗೆ ಅನುಕೂಲಕ್ಕಾಗಿ ಎಂಬುದನ್ನು ನೀವೇ ಹೇಳಿ

ಈ ರೈಲ್ವೆ ಬಜೆಟ್ಟನ್ನು ಅಳೆಯಿರಿ -

. ಮೊಬೈಲ್ ಫೋನಿನ ಮೂಲಕ ರೈಲಿನಲ್ಲಿ ಸೀಟು/ಹಾಸಲು ಕಾಯ್ದಿರಿಸುವಿಕೆ


- 18 ರಾಜ್ಯ ರಾಜಧಾನಿಗಳಿಂದ ದೆಹಲಿಗೆ ಸಂಪರ್ಕ ಕ್ರಾಂತಿ ಎಕ್ಸ್‌ಪ್ರೆಸ್ ರೈಲು
- ಎಲೆಕ್ಟ್ರಾನಿಕ್ ಟಿಕೆಟಿಂಗ್
- ಹೆಚ್ಚು ಸಾರಿ ಪ್ರಯಾಣಿಸುವವರಿಗಾಗಿ ಆಕರ್ಷಣೆ
- ಸಾಮಾನು ಸಾಗಣೆ ಗುರಿಯಲ್ಲಿ 550 ದಶಲಕ್ಷ ಟನ್ನುಗಳು

□



ಎನ್‌ಡಿಎ ಯ ಚುನಾವಣಾ ಪ್ರಣಾಳಿಕೆ ಎಂಬ ಬಜೆಟ್

ಬಜೆಟ್ ಚುನಾವಣಾ ಪ್ರಣಾಳಿಕೆ ಯಾವಾಗ ಆಯಿತು ಎಂದಿರಾ? 2004 ರ ಫೆಬ್ರುವರಿ 3 ರಂದು ಜಸ್ವಂತ್‌ಸಿಂಗ್ ಎಂಬ ಕೇಂದ್ರದ ಹಣಕಾಸು ಮಂತ್ರಿಯ ಕೈಯಲ್ಲಿ, ದೇಶದ ಜನತೆಗೆ ಚಂದಿರನನ್ನೇ ತಂದು ನೀಡುವ ಭರವಸೆ ನೀಡುವ ಈ ಬಜೆಟ್‌ಗೆ ಆದಾಯ ಮೂಲಗಳೇನು ಎಂಬುದು ಯಾರಿಗೂ ಗೊತ್ತಿಲ್ಲ. ಆದರೆ ಭರವಸೆಗಳ ಮಹಾಪೂರ ಮಾತ್ರ



ಈ ಬಜೆಟ್ಟಿನಲ್ಲಿ ಹರಿದಿದೆ. ನೀವು ಏನಾದರೂ ಪ್ರಶ್ನೆಗಳನ್ನು ಕೇಳಿದರೆ ಈ ಸರ್ಕಾರದ ಮಂತ್ರಿಗಳು ವಿದೇಶಿ ವಿನಿಮಯದ ಶಿಲ್ಕು ಒಂದುನೂರು ಶತಕೋಟಿ ಡಾಲರಿಗೂ ಹೆಚ್ಚಿಗೆ ಇದೆ ಎನ್ನುತ್ತಾರೆ. ಈ ಹಣವನ್ನು ವಿದೇಶಿ ಹೂಡಿಕೆದಾರರು ಯಾವುದೇ ಕ್ಷಣದಲ್ಲಾದರೂ ವಾಪಸ್ಸು ಕೇಳಬಹುದೆಂಬುದನ್ನು ಮರೆಮಾಚುತ್ತಾರೆ. ಅವರು ಈ ಹಣವನ್ನು ಯಾವುದೇ ಸಮಯದಲ್ಲಿ ವಾಪಸ್ಸು ಕೇಳಬಹುದಾದರೆ ಅದನ್ನು ಅಭಿವೃದ್ಧಿಯ ಕಾರ್ಯದಲ್ಲಿ ಹೇಗೆ ಹೂಡುತ್ತಾರೆ? ಇದಕ್ಕೂ ಏನಾದರೂ ಉತ್ತರವನ್ನು ಅವರು ನೀಡಿಯಾರು. ಆದರೆ ಜವಾಬ್ದಾರಿಯುತ ಉತ್ತರ ಅದಾಗಿರುವುದಿಲ್ಲ. ದೇಶದ ಜನತೆಗೆ, ಕೇಂದ್ರ ಸರ್ಕಾರಕ್ಕೆ ಮತ್ತು ಉಚ್ಚ ನ್ಯಾಯಾಲಯಗಳಿಗೆ ಅಯೋಧ್ಯೆಯ ಬಾಬ್ರಿ ಮಸೀದಿಗೆ ಯಾವುದೇ ಹಾನಿ ತಟ್ಟುವುದಿಲ್ಲ ಎಂದು ಮಾತು ಕೊಟ್ಟು ಅದನ್ನು ನೀರು ಕುಡಿದಂತೆ ಮುರಿದ ಮನೆ ಮುರುಕರಿಂದ ಜವಾಬ್ದಾರಿಯ ವರ್ತನೆ ನಿರೀಕ್ಷಿಸಲಾದೀತೆ? ಖಂಡಿತವಾಗಿಯೂ ಇಲ್ಲ ಅಲ್ಲವೆ?

ಕೇಂದ್ರದ ಹಣಕಾಸು ಮಂತ್ರಿಗಳು ಈ ಮಧ್ಯಂತರ ಬಜೆಟ್‌ನಲ್ಲಿ ಹಲವು ಕ್ರಮಗಳನ್ನು ಘೋಷಿಸಿ ಮುಂದಿನ ಸರ್ಕಾರ ಇನ್ನೂ ಹೆಚ್ಚಿಗೆ ಮಾಡಬಹುದೆಂಬ ಸೂಚನೆಯನ್ನು ಅದು ನೀಡಿದೆ. ಇದರ ಒಳ ಅರ್ಥ ಏನೆಂದರೆ ನಮಗೆ ಮತ ನೀಡಿ ಎಂದು. ಇಂತಹ ಸಂದೇಶಗಳನ್ನು ಸರ್ಕಾರ ನೀಡಿದರೆ ಅದು ಚುನಾವಣಾ ಪ್ರಣಾಳಿಕೆ ಅಲ್ಲದೆ ಮತ್ತೇನು? ಈ ಕೆಳಗಿನ ಕ್ರಮಗಳನ್ನು ನೋಡಿ ಸಹಾಯಧನದಲ್ಲಿ ಕಡಿತ ಮಾಡುವುದರಿಂದ ಯೋಜನೇತರ ವೆಚ್ಚದಲ್ಲಿ ಕಡಿತ.

- ಸಣ್ಣ ಉಳಿತಾಯದಲ್ಲಿ ಶೇ.23 ರಷ್ಟು ಹೆಚ್ಚಳ.
- ಕೃಷಿಗೆ ಕಡಿಮೆ ದರದ ಸಾಲ ಮತ್ತು ಅಂತರ್ರಚನಾ ಸೌಕರ್ಯಗಳಿಗಾಗಿ 50,000 ಕೋಟಿ ರೂಪಾಯಿಗಳು (ಹಣ ಎಲ್ಲಿಂದ ಬರುತ್ತದೋ ಯಾರಿಗೂ ಗೊತ್ತಿಲ್ಲ)
- ತೆರಿಗೆಗಳಲ್ಲಿ ಹೆಚ್ಚಿನ ಬದಲಾವಣೆಗಳೇನೂ ಸದ್ಯಕ್ಕೆ ಇಲ್ಲ. ಜೂನಿನಲ್ಲಿ ಈ ಬಗ್ಗೆ ವಿಚಾರ ಮಾಡಬಹುದು (ತೆರಿಗೆದಾರರೇ ನಮಗೇ ಮತ ನೀಡಿ ಆಗ ನಿಮಗೆ ಲಾಭ ಎಂದು ಹೇಳುವ ಪರಿ)

ಈ ಚುನಾವಣಾ ಪ್ರಣಾಳಿಕೆ ಹೀಗೆ ನಿರ್ಲಜ್ಜವಾಗಿ ಮುಂದುವರೆಯುತ್ತದೆ.

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





ಗರ್ಭಿಣಿ ಸ್ತ್ರೀಯಲ್ಲಿ ಕಬ್ಬಿಣಾಂಶದ ಅಗತ್ಯತೆ ಹೆಚ್ಚುತ್ತದೆ. ಹೆಚ್ಚಿನ ಅಗತ್ಯತೆ ಪೂರೈಸಲು ಆಹಾರದಲ್ಲಿ ಪೌಷ್ಟಿಕಾಂಶಗಳಿರದಿದ್ದರೆ, ರಕ್ತಹೀನತೆ ಉಂಟಾಗುತ್ತದೆ. ಶೇಕಡಾ 80 ರಷ್ಟು ಗರ್ಭಿಣಿಯರು ರಕ್ತಹೀನತೆಯಿಂದ ಬಳಲುತ್ತಿರುವುದು ಅಧ್ಯಯನಗಳಿಂದ ಕಂಡುಬಂದಿದೆ. ದೇಹದಿಂದ ರಕ್ತಸೋರುವಿಕೆ ಯಾದಾಗ ರಕ್ತಹೀನತೆ ಉಂಟಾಗುತ್ತದೆ.

ಉದಾ: ಕೊಕ್ಕೆಹುಳು ರೋಗ, ಮೂಲವ್ಯಾಧಿರೋಗಿಗಳಲ್ಲಿ.

ಅಪರೂಪವಾಗಿ ರಕ್ತದ ಕಾಯಿಲೆಗಳಿಂದ ರಕ್ತಹೀನತೆ ಉಂಟಾಗುತ್ತದೆ. ಉದಾ: ಮೆಗಲೋಬ್ಲಾಸ್ಟಿಕ್ ಅನೀಮಿಯಾ - ಕಬ್ಬಿಣ ಹಾಗೂ ವಿಟಮಿನ್ ಬಿ-12 ನ ಕೊರತೆಯಿಂದ ಈ ರೋಗ ಉಂಟಾಗುತ್ತದೆ.

ದೇಹದ ಕಾಯಿಲೆಗಳಾದ ಕ್ಷಯ ರೋಗ, ಕ್ಯಾನ್ಸರ್ ರೋಗಗಳಲ್ಲೂ ರಕ್ತಹೀನತೆ ಉಂಟಾಗುತ್ತದೆ. ಪೌಷ್ಟಿಕ ಆಹಾರ ಉಪಯೋಗಿಸುವುದರಿಂದ ಸೋರುವಿಕೆಯನ್ನು ತಡೆಗಟ್ಟುವುದರಿಂದ, ರಕ್ತದ ಕಾಯಿಲೆಗಳನ್ನು ಗುರುತಿಸಿ ಚಿಕಿತ್ಸೆ ಮಾಡುವುದರಿಂದ ರಕ್ತಹೀನತೆಯನ್ನು ಗುಣಪಡಿಸಬಹುದಾಗಿದೆ.

ರಕ್ತಹೀನತೆ ಕಂಡುಬಂದಲ್ಲಿ ರಕ್ತಹೀನತೆಗೆ ಕಾರಣಕಂಡು ಹಿಡಿದು ಚಿಕಿತ್ಸೆ ಪ'ಎ'ಾ'ಡ' ಬೇಕಾಗುತ್ತದೆ. ರಕ್ತವೃದ್ಧಿಯಾಗಲು ವಿಳಂಬವಾಗುವುದರಿಂದ ರಕ್ತದ ಘಟಕಗಳುಳ್ಳ ಮಾತ್ರೆ ಅಥವಾ ಟಾನಿಕ್‌ಗಳನ್ನು ಬಳಸಬೇಕಾಗುತ್ತದೆ, ಅದರೊಂದಿಗೆ ಪೌಷ್ಟಿಕಾಂಶವುಳ್ಳ ಆಹಾರವನ್ನು ಸೇವಿಸಬೇಕಾಗುತ್ತದೆ.

ಕಬ್ಬಿಣದ ಅಂಶ, ಪ್ರೋಟೀನ್ ಸೇರಿ ಕೆಂಪುರಕ್ತಕಣದ ಹಿಮೋಗ್ಲೋಬಿನ್ ಆಗುತ್ತದೆ. ರಕ್ತಪರೀಕ್ಷೆ ಮಾಡಿ ರಕ್ತದಲ್ಲಿ ಎಷ್ಟು ಹಿಮೊಗ್ಲೋಬಿನ್ ಇದೆಯೆಂದು ಕಂಡುಹಿಡಿಯಲಾಗುತ್ತದೆ. ರಕ್ತಹೀನತೆ ಕಂಡುಹಿಡಿಯಲು ಇದಲ್ಲದೆ ಇತರೆ ಪರೀಕ್ಷೆಗಳನ್ನು ಮಾಡಬೇಕಾಗುತ್ತದೆ. ಆರೋಗ್ಯವಂತ ಮಹಿಳೆಯರಲ್ಲಿ ಹಿಮೊಗ್ಲೋಬಿನ್ ಪ್ರಮಾಣ ಸಾಮಾನ್ಯವಾಗಿ 12 ರಿಂದ 14 ಗ್ರಾಂ (ನೂರು ಮಿ.ಲೀ ರಕ್ತದಲ್ಲಿ) ಇರುತ್ತದೆ. ಇದರ ಆಧಾರದ ಮೇಲೆ ಹಿಮೋಗ್ಲೋಬಿನ್ ಕೊರತೆ ಎಷ್ಟು ಎಂದು ತೀರ್ಮಾನಿಸಲಾಗುತ್ತದೆ. ಅದರ ಆಧಾರದ ಮೇಲೆ ಎಷ್ಟು ದಿವದ ಚಿಕಿತ್ಸೆ ಅಗತ್ಯ ಎಂದು ತೀರ್ಮಾನಿಸಲು ಸಾಧ್ಯವಾಗುತ್ತದೆ.

ದಕ್ಷಿಣ ಭಾರತದಲ್ಲಿ ಬರಗಾಲ....

ಪುಟ 2 ರಿಂದ

ಗುಡಿಸಲನ್ನು ನಿರ್ಮಿಸಿಕೊಡುವುದಿಲ್ಲ. ಬೀಳುಬಿದ್ದ ಭೂಮಿಯನ್ನು ಕೃಷಿಯೋಗ್ಯವಾಗಿ ಮಾಡಲು ಯಾವ ಪ್ರಯತ್ನವನ್ನೂ ಮಾಡುವುದಿಲ್ಲ. ಬಾವಿಯ ನಿರ್ಮಾಣ ಮಾಡುವುದಿಲ್ಲ. ಅಥವಾ ಹಾಳಾದ ಬಾವಿಯನ್ನು ಸರಿಪಡಿಸುವುದೂ ಇಲ್ಲ. ಆದರೆ ಯಾವುದೋ ಒಂದು ಕ್ಷುಲ್ಲಕ ಬಾಕಿ ಸಾಲದ ಲೆಕ್ಕ ತೋರಿಸಿ, ಹೇಗೋ ಎಲ್ಲವನ್ನೂ ಸರಿತೂಗಿಸಿಕೊಂಡು ಸಾಗುವಳಿ ಮಾಡುತ್ತಿದ್ದ ರೈತನನ್ನು ಒಕ್ಕಲೆಬ್ಬಿಸುತ್ತಾರೆ.

ಸ್ವಂತ ಉಳುಮೆಗೆ ಗೇಣಿದಾರನ ಎತಿತುಗಳನ್ನು ತೆಗೆದುಕೊಳ್ಳಬಹುದು. ಆದರೆ ಅವನು ಮಾತ್ರ ರೈತನಿಗೆ ಏನನ್ನೂ ಬಿಟ್ಟಿಯಾಗಿ ಒದಗಿಸುವುದಿಲ್ಲ. ಖರ್ಚು ಮಾಡಿದ್ದನ್ನು ಗಳಿಸಲು ಅನುಕೂಲವಾಗುವಂತೆ ರೈತನಿಗೆ ಬೀಜಗಳನ್ನು ಒದಗಿಸುವುದಿಲ್ಲ. ಬೀಜಕ್ಕಾಗಿ ರೈತ ಜಮೀನ್ದಾರನಿಗಿಂತ ಕ್ರೂರನಾದ ಲೇವಾದೇವಿಗಾರನ ಕಪಿಮುಷ್ಟಿಯಲ್ಲಿ ಸಿಕ್ಕಿಕೊಳ್ಳುತ್ತಾನೆ. ಅವನು ಹಾಕುವ ಬಡ್ಡಿಯ ದರಗಳಿಗೆ ಮಿತಿಯೇ ಇರುವುದಿಲ್ಲ. ರೈತರನ್ನು ಅನಕ್ಷರಸ್ಥ ಸ್ಥಿತಿಯಲ್ಲೇ ಇರಿಸುವುದಕ್ಕೆ ಜಮೀನ್ದಾರ ಮತ್ತು ಲೇವಾದೇವಿಗಾರ ಇಬ್ಬರೂ ಒಬ್ಬರಿಗಿಂತ ಒಬ್ಬರು ಮಿಗಿಲಾದ ಪೂರಕಪಾತ್ರ ವಹಿಸುತ್ತಾರೆ.

ನಾನು ಬರೆದ ಈ ವಿವರಗಳನ್ನೆಲ್ಲ ನನಗೆ ಆತಿಥ್ಯ ನೀಡಿದ ಜಮೀನ್ದಾರ ಓದಿ "ನೋಡಿ, ಐನೂರು ಹಳ್ಳಿಗಳಿರುವ ನನ್ನ ವಿಷಯವನ್ನೇ ತೆಗೆದುಕೊಳ್ಳಿ. ಕಾಲ ಬದಲಾಗಿದೆ. ಜನ ಈಗಾಗಲೇ ಜಮೀನು ಕೊಡುವಂತೆ ಕೇಳುತ್ತಿದ್ದಾರೆ. ಭಾರತ ಈಗ ಸ್ವತಂತ್ರವಾಗಿದೆ. ಈ ಜನರಲ್ಲಿ ಕೆಲವರಿಗೆ ನಾನು ಜಮೀನು ಕೊಡಲೇಬೇಕು" ಈ ಮಾತುಗಳನ್ನು ಹೇಳುತ್ತ ಜಮೀನುದಾರ ಚಪ್ಪಲಿ ಬಿಟ್ಟು ನೆಲದ ಮೇಲೆ ತಣ್ಣಗೆ ಕುಳಿತುಕೊಂಡ. "ನಿಮಗೆ ಗೊತ್ತೆ ಇದೆ ಜನ ವಿದ್ಯಾಭ್ಯಾಸ ಬೇಕು ಅನ್ನುತ್ತಾರೆ. ವಿದ್ಯೆ ಸಿಕ್ಕ ಮೇಲೆ ಕೆಲವೊಂದು ಸುಧಾರಣೆಗಳನ್ನು ಕೇಳುತ್ತಾರೆ. ಅವರು ಸುಧಾರಣೆ ಕೇಳಿದರೆ ನಮಗೆ ತೊಂದರೆ ಬಂತು ಎಂದರ್ಥ. ಸ್ವಲ್ಪ ಶಿಕ್ಷಣವಿದ್ದ ಜನ ಹಕ್ಕುಗಳಿಗೆ ಒತ್ತಾಯ ಮಾಡುತ್ತಾರೆ. ಅವರಿಗೆ ಹಕ್ಕುಗಳನ್ನು ಕೊಟ್ಟರೆ ಈಗ ನಮಗೆ ಇರುವಂಥ ಅಧಿಕಾರಗಳು ಇರುವುದಿಲ್ಲ" ಎಂದ.

ಸಕ್ಕರೆ ಕಾರ್ಖಾನೆ ಖಾಸಗೀಕರಣ ಕೈಬಿಡಲು ಆಗ್ರಹ

ಅಕ್ಕಿ ಆಲೂರು, ಜನವರಿ-31 ಕೃಷಿ ಆದಾರಿತ ಕೈಗಾರಿಕೆಯಾಗಿರುವ ಸಂಗೂರಿನ ಸಹಕಾರಿ ಸಕ್ಕರೆ ಕಾರ್ಖಾನೆ ಖಾಸಗೀಕರಣಕ್ಕೆ ಶಿಫಾರಸು ಮಾಡಿರುವ ಸಕ್ಕರೆ ಕಾರಖಾನೆಗಳ ಪುನಶ್ಚೇತನ ಸಮಿತಿಯ ಪ್ರಸ್ತಾವನೆಯನ್ನು ಸರಕಾರ ಕೈಬಿಡಬೇಕೆಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ ಜಿಲ್ಲಾ ಸಂಘಟನಾ ಸಮಿತಿ ಆಗ್ರಹಿಸಿದೆ.

ಜಿಲ್ಲೆಯ ರೈತರ ಹಾಗೂ ಜನಪ್ರತಿನಿಧಿಗಳ ಪ್ರಯತ್ನದ ಫಲವಾಗಿ ಸ್ಥಾಪನೆಗೊಂಡ ಕಾರ್ಖಾನೆಯು ಆಡಳಿತ ಮಂಡಳಿಗಳ ಭ್ರಷ್ಟಾಚಾರದಲ್ಲಿ ಸಿಲುಕಿ ಅತಂತ್ರ ಸ್ಥಿತಿಯಲ್ಲಿದೆ ಎಂದ ಮಾತ್ರಕ್ಕೆ ಖಾಸಗೀಕರಣ ಮಾಡಬೇಕೆನ್ನುವುದು ಸರಿಯಲ್ಲ. ಖಾಸಗೀಕರಣದಿಂದ ರೈತರು, ಕೂಲಿ ಕಾರ್ಮಿಕರು ತಮ್ಮ ಹಕ್ಕುಗಳನ್ನು ಕಳೆದುಕೊಳ್ಳುವ ಮೂಲಕ ತಮ್ಮ ಅಸ್ತಿತ್ವಕ್ಕಾಗಿ ಪರದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಹೇಳಿಕೆಯಲ್ಲಿ ಅಭಿಪ್ರಾಯಪಟ್ಟಿದೆ.

ಕಾರ್ಖಾನೆ ಆಡಳಿತದಲ್ಲಿನ ಭ್ರಷ್ಟತೆಯನ್ನು ತೊಡೆದುಹಾಕಿ ರೈತ ಕೂಲಿ ಕಾರ್ಮಿಕರಿಗೆ ನ್ಯಾಯ ಒದಗಿಸಬೇಕು. ಇಲ್ಲದಿದ್ದಲ್ಲಿ ಉಗ್ರ ಹೋರಾಟ ರೂಪಿಸಲಾಗುವುದೆಂದು ಡಿವೈಎಫ್‌ಐ ಸಂಚಾಲಕ ಚಂದ್ರ ಅಕ್ಕಿವಳ್ಳಿ ಎಚ್ಚರಿಸಿದ್ದಾರೆ.

ಕ್ಯೂಬನ್ ಕ್ರಾಂತಿ ಎಂದೂ ಸೋಲದು - ಕ್ಯಾಸ್ಟ್ರೋ

ಕ್ಯೂಬಾದ ಕ್ರಾಂತಿಗೆ ಈಗ 45 ವರ್ಷ. ಕ್ಯೂಬಾ ಕ್ರಾಂತಿಯಾದಾಗ ಜಗತ್ತಿನ ರಾಜಕೀಯ ಪರಿಸ್ಥಿತಿಗೂ, ಈಗಿನದಕ್ಕೂ ಅಜಗಜಾಂತರ. ಪಶ್ಚಿಮ ಗೋಳಾರ್ಧದಲ್ಲಿ ಮೊದಲ ಕ್ರಾಂತಿಯಾದ ಕ್ಯೂಬಾ, ದೊಡ್ಡ ಹೆಜ್ಜೆಯಾಗಿತ್ತು. ಮೂರನೇ ಜಗತ್ತಿನ ಹಲವು ದೇಶಗಳಲ್ಲಿ ಕ್ರಾಂತಿಗೆ ಪಕ್ವವಾದ ಸನ್ನಿವೇಶ ಇದ್ದ ಕಾಲ. ಆದರೂ ಕ್ಯೂಬಾದ ಕ್ರಾಂತಿ, ಅದರ ವಿಶಿಷ್ಟ ಪರಿಸ್ಥಿತಿಯಿಂದ ಅಪಾಯದ ದಂಡೆಯಲ್ಲೇ 45 ವರ್ಷ ಕಾಲ ಬದುಕಿದೆ, ಬೆಳೆದಿದೆ. ತನ್ನ ಸಾಧನೆಗಳನ್ನು ಮೆರೆದಿದೆ. ಹೊಸ ಸವಾಲುಗಳನ್ನು ದಿಟ್ಟತನದಿಂದ ಎದುರಿಸಿದೆ. 'ಕ್ರಾಂತಿ ಅಥವಾ ಮರಣ' ಇದು ಕ್ಯೂಬಾ ಕ್ರಾಂತಿ ನಂತರದ ಒಂದು ಸತತ ಘೋಷಣೆ - ಒಂದು ಕಡೆ ಮರಣದ ಅಪಾಯವನ್ನು ದಿನಾ ಎದುರಿಸಿದ್ದು, ಇನ್ನೊಂದು ಕಡೆ ಕ್ಯೂಬಾ ತನ್ನ ಕ್ರಾಂತಿಯ ಹಾದಿಯಿಂದ ಸ್ವಲ್ಪವೂ ವಿಚಲಿತವಾಗಲಿಲ್ಲ. ಕ್ಯೂಬಾ ಬೇರೆ ಪೂರ್ವಯುರೋಪಿನ ಸಮಾಜವಾದಿ ದೇಶಗಳಂತೆ ಪ್ರಮುಖ ತಪ್ಪುಗಳನ್ನು ಮಾಡಿದ್ದರೆ, ಅದರ ಕ್ರಾಂತಿಗೆ ಮರಣ ಕಾದಿತ್ತು. ಸೋವಿಯತ್ ಯೂನಿಯನ್ ಮತ್ತು ಪೂರ್ವಯುರೋಪಿನಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿತದ ನಂತರ, ಹಲವು ವೀಕ್ಷಕರು (ಕ್ಯೂಬನ್ ಕ್ರಾಂತಿಯ ಬೆಂಬಲಿಗರು ಸೇರಿದಂತೆ) ಕ್ಯೂಬಾ ಸಮಾಜವಾದ ಬಹಳ ಕಾಲ ಉಳಿಯಲಾರದು ಎಂದು ಹೇಳಿದ್ದರು. ಕ್ಯೂಬಾ ಈ ವಿಶಿಷ್ಟ ಪರಿಸ್ಥಿತಿಯನ್ನು ದಿಟ್ಟತನದಿಂದ ಎದುರಿಸಿ, ಅದರ ಕ್ರಾಂತಿಯ ಸ್ಥೈರ್ಯ, ಬಲವನ್ನು ಪುನಃ ಪ್ರದರ್ಶಿಸಿತು. ಈಗ ಇರಾಕ್ ಯುದ್ಧದ ನಂತರ ಇನ್ನೊಂದು ಗಂಭೀರ ಪರಿಸ್ಥಿತಿ ಉಂಟಾಗಿದೆ. ಸಾಮ್ರಾಜ್ಯಶಾಹಿ ಅಮೆರಿಕ ತನ್ನ 90 ಮೈಲುಗಳ ದೂರದಲ್ಲಿ ಸಮಾಜವಾದದ ಪತಾಕೆ 45 ವರ್ಷದಿಂದ ಅವ್ಯಾಹತವಾಗಿ ಹಾರುತ್ತಿರುವುದನ್ನು ಇನ್ನೂ ಜೀರ್ಣಿಸಿಕೊಳ್ಳುತ್ತಿಲ್ಲ. ಇರಾಕ್ ರೀತಿಯ ಮಿಲಿಟರಿ ದಾಳಿಯ ಪರಿಸ್ಥಿತಿಗೆ ಕ್ಯೂಬಾ ತಯಾರಾಗಬೇಕಾಗಿದೆ. ಈ ಸಂದರ್ಭದಲ್ಲಿ ಕ್ಯೂಬಾದ ವಿಶಿಷ್ಟ ಸಾಧನೆಗಳು, ಎದುರಿಸುತ್ತಿರುವ ಸವಾಲುಗಳ ಒಂದು ಚಿತ್ರಣ ಇಲ್ಲಿದೆ.

ಸಾಮಾಜಿಕ ಸೇವೆಗಳ ಕ್ಷೇತ್ರದಲ್ಲಿ ಕ್ಯೂಬಾದ ಸಾಧನೆಗೆ ವಿಶ್ವಖ್ಯಾತಿ ಇದೆ. ಅದರಲ್ಲೂ ಆರೋಗ್ಯ, ಲಿಂಗ ಸಮಾನತೆ ಮತ್ತು ಶಿಕ್ಷಣದ ಕ್ಷೇತ್ರಗಳಲ್ಲಿ ಅತ್ಯಂತ ಕ್ರೂರ ಆರ್ಥಿಕ ದಿಗ್ಬಂಧನ ಎದುರಿಸಬೇಕಾದರೂ, ಈ ಕ್ಷೇತ್ರಗಳ ಸಾಧನೆಗಳನ್ನು ಉಳಿಸಿಕೊಂಡು ಬೆಳೆಸಿದೆ ಕ್ಯೂಬಾ.

ಕ್ಯೂಬಾ ಕ್ರಾಂತಿಗೆ 45 ವರ್ಷ





ವಿದ್ಯಾರ್ಥಿ-ಶಿಕ್ಷಕ ಪ್ರಮಾಣದಲ್ಲೂ ಪ್ರಥಮ

- ಪ್ರಾಥಮಿಕ ಹಂತದಲ್ಲಿ 20 ವಿದ್ಯಾರ್ಥಿಗಳಿಗೆ ಒಂದು ಶಿಕ್ಷಕ (ಜಗತ್ತಿನಲ್ಲೇ ಅತ್ಯಂತ ಉತ್ತಮ ಪ್ರಮಾಣ)
- ಸಂಪೂರ್ಣ ಸಾಕ್ಷರತೆಯನ್ನು ಎರಡೇ ವರ್ಷಗಳಲ್ಲಿ ಸಾಧಿಸಿದ ಕೀರ್ತಿ ಕ್ಯೂಬಾದ್ದು. ಕ್ರಾಂತಿಪೂರ್ವ (1958) ರಲ್ಲಿ ಶೇಕಡಾ 70 ಸಾಕ್ಷರತೆಯಿಂದ ಆರಂಭಿಸಿ 1961 ರಲ್ಲಿ ಶೇಕಡಾ 96 ಕ್ಕೇರಿತು. ಇದಕ್ಕಾಗಿ 2.7 ಲಕ್ಷ ಸಾಕ್ಷರತಾ ಸ್ವಯಂ ಸೇವಕರು ವ್ಯಾಪಕವಾಗಿ ದುಡಿದರು. ಈಗಿನ ಸಾಕ್ಷರತೆ ಪ್ರಮಾಣ ಶೇಕಡಾ 99.8
- ಕ್ರಾಂತಿಪೂರ್ವದಲ್ಲಿದ್ದ ಕೇವಲ ಮೂರು ವಿಶ್ವ ವಿದ್ಯಾಲಯಗಳು ಬೆರಳೆಣಿಕೆಯ ಡಿಗ್ರಿ ಕೋರ್ಸುಗಳನ್ನು ಕೊಡುತ್ತಿದ್ದು, ಈಗ 50 ಕ್ಕೂ ಹೆಚ್ಚು ಉಚ್ಚ ಶಿಕ್ಷಣ ಸಂಸ್ಥೆಗಳು 85 ಕ್ಕೂ ಹೆಚ್ಚು ಡಿಗ್ರಿ ಕೋರ್ಸುಗಳನ್ನು ಕೊಡುತ್ತವೆ. ಪ್ರತಿಯೊಂದು ಪಟ್ಟಣದಲ್ಲೂ ಉಚ್ಚ ಶಿಕ್ಷಣಕ್ಕೆ ಸವಲತ್ತು ಇರುತ್ತದೆ.
- ಹೈಸ್ಕೂಲಿನಲ್ಲಿ ಗಣಿತ ಮುಂತಾದ ಕಠಿಣ ವಿಷಯಗಳ ಶಿಕ್ಷಣ ಉತ್ತಮಪಡಿಸಲು ಕೈಗೊಂಡ ವಿಶೇಷ ಕಾರ್ಯಕ್ರಮ, ಒಂದೇ ವರ್ಷದಲ್ಲಿ ಅತ್ಯುತ್ತಮ ಫಲಿತಾಂಶ ಕೊಟ್ಟಿದೆ.

ಡಾಕ್ಟರು - ಜನತೆಯ ಪ್ರಮಾಣದಲ್ಲಿ ಕ್ಯೂಬಾ ಮೊದಲಿಗ

ಆರೋಗ್ಯದ ಕ್ಷೇತ್ರದಲ್ಲಿ ಕ್ಯೂಬಾದ ಕೆಲವು ಸಾಧನೆಗಳು

- 169 ಕ್ಯೂಬನ್ನರಿಗೆ ಒಬ್ಬ ಡಾಕ್ಟರಿದ್ದು ಈ ಪ್ರಮಾಣ ಜಗತ್ತಿನಲ್ಲೇ ಅತ್ಯಂತ ಉತ್ತಮ (ಪ್ರತಿ ಡಾಕ್ಟರು ನೋಡಿಕೊಳ್ಳಬೇಕಾದ ಜನಸಂಖ್ಯೆಯ ಪ್ರಮಾಣ ಕಡಿಮೆ ಇದ್ದಷ್ಟು ಉತ್ತಮ ವೈದ್ಯಕೀಯ ಸೇವೆ ಸಾಧ್ಯ)
- ಶಿಶು ಮರಣ ದರ 6.5 ಇದ್ದು, ಇದು ಮೂರನೇ ಜಗತ್ತಿನ ದೇಶಗಳಲ್ಲಿ ಅತ್ಯಂತ ಉತ್ತಮ ಮಾತ್ರವಲ್ಲ, ಅಮೆರಿಕ ಸೇರಿದಂತೆ ಹಲವು ಅಭಿವೃದ್ಧಿ ದೇಶಗಳನ್ನು ಮೀರಿಸಿದೆ. ಈ ದರ ಕ್ರಾಂತಿಪೂರ್ವ ಕ್ಯೂಬಾದಲ್ಲಿ 60 ಇದ್ದು, ಅದನ್ನು ಹತ್ತರಲ್ಲಿ ಒಂದು ಭಾಗಕ್ಕೆ ಇಳಿಸಿದ್ದು ಕ್ಯೂಬಾದ ಸಾಧನೆ.
- ಕ್ರಾಂತಿಪೂರ್ವ ಕ್ಯೂಬಾದಲ್ಲಿ 3 ಸಾವಿರ ಡಾಕ್ಟರುಗಳಿದ್ದು, ಅದು ಈಗ 67 ಸಾವಿರಕ್ಕೇರಿದೆ (ಕ್ರಾಂತಿಯಾದಾಗ ಡಾಕ್ಟರುಗಳಲ್ಲಿ ಅರ್ಧ ಭಾಗ ದೇಶ ಬಿಟ್ಟು ಹೋಗಿದ್ದರೂ ಪರಿಸ್ಥಿತಿ ನಿಭಾಯಿಸಲಾಯಿತು.)
- ಆರೋಗ್ಯ ಸೇವೆ ಎಲ್ಲಾ ನಾಗರಿಕರಿಗೆ (ಅತ್ಯಂತ ಆಧುನಿಕ ಅಪರೂಪದ ದುಬಾರಿ ಚಿಕಿತ್ಸೆ ಸೇರಿ) ಪೂರ್ತಿ ಉಚಿತ.
- ಕ್ಯೂಬನ್ನರ ಸರಾಸರಿ ಆಯುಷ್ಯ 55 ರಿಂದ 76 ಕ್ಕೇರಿದೆ.
- ಕ್ಯೂಬಾ ಜಗತ್ತಿನಾದ್ಯಂತ ತನ್ನ ಡಾಕ್ಟರುಗಳನ್ನು ನೆರವಿಗೆ ಕಳಿಸುತ್ತದೆ. ಕ್ಯೂಬಾ ಕಳಿಸುವ ಡಾಕ್ಟರುಗಳ ಸಂಖ್ಯೆ ವಿಶ್ವ ಆರೋಗ್ಯ ಸಂಸ್ಥೆ ಕಳಿಸುವ ಡಾಕ್ಟರುಗಳಿಗಿಂತಲೂ ಹೆಚ್ಚು. ಸದ್ಯಕ್ಕೆ ಇಂತಹ ಎರಡು ಸಾವಿರ ಕ್ಯೂಬನ್ ಡಾಕ್ಟರುಗಳು 50 ದೇಶಗಳಲ್ಲಿ ಸೇವೆ ಸಲ್ಲಿಸುತ್ತಾ ಇದ್ದಾರೆ.



ಶಿಕ್ಷಣ, ಸಂಸ್ಕೃತಿ ಮತ್ತು ಆರೋಗ್ಯದ ಕ್ಷೇತ್ರದಲ್ಲಿ ಸಾಧನೆಗಳಿಗಾಗಿ ಕ್ಯೂಬಾದ ಹೆಸರು ಮನುಕುಲದ ಚರಿತ್ರೆಯಲ್ಲಿ ಅಜರಾಮರವಾಗಿ ಇರುತ್ತದೆ.... ಏಕಮಾತ್ರ ಸೂಪರ್ ಪವರ್ ನಮ್ಮನ್ನು ಸುತ್ತುವರೆದಿದೆ. ಯುರೋಪು ಸಹ ಹೆಚ್ಚು ಕಡಿಮೆ ದಿಗ್ಬಂದನ ಹಾಕಿದೆ. ಆದರೆ ಇವೆರಡೂ ಸೇರಿ, ಕ್ಯೂಬನ್ನರ ಕ್ರಾಂತಿಯನ್ನು ಸೋಲಿಸಲಾರವು. ಸಮಾಜವಾದಿ ಕ್ಯೂಬಾದ ಬಳಿ ಇರುವ ಮಾನವ ಸಂಪತ್ತು ಮತ್ತು ನೈತಿಕ ಮೌಲ್ಯಗಳನ್ನು ಎಂದೂ ಸಂಗಟ್ಟಲಾರವು.

- ಫಿಡೆಲ್ ಕ್ಯಾಸ್ಟ್ರೋ

ದಿಗ್ಬಂಧನ ಮುಗಿಯದ ಸರಣಿ

- ಕ್ಯೂಬಾದ ಮೇಲೆ ಅಮೆರಿಕದ ದಿಗ್ಬಂಧನ 1962 (ಅಂದರೆ ಕ್ರಾಂತಿ ಆಗಿ 3ನೇ ವರ್ಷದಿಂದ) ಜಾರಿಯಲ್ಲಿದೆ.
- ಈ ದಿಗ್ಬಂಧನ ಬಂದಿದ್ದು-ಕ್ಯೂಬಾ (ಒಂದು ಮಾಜಿ ವಸಾಹತುಶಾಹಿ) ಅಮೆರಿದ ಮೇಲೆ ಪೂರ್ಣವಾಗಿ ಅವಲಂಬಿಸಿದ್ದಾಗ (ರಫ್ತಿನಲ್ಲಿ ಮೂರನೇ - ಎರಡು ಭಾಗ, ಆಮದಿನ ಮುಕ್ಕಾಲು ಭಾಗ ಅಮೆರಿಕದ ಜತೆ)
- ಆಮೇಲೆ ಸಮಾಜವಾದಿ ದೇಶಗಳ ಜತೆ ಆರ್ಥಿಕ-ಸಂಬಂಧ ಆರಂಭವಾದ ಮೇಲೆ ಪರಿಸ್ಥಿತಿ ಉತ್ತಮವಾದರೂ, 1989 ರಿಂದ (ಪೂರ್ವಯುರೋಪಿನಲ್ಲಿ ಸಮಾಜವಾದ ವ್ಯವಸ್ಥೆ ಕುಸಿದುಬಿದ್ದ ಮೇಲೆ) ಪುನಃ ತೀವ್ರವಾಗಿತ್ತು.
- ಆರ್ಥಿಕ ದಿಗ್ಬಂಧನದಿಂದ ಕ್ಯೂಬಾಕ್ಕೆ ಒಟ್ಟಾಗಿ ಆಗಿರುವ ನಷ್ಟ 70 ಶತಕೋಟಿ ಡಾಲರುಗಳು.
- 1961 ರಲ್ಲಿ 'ಬೇ ಆಫ್ ಪಿಗ್ಸ್ ದಾಳಿ'ಯಿಂದ ಆರಂಭವಾಗಿ, ಅಮೆರಿಕದ ಸಿಐಎ ಕ್ಯೂಬಾದ ಮೇಲೆ ಮಿಲಟರಿ ಧಾಳಿ - ಹಿಂಸಾಚಾರ ಸಹ ನಡೆಸಿದೆ. ಮೂರುವರೆ ಸಾವಿರ ಕ್ಯೂಬನ್ನರನ್ನು ಸಿಐಎ ಕೊಂದಿದೆ. ಎರಡು ಸಾವಿರಕ್ಕೂ ಹೆಚ್ಚಾಗಿ ಕ್ಯೂಬನ್ನರು ಗಾಯಗೊಂಡಿದ್ದಾರೆ. ಫ್ಲೋರಿಡಾದಲ್ಲಿ ನೆಲೆಸಿರುವ ಮಾಜಿ ಕ್ಯೂಬನ್ನರನ್ನು ಬಳಸಿ ವಿಮಾನ ಅಪಹರಣ, ಹೇಳ ತೀರದ ಹಿಂಸಾಚಾರ ನಡೆಸಿದೆ.
- ಫಿಡೆಲ್ ಕ್ಯಾಸ್ಟ್ರೋ ಮುಂತಾದ ಹಿರಿಯ ನಾಯಕರ ಹತ್ಯೆಗೆ ಹಲವಾರು ಪ್ರಯತ್ನಗಳನ್ನು ಸಿಐಎ ನಡೆಸಿದೆ.
- 1992 ರಲ್ಲಿ 'ಟೋರಿಸೆಲ್ಲಿ ಕಾನೂನು' ಮತ್ತು 1996 ರಲ್ಲಿ 'ಹೆಲ್ಮ್ಸ್-ಬರ್ಟನ್ ಕಾನೂನು' ತಂದು ಕ್ಯೂಬಾದ ಮೇಲೆ ಅಂತರ್ರಾಷ್ಟ್ರೀಯ ದಿಗ್ಬಂಧನ ಗಟ್ಟಿಗೊಳಿಸಿದೆ.
- ಈ ಎರಡೂ ಕಾನೂನುಗಳು ಅಂತರ್ರಾಷ್ಟ್ರೀಯ ಕಾನೂನು ಮತ್ತು ವಿಶ್ವಸಂಸ್ಥೆ ನಿಯಮಗಳಿಗೆ ವಿರುದ್ಧವಾಗಿವೆ ಎಂದು ಅಂತರ್ರಾಷ್ಟ್ರೀಯ ಖಂಡನೆಗೆ ಒಳಗಾಗಿದೆ.
- ಕ್ಯೂಬಾದ ಮೇಲೆ ಆರ್ಥಿಕ ದಿಗ್ಬಂಧನ ಮತ್ತು ಈ ಎರಡೂ ಕಾನೂನುಗಳನ್ನು ರದ್ದು ಮಾಡಬೇಕು ಎಂದು ಒತ್ತಾಯಿಸಿ 1992 ರಿಂದ ಪ್ರತಿವರ್ಷ ವಿಶ್ವಸಂಸ್ಥೆ ಮಹಾಸಭೆ ಭಾರಿ ಬಹುಮತದಿಂದ ನಿರ್ಣಯ ತೆಗೆದುಕೊಂಡಿದೆ. ಕಳೆದ ವರ್ಷ ಸೇರಿ ಒಟ್ಟು 13 ಬಾರಿ ಈ ನಿರ್ಣಯ ತೆಗೆದು ಕೊಳ್ಳಲಾಗಿದ್ದು, ಹೆಚ್ಚಿನ ವರ್ಷಗಳಲ್ಲಿ ಈ ನಿರ್ಣಯ ವಿರೋಧಿಸಿದ್ದು ಹೆಚ್ಚಾಗಿ ಕೇವಲ 2 ದೇಶಗಳು ಮಾತ್ರ (ಅಮೆರಿಕ, ಇಸ್ರೇಲ್). ನಿರ್ಣಯಕ್ಕೆ ಬೆಂಬಲಕೊಟ್ಟ ದೇಶಗಳ ಸಂಖ್ಯೆ 1992 ರಿಂದ 50 ರಿಂದ ಏರಿ ಕಳೆದ ವರ್ಷ 179 ಕ್ಕೇರಿದೆ.
- ಅಮೆರಿಕದ ಕಂಪನಿಗಳು, ಸಂಘಟನೆಗಳು, ವ್ಯಕ್ತಿಗಳು ಸೇರಿದಂತೆ ಕ್ಯೂಬಾದ ಜತೆ ಸೌಹಾರ್ದತೆ ಬೆಳೆಸುವವರ ಸಂಖ್ಯೆ ದಿನೇದಿನ ಏರುತ್ತಿದೆ.
- ಲ್ಯಾಟಿನ್ ಅಮೆರಿಕದ ದೇಶಗಳು ಅಮೆರಿಕದ ಒತ್ತಡ ನಿರ್ಲಕ್ಷಿಸಿ, ಕ್ಯೂಬಾದ ಜತೆ ಆರ್ಥಿಕ ಸಂಬಂಧ ಆರಂಭಿಸಿವೆ.

ಕ್ಯೂಬಾ.... ಜನತೆಯ ಆಶಾಕಿರಣ - ಸುರ್ಜಿತ್

ಅಮೆರಿಕ ಮತ್ತು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಹೊರಿಸಿರುವ ನೀತಿಗಳಿಂದ ಜೀವನೋಪಾಯ ಕಳೆದುಕೊಂಡು ಕಂಗಾಲಾಗಿರುವ ಲ್ಯಾಟಿನ ಅಮೆರಿಕದ ಜನತೆಗೆ ಕ್ಯೂಬಾ ಒಂದು ಆಶಾಕಿರಣ... ಕ್ಯೂಬಾ ಅವರ ಹೋರಾಟಗಳ ಆಸೆ - ಆಕಾಂಕ್ಷೆಗಳ ಪ್ರತೀಕವಾಗಿದೆ... ಸಮಾಜವಾದ ಮತ್ತು ಶಾಂತಿಗಾಗಿ ಹೋರಾಡುತ್ತಿರುವ ಎಲ್ಲಾ ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಗಳಿಗೆ ಕ್ಯೂಬಾ ಸ್ಫೂರ್ತಿಯ ಚಿಲುಮೆ.... ತಮ್ಮ ಕ್ರಾಂತಿಯನ್ನು ರಕ್ಷಿಸುವಲ್ಲಿ ಕ್ಯೂಬನ್ನರು ತೋರುತ್ತಿರುವ ಕೆಚ್ಚು, ಸ್ಥೈರ್ಯ... ನ್ಯಾಯ, ಸ್ವಾತಂತ್ರ್ಯ ಮತ್ತು ಸಮಾಜವಾದಕ್ಕೆ ಹೋರಾಡುತ್ತಿರುವ ವಿಶ್ವದ ಎಲ್ಲಾ ಜನತೆಯಲ್ಲಿ ಧೈರ್ಯ ತುಂಬುತ್ತಿದೆ.



ಜಡ ಸಂಸ್ಕೃತಿ ವಿರುದ್ಧದ ಚೈತನ್ಯ ಸಂಸ್ಕೃತಿ

ವಿಶ್ವ ಸಾಮಾಜಿಕ ವೇದಿಕೆಯ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ದೇಶದ ಜನಪರ ಸಾಂಸ್ಕೃತಿಕ ಸಂಘಟನೆಗಳು ಬೀದಿನಾಟಕ, ಕ್ರಾಂತಿಗೀತೆ, ಜಾನಪದ ಕುಣಿತ ಹಾಗೂ ಸಾಮ್ರಾಜ್ಯಶಾಹಿ, ಜಾಗತೀಕರಣ ಪ್ರಕ್ರಿಯೆಯ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು. ಸುಸ್ತಿಲ್ಲದೆ ಶಿಸ್ತಿನಿಂದ ವಿಶ್ವ ಸಾಮಾಜಿಕ ವೇದಿಕೆಯ ಸಮಾವೇಶದಲ್ಲಿ ಜನಪರ ಹೋರಾಟಗಾರರು ಭಾಗಿಯಾಗಿದ್ದರು. ಜಡ ಸಂಸ್ಕೃತಿ ವಿರುದ್ಧ ಹೋರಾಡಲು ಚೈತನ್ಯ ಸಂಸ್ಕೃತಿಯಾಗಿತ್ತು ಮುಂಬೈ ಸಮಾವೇಶ.



ಮುಂಬೈ WSF ಸಮಾವೇಶದಲ್ಲಿ ಹೊಮ್ಮಿದ ಹೃದಯಗೀತೆಗಳು

ಬಾಗುರ ನಗರದ ವಸತಿ ವ್ಯವಸ್ಥೆಯಲ್ಲಿ 82ನೇ ಬಿಡಾರವದು. ದೇಶದ ಹಲವಾರು ಸಂಘಟನೆಯ ಕಾರ್ಯಕರ್ತರು ತಮ್ಮ ಭಾಷೆಯಲ್ಲಿನ ಜಾನಪದ, ಲಾವಣಿ, ಸುಗ್ಗಿ ಪದಗಳನ್ನು ಹಾಡಿ ಕುಣಿಯುತ್ತಿದ್ದ ರಾತ್ರಿಯದು. ನೇಪಾಳ, ಕೆನಡಾದವರು ಕೂಡಾ ಬಂದು ಸೇರಿದ್ದರು. ಕೆನಡಾದ ಪೌಲ್ಪ್ ಎಂಬ ಪತ್ರಕರ್ತ ತಮ್ಮ ಕೆನಡಾ ದೇಶ ಭಕ್ತಿಗೀತೆಯನ್ನು ನಮ್ಮ ಡೋಲಕ, ತಮಟೆಗಳ ಸಾಥ್‌ನಲ್ಲಿ ಹಾಡಿ ಖುಷಿಪಟ್ಟರು. ಮರಾಠಿ ಲಾವಣಿಯೊಂದಕ್ಕೆ ಬೆಂಗಳೂರಿನ ಸಂಗಮ ಸಂಘಟನೆಯ ಹಿಜಡಾನ ನೃತ್ಯ, ನಮ್ಮ ಹಳೆ ಸಿನಿಮಾಗಳನ್ನೇ ನೆನಪಿಸಿತು. ಅದೊಂದು ಅದ್ಭುತ ರಾತ್ರಿಯಾಗಿತ್ತು ನಮಗೆಲ್ಲ.

ರಾತ್ರಿ ಹನ್ನೆರಡುವರೆಯಾಗಿತ್ತು. ಪಾಕಿಸ್ತಾನಿಗಳಿಬ್ಬರು ನಮ್ಮ ಬಿಡಾರಕ್ಕೆ ಬಂದು ತಮ್ಮ ಪರಿಚಯ ಮಾಡಿಕೊಂಡರು. ನಮ್ಮಲ್ಲಿನ ಕೆಲವು ಯುವಕರಿಗೆ ಪಾಕಿಸ್ತಾನ ಎಂದೊಡನೆ ತಾತ್ಸಾರತೆ ಮೂಡಿತು. ಆದರೆ ಆತ್ಮೀಯತೆಯಿಂದಲೇ ಅವರನ್ನು ಸ್ವಾಗತಿಸಿದರು. ಹಿಂದೂಸ್ಥಾನ ಪಾಕಿಸ್ಥಾನ ಭಾಯಿಭಾಯಿ ಎಂದು ಮಾತನ್ನಾರಂಭಿಸಿದ ಖಾನ್, ತಾನು ಭಾರತಕ್ಕೆ ಬರಲು ಪಟ್ಟಿರುವ ಕಷ್ಟ ಹೇಳಿಕೊಂಡನು. ನಾವೆಲ್ಲರೂ ಪಾಕಿಸ್ತಾನದ ಹಾಡೊಂದನ್ನು ಹಾಡಿ ಎಂದಾಗ, ನಮ್ಮೆಲ್ಲರ ಮಧ್ಯೆ ಕುಳಿತು ಹುಮ್ಮಸ್ಸಿನಿಂದ ನಾನು ಹಾಡುವುದು ಭಾರತದ್ದೆ ಹಾಡು, 1945-46 ರ ಸಂದರ್ಭದಲ್ಲಿ ಹಿಂದೂಸ್ತಾನ -ಪಾಕಿಸ್ತಾನ ವಿಂಗಡನೆಯಾದರೆ ಏನಾದೀತು? ಎಂಬುದನ್ನು ಅಂದಿನ ರೈತಗೇಣಿದಾರ ಸಂಘಟನೆ (ಹಿಂದೂ-ಮುಸ್ಲಿಂ ಸಂಘಟನೆ)ಯವರು ಹಾಡಿರುವ ಹಾಡದು. ಅಖಂಡ ಹಿಂದುಸ್ತಾನ ಒಡೆದು ಎರಡು ಭಾಗವಾದರೆ ಈ ನಮ್ಮ ಸಹೃದಯ ಮುಂದೊಂದು ದಿನ ಇಲ್ಲವಾದೀತು. ಮತಾಂಧತೆಯು ಉರಿ ಹತ್ತಿದರೆ ಇಂದಿನ ನೆಮ್ಮದಿ ನಾಳೆ ಇಲ್ಲವಾದೀತು. ಜನಾಂಗೀಯ ಮಧ್ಯವರ್ತಿಯ ದ್ವೇಷ ಹೊತ್ತಿ ಉರಿದರೆ ನದಿಗಳಲ್ಲಿ ನೀರಿನೊಂದಿಗೆ ರಕ್ತವು ಹರಿದೀತು. ಒಂದೇ ಮಡಿಲ ಮಕ್ಕಳು ನಾವು ಬೇರೆ ಬೇರೆಯಾದರೆ ತಾಯಿ ನೆಮ್ಮದಿಯಿಂದಿರಲು ಸಾಧ್ಯವಿಲ್ಲ. ಈ ಪಾಲು ಪಡೆದು ನಾವು ಸಾಧಿಸುವುದಾದರೂ ಏನಿದೆ? ನಮಗೆ ನಿಮ್ಮಗಳ ವಾದವೇ ಬೇಡ, ದೇಶವನ್ನು ಇಬ್ಭಾಗ ಮಾಡುವುದೆ ಬೇಡ ಎಂಬುದು ಆ ಹಾಡಿನ ಅರ್ಥವಾಗಿತ್ತು. ಪಾಕಿಸ್ಥಾನಿಯೊಂದಿಗೆ ಹಾಡಲು ಹರಿಯಾಣ, ಪಂಜಾಬ, ಉತ್ತರ ಪ್ರದೇಶದ ಕಾರ್ಯಕರ್ತರು ಧ್ವನಿಗೂಡಿಸಿದರು.

"ಹೃದಯಗಳೊಡೆದು ನದಿಗಳಲ್ಲಿ ರಕ್ತ ಹರಿದರೆ ಸಾಧಿಸುವುದಾದರೂ ಏನು?" ಭಾರತದ ಪ್ರತಿನಿಧಿಗಳ ನಡುವೆ ಹಾಡಿದ ಪಾಕಿಸ್ತಾನಿ ಯುವಕ

ಈಗಲೂ ಈ ಹಾಡನ್ನು ಭಾರತ ಪಾಕಿಸ್ತಾನ ಗಡಿಗಳಲ್ಲಿ ಜನ ಹಾಡುತ್ತಾರಂತೆ. ಜಾತಿ, ಮತ, ಧರ್ಮದ ಹೆಸರಿನಲ್ಲಿ ಮೂಲಭೂತವಾದಿಗಳ ಮತಾಂಧ ನೀತಿಯನ್ನು ಅನುಸರಿಸಿದರು. ನಷ್ಟ ಎರಡೂ ದೇಶಗಳಿಗಾಯಿತು. ಜನ ಮತ್ತಷ್ಟು ಸಂಕಷ್ಟಕ್ಕೊಳಗಾಗಿ ಹಿಂಸಾತ್ಮಕ ಕೃತ್ಯಗಳಲ್ಲಿ ತೊಡಗಿದ್ದಾರೆ. ಈಗ ರೋಷ ದ್ವೇಷ ಮತೀಯರಿಗೆ ಬಿಡೋಣ. ನಾವು ಜನಪರ ಹೋರಾಟಗಾರರು ನಮಗೆ ಎಲ್ಲಾ ವರ್ಗದ ಜನ ಸುಖಮಯವಾಗಿ ಬದುಕು ಸಾಗಿಸಲು ಜಾಗತಿಕ ಪ್ರಕ್ರಿಯೆಯ ಪರ್ಯಾಯ ಜಗತ್ತು. ಪಾಕಿಸ್ಥಾನೀಯ ಮಾತು ಮುಗಿದೊಡನೆ ನಾವೆಲ್ಲರೂ ಅವರನ್ನು ಅಭಿನಂದಿಸಿದೆವು.

ಅವನು ಪಕ್ಕಾ ಮುಸ್ಲಿಂನೇ ಹೌದು. ಮುಸ್ಲಿಮರಲ್ಲಿ ಇಂತಹ ಪರಧರ್ಮ ಸಂಹಿಷ್ಣುಗಳಿದ್ದಾರೆಂಬುದು, ಈ ನಮ್ಮ ಬಡಪಾಯಿ ಭಜರಂಗಿಗಳಿಗೆ ಅರ್ಥವಾಗುವುದಾದರೂ ಹೇಗೆ? ಅವರು ಬಂದೂಕು ಕೊಡುತ್ತಾರೆಂದು, ತ್ರಿಶೂಲ ಕೊಡುವ ಮೂರ್ಖರಿವರು. ಇವರು ನಮ್ಮ ದೇಶ ಭಕ್ತರು! ಕೋಮುದಳ್ಳುರಿಯೊಂದೇ ಇವರ ಗುರಿ. ಅರ್ಥವಾಗದು ಇವರಿಗೆ ಈ ಕಿಡಿಗೇಡಿಗಳಿಗೆ ಕುವೆಂಪುರವರ ಮನುಜ ಮತ, ವಿಶ್ವಪಥ.

ಮಹಾದೇವು ಹಡಪದ

ಬಿಜೆಪಿಗೆ ಬಹುಮತ ಎಲ್ಲಿಂದ?

ಸಂವಾದ

ಭಾರತೀಯ ಜನತಾ ಪಕ್ಷದ ಕರ್ನಾಟಕ ರಾಜ್ಯದ ಅಧ್ಯಕ್ಷ ಅನಂತ ಕುಮಾರ್‌ರವರು ಮುಂದಿನ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುವುದೆಂದು ಭವಿಷ್ಯ ನುಡಿದಿದ್ದಾರೆ. ಅದರೆ ಅದು ಹೇಗೆ ಸಾಧ್ಯ ಎಂಬುದನ್ನು ಅವರು ವಿವರವಾಗಿ ಹೇಳಲಿಲ್ಲ.

ಅದೇ ಸಂಬರ್ಭದಲ್ಲಿ ಮಾತನಾಡಿದ ಅನಂತಕುಮಾರ್ 'ಲೋಕಸಭೆ ಚುನಾವಣೆಗೆ ಅಭ್ಯರ್ಥಿಯಾಗುವುದು ನನ್ನ ಅಪೇಕ್ಷೆ' ಎಂದು ಹೇಳುವುದರ ಮೂಲಕ ವಿಧಾನಸಭೆಯಲ್ಲಿ ತನ್ನ ಪಕ್ಷಕ್ಕೆ ಭವಿಷ್ಯವಿಲ್ಲ ಎಂಬುದನ್ನು ಪರೋಕ್ಷವಾಗಿ ಒಪ್ಪಿಕೊಂಡಂತೆ ಆಗಿದೆ.

ಚುನಾವಣಾ ಸಂದರ್ಭದಲ್ಲಿ ಗುಲ್ಲೆಬ್ಬಿಸುವುದು ಬಿಜೆಪಿಯ ವೈಖರಿ. ಸಾಮಾನ್ಯವಾಗಿ ಕರ್ನಾಟಕದ ಜನತೆ ಇದಕ್ಕೆ ಮಾರುಹೋದವರಲ್ಲ. ಉದಾಹರಣೆಗೆ, 1994ರ ಚುನಾವಣೆಗಿಂತ ಮೊದಲು ಈದ್ಗಾ ಮೈದಾನದ ವಿಷಯವನ್ನೆತ್ತಿ ಕೋಮುಗಲಭೆಗಳನ್ನು ಹುಟ್ಟುಹಾಕಿ 'ಹಿಂದೂ' ಮತಗಳನ್ನು ತನ್ನ ತೆಕ್ಕೆಗೆ ಹಾಕಿಕೊಳ್ಳಲು ಪ್ರಯತ್ನಿಸಿತು. ಆದರೆ ಕೆಲವು ಸೀಟುಗಳನ್ನು ಜಾಸ್ತಿ ಮಾಡಿಕೊಳ್ಳಲು ಸಾಧ್ಯವಾಯಿತೇ ಹೊರತು, ಅಬ್ಬರದ ಪ್ರಚಾರಕ್ಕೆ ತಕ್ಕ ಪ್ರತಿಫಲ ಸಿಗಲಿಲ್ಲ. 1999 ರ ಚುನಾವಣೆ ಸಂದರ್ಭದಲ್ಲಿ ಈದ್ಗಾ ಮೈದಾನ ವಿವಾದ ಸುಪ್ರಿಂ ಕೋರ್ಟಿನಲ್ಲಿ ಇದ್ದುದರಿಂದ ಆ ವಿಷಯುವನ್ನು ಎತ್ತಲಾಗಲಿಲ್ಲ. ಬಾಬಾ ಬುಡನ್‌ಗಿರಿ, ಹಿಂದೂ ಸಮಾಜೋತ್ಸವ ಮೊದಲಾದ ಗಿಮಿಕ್‌ಗಳನ್ನು ನಡೆಸಿದರೂ ಮತದಾರರ ಆಕಾಂಕ್ಷೆ ಅತ್ತ ಕಡೆ ಸರಿಯಲಿಲ್ಲ. ಆದ್ದರಿಂದಲೇ ಕರ್ನಾಟಕದ ಹೆಸರಾಂತ ನಾಯಕ ರಾಮಕೃಷ್ಣ ಹೆಗಡೆಯವರ ಮೂಲಕ ಜನತಾದಳವನ್ನು ಒಡೆದು ಜೆಡಿ(ಯು)ನೊಂದಿಗೆ ಮೈತ್ರಿ ಮಾಡಿಕೊಂಡರೂ ಒಟ್ಟು ಸಂಖ್ಯೆ 44 ದಾಟಲಾಗಲಿಲ್ಲ. ಈ 44 ಸೀಟುಗಳು ಸಹ ಹಲವಾರು ಕಡೆಗಳಲ್ಲಿ, ಆಯ್ಕೆಯಾದ ಶಾಸಕರ ವ್ಯಕ್ತಿಗತ ಪ್ರಭಾವದ ಆಧಾರದಲ್ಲಿ ಬಂದುದಾಗಿದೆ.

ಈ ನಾಲ್ಕು ವರ್ಷದ ಅವಧಿಯಲ್ಲಿ ಬಿಜೆಪಿಯ ಪ್ರಭಾವ ಇನ್ನಷ್ಟು ಕುಗ್ಗಿದೆ. ಒಟ್ಟು 7 ಜನ ಶಾಸಕರು ಈಗಾಗಲೇ ಬಿಟ್ಟು ಹೋಗಿದ್ದಾರೆ. ಒಬ್ಬ ಪ್ರಭಾವಿ ಸಂಸತ್ ಸದಸ್ಯ, ಇನ್ನೋರ್ವ ಮಾಜಿ ಸಂಸತ್ ಸದಸ್ಯ - ಹೀಗೆ ಹಲವರು ಬಿಜೆಪಿ ತೊರೆದಿದ್ದಾರೆ. ವಿರೋಧ ಪಕ್ಷಗಳ ಪ್ರಚಾರದ ದುರ್ಬಲತೆಯಿಂದಾಗಿ (ಅಥವಾ ಮಾಧ್ಯಮದವರ ತಾರತಮ್ಯ) ಬಿಜೆಪಿ ತೊರೆದವರ ಬಗ್ಗೆ ಜಾಸ್ತಿ ಪ್ರಚಾರ ದಕ್ಕದೆ, ಅಲ್ಲೊಂದು ಇಲ್ಲೊಂದು ಸೇರುತ್ತಿರುವವರ ಬಗ್ಗೆಯೇ ಪ್ರಚಾರ ದಕ್ಕುತ್ತಿದೆ

ವರ್ಷಕ್ಕೆ ಒಂದು ಕೋಟಿ ಉದ್ಯೋಗ ಒದಗಿಸುವುದಾಗಿ ಹೇಳಿದ ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಕೋಟಿಗಟ್ಟಲೆ ಉದ್ಯೋಗ ನಾಶಕ್ಕೆ ಕಾರಣವಾಗಿದೆ. 'ಇಂಡಿಯಾ ಪ್ರಕಾಶಿಸುತ್ತಿದೆ' ಎಂದು ಕೋಟಿಗಟ್ಟಲೆ ಖರ್ಚು ಮಾಡಿ ಪುಟಗಟ್ಟಲೆ ಜಾಹೀರಾತು ನೀಡಿದರೂ, ಪ್ರಕಾಶಿಸುತ್ತಿರುವುದು ಶ್ರೀಮಂತವರ್ಗದ ಕೆಲವರು ಮಾತ್ರ ಎನ್ನುವುದು ಜಾಹಿರಾತಿನಲ್ಲಿ ಬರದಿದ್ದರೂ ಜನರಿಗೆ ಕ್ರಮೇಣ ಅರ್ಥವಾಗುತ್ತಿದೆ. ಹೀಗೆ ಹಲವಾರು ಭರವಸೆಗಳನ್ನು ನೀಡಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ಎನ್.ಡಿ.ಎ ಸರಕಾರದ ನೀತಿಗಳಿಂದ ಜನ ರೋಸಿಹೋಗಿದ್ದಾರೆ. ವಿಶೇಷವಾಗಿ ಉದಾರೀಕರಣದ ನೀತಿಯಿಂದ ಕೃಷಿ ಕ್ಷೇತ್ರವು ಅವಸಾನಗೊಂಡಿದ್ದು ರೈತರು ಆತ್ಮಹತ್ಯೆಗೆ ಒಳಗಾಗಿದ್ದಾರೆ. ಇದರಲ್ಲಿ ಕೃಷ್ಣ ಸರಕಾರದ ಪಾಲಿದ್ದರೂ, ಕೇಂದ್ರ ಸರಕಾರದ ನೀತಿಗಳಿಂದಲೇ ಹೀಗಾಗುತ್ತಿದೆ ಎಂದು ಬಹಳ ಜನ ರೈತರಿಗೆ ಅರ್ಥವಾಗಿದೆ. ಆದ್ದರಿಂದಲೇ ಕೃಷ್ಣ ಸರಕಾರದ ವಿರುದ್ಧ ಜನಕ್ಕೆ ಅಸಮಾಧಾನವಿದ್ದರೂ ಅದು ಬಿಜೆಪಿ ಪರವಾಗಿ ಪರಿವರ್ತನೆ ಆಗಿಲ್ಲ.

ಉದಾಹರಣೆಗೆ, ಇತ್ತೀಚೆಗೆ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಬಿಜೆಪಿಗೆ ಒಂದು ಸ್ಥಾನವನ್ನೂ ಗೆಲ್ಲಲು ಸಾಧ್ಯವಾಗಿಲ್ಲ. ಮಾತ್ರವಲ್ಲ ಅದಕ್ಕೇ ಸಿಕ್ಕಿದ ಒಟ್ಟು ಮತ 4695 ಮಾತ್ರ. ಅ.ಭಾ.ಪ್ರ. ಜನತಾದಳಕ್ಕೆ ಸಿಕ್ಕಿದ ಮತಗಳಿಗಿಂತ ಕಡಿಮೆ (9415). 25 ಸ್ಥಾನಗಳಿಗೆ ಚುನಾವಣೆ ನಡೆದಿದ್ದು, 3 ವಿಧಾನ ಪರಿಷತ್ ಕ್ಷೇತ್ರದಲ್ಲಿ ಮಾತ್ರ ಬಿ.ಜೆ.ಪಿ. 2ನೇ ಸ್ಥಾನದಲ್ಲಿತ್ತು. (ದಕ್ಷಿಣ ಕನ್ನಡ ಶಿವಮೊಗ್ಗ ಮತ್ತು ಬೆಂಗಳೂರು ನಗರ) ದಕ್ಷಿಣ ಕನ್ನಡ



ಜಿಲ್ಲೆಯಲ್ಲಿ (ಉಡುಪಿ ಸೇರಿದಂತೆ) ವಿಧಾನ ಪರಿಷತ್ತಿಗೆ ಎರಡು ಸ್ಥಾನಗಳಿಗೆ ಆಯ್ಕೆ ನಡೆದಿದ್ದರೂ, ಬಿಜೆಪಿ ಸ್ಪರ್ಧಿಸಿದ್ದು ಒಂದು ಸ್ಥಾನಕ್ಕೆ ಮಾತ್ರ. ತನ್ನೆಲ್ಲ ಪ್ರಥಮ ಪ್ರಾಶಸ್ತ್ಯದ ಮತಗಳನ್ನು ಒಬ್ಬರಿಗ ಮಾತ್ರ ಹಾಕಿಸಿಕೊಂಡರೂ ಗೆಲ್ಲಲು ಸಾಧ್ಯವಾಗಿರಲಿಲ್ಲ. ಆದರೆ 2 ಸ್ಥಾನಗಳನ್ನು ಪಡೆದ ಜನತಾದಳ(ಎಸ್) 11 ವಿಧಾನ ಪರಿಷತ್ ಕ್ಷೇತ್ರಗಳಲ್ಲಿ 2ನೇ ಸ್ಥಾನದಲ್ಲಿತ್ತು. ಒಟ್ಟು 22, 621 ಮತಗಳನ್ನು ಗಳಿಸಿತ್ತು. ಅಂದರೆ ರಾಜ್ಯದಾದ್ಯಂತ ಪ್ರಮುಖ ವಿರೋಧ ಪಕ್ಷದ ಸ್ಥಾನವನ್ನು ಜನತಾದಳ (ಎಸ್) ಆಕ್ರಮಿಸುತ್ತಿದೆ.

2000 ನೇ ಇಸವಿ ಜೂನ್ ತಿಂಗಳಲ್ಲಿ ನಡೆದ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಚುನಾವಣೆಯಲ್ಲಿ ಮೇಲೆ ಹೇಳಿದ ಜಿಲ್ಲೆಗಳಲ್ಲದೆ ಬೀದರ್ ಜಿಲ್ಲೆಯಲ್ಲಿ ಬಿಜೆಪಿ 2ನೇ ಸ್ಥಾನದಲ್ಲಿತ್ತು. ಆದರೆ ಅದರ ನಂತರದಲ್ಲಿ ನಡೆದ ಹುಮ್ನಾಬಾದ್ ಅಸ್ಸೆಂಬ್ಲಿ ಚುನಾವಣೆಯಲ್ಲಿ ತನ್ನ ಸ್ಥಾನವನ್ನು ಕಳೆದುಕೊಂಡುದು ಮಾತ್ರವಲ್ಲದೆ 3ನೇ ಸ್ಥಾನಕ್ಕೆ ದೂಡಲ್ಪಟ್ಟಿತು. ಇತ್ತೀಚೆಗೆ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಬೀದರ್‌ನಲ್ಲಿ ಬಿಜೆಪಿಗೆ 258 ಮತಗಳು, ಮಾತ್ರ ಲಭಿಸಿದ್ದು ಜನತಾದಳ(ಎಸ್)ಗೆ 980 ಮತಗಳೂ, ಲಭಿಸಿದ್ದವು. ಅಂದರೆ, ಬಿಜೆಪಿ ಬೆಂಬಲಿಗರಾಗಿದ್ದವರೂ ಸಹ ಆ ಪಕ್ಷದಿಂದ ದೂರ ಸರಿಯುತ್ತಿದ್ದಾರೆ.

ಈ ಮಧ್ಯೆ ಹುನಗುಂದ ಉಪಚುನಾವಣೆಯಲ್ಲಿ ಮಾತ್ರ ಬಿಜೆಪಿಗೆ 2ನೇ ಸ್ಥಾನಗಳಿಸಲು ಸಾಧ್ಯವಾಗಿತ್ತು. ಅದೂ ಸಹ ಬಿಜೆಪಿಯ ಸಾಧನೆ ಎಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ಇಲ್ಲಿ ಜನತಾದಳದ ಮತ 2 ಗುಂಪುಗಳಾಗಿ ನೇರ ವಿಭಜನೆಯಾಗಿತ್ತು. (vertical split) ಜೆ.ಡಿ.(ಎಸ್) ಮತ್ತು ಜೆಡಿ(ಯು) ಅಥವಾ AIPJD ಯ ಒಟ್ಟು ಮತಗಳು ಬಿಜೆಪಿ ಮತಕ್ಕಿಂತ ಜಾಸ್ತಿ ಇದ್ದವು. ಇದೀಗ ಜನತಾದಳದ ಕಾರ್ಯಕರ್ತರಲ್ಲಿ ಐಕ್ಯತೆ ಭಾವನೆ ಬೆಳೆಯುತ್ತಿದ್ದು ಎಐಪಿಜೆಡಿ ಯ ಬೆಂಬಲ ಕುಸಿಯುತ್ತಿದೆ.

ಆದ್ದರಿಂದ ಅನಂತಕುಮಾರ್ ಅವರ ಆಶಾಭಾವನೆ ಸತ್ಯವಾಗುವುದು ಸಾಧ್ಯವಿಲ್ಲ. ಮಾತ್ರವಲ್ಲ. ಪ್ರಮುಖ ವಿರೋಧಪಕ್ಷದ ಸ್ಥಾನ ಗಿಟ್ಟುವುದೂ ಇಲ್ಲ.

- ಬಾಲಕೃಷ್ಣ ಶೆಟ್ಟಿ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee, Editor: S. Y.